ಪ್ರಕಾಶಕರು
...ಣ ಸಾಹಿತ್ಯ ಕಾರ್ಯಾಲಯ
ಬೆಂಗಳೂರು-೨

...೯೫೯ ಬೆಲೆ ರೂ ೧-೫೦

ಕೆಳದಿಯ ರಾಣಿ ಚೆನ್ನಮ್ಮಾಜಿ

ಲೇಖಕರು

ಪಂಡಿತೆ ಸೀತಮ್ಮ ಬೇಲಿ

ಪ್ರಕಾಶಕರು

ಶರಣ ಸಾಹಿತ್ಯ ಕಾರ್ಯಾಲಯ

ಬೆಂಗಳೂರು-೨

೧೯೫೯ ಬೆಲೆ ರೂ೧-೫೦

ಪ್ರಥಮ ಮುದ್ರಣ ೫೦೦ ಪ್ರತಿಗಳು

ಮುದ್ರಕರು :

ಸ್ವತಂತ್ರ ಕರ್ಣಾಟಕ ಮುದ್ರಣಾಲಯ
T. 92, ರಂಗಸ್ವಾಮಿ ಗುಡಿಬೀದಿ
ಬಳೇಪೇಟೆ, **ಬೆಂಗಳೂರು**-2.

ಪ್ರಕಾಶಕರ ಮಾತುಗಳು

'ಕೆಳದಿಯ ರಾಣಿ ಚೆನ್ನಮ್ಮಾಜಿ' ಎಂಬ ಈ ಗ್ರಂಥವನ್ನು ಶ್ರೀಮತಿ ಪಂಡಿತೆ ಸೀತಮ್ಮ ಬೇಲಿ ಅವರು ಬರೆದಿದ್ದಾರೆ. ಕನ್ನಡ ಜನತೆಗೂ ವಿಶೇಷವಾಗಿ ಕನ್ನಡ ಮಹಿಳೆಯರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತ ವೆನಿಸುವ ಈ ಗ್ರಂಥವನ್ನು ನಮ್ಮ 'ಶರಣ ಸಾಹಿತ್ಯ ಕಾರ್ಯಾಲಯ'ದಿಂದ ಪ್ರಕಟಿಸಿದ್ದೇವೆ.

ಈ ಗ್ರಂಥಕ್ಕೆ ಸಂಬಂಧಪಟ್ಟ ವೀರ ಶಿವಪ್ಪನಾಯಕ ಮತ್ತು ಇಕ್ಕೇರಿಯಲ್ಲಿನ ಅಘೋರೇಶ್ವರ ದೇವಾಲಯ ಎಂಬೆರಡು ಚಿತ್ರಗಳನ್ನು ಮಾತ್ರ ಈಗ ಪ್ರಕಟಿಸಿದ್ದೇವೆ. ಈ ಗ್ರಂಥಕ್ಕೆ ಸಂಬಂಧ ಪಟ್ಟ ರಾಣಿ ಚೆನ್ನಮ್ಮಾಜಿ, ಕೆಳದಿ ರಾಮೇಶ್ವರ ದೇವಾಲಯ, ನಗರದ ನೀಲಕಂಠೇಶ್ವರ ದೇವಾಲಯ, ಕೊಲ್ಲೂರು ಮೂಕಾಂಬಿಕಾ ದೇವಾಲಯ, ಭುವನಗಿರಿದುರ್ಗ, ಬಿದನೂರು ಅರಮನೆ, ಚನ್ನಗಿರಿ ಮೊದಲಾದ ಚಿತ್ರಗಳನ್ನು ಮುಂದಿನ ಮುದ್ರಣದಲ್ಲಿ ಸೇರಿಸಲು ಸಂಕಲ್ಪಿಸಿದ್ದೇವೆ. ಅವಸರದಲ್ಲಿ ಈ ಗ್ರಂಥ ಪ್ರಕಟವಾದುದರಿಂದ ಆ ಚಿತ್ರಗಳನ್ನು ಈ ಸಲವೇ ಸೇರಿಸಲಾಗಲಿಲ್ಲ. ಕನ್ನಡನಾಡು ನುಡಿಗಳಿಗೆ ಸಂಬಂಧಪಟ್ಟ ಈ ಗ್ರಂಥವು ವಿಶಾಲ ಮೈಸೂರಿನ ಜನತೆಗೆ ಸಂತೋಷ, ಹಾಗೂ ಸ್ಫೂರ್ತಿದಾಯಕವೆಂದು ನೆರೆನಂಬಿದ್ದೇವೆ.

ಸುಮಾರು ಇಪ್ಪತ್ತು ವರ್ಷಗಳಿಂದ ನಮ್ಮ ಗ್ರಂಥಗಳಿಗೆ ಪ್ರೋತ್ಸಾಹವಿತ್ತಂತೆಯೇ ಈ ಗ್ರಂಥಕ್ಕೂ ಮಹಾಜನರು ಬೆಂಬಲ ವಿತ್ತಾರೆಂದು ನಂಬಿರುತ್ತೇವೆ.

ವೈ. ಎಸ್. ರಾಮರಾವ್
ವ್ಯವಸ್ಥಾಪಕ
'ಶರಣ ಸಾಹಿತ್ಯ ಕಾರ್ಯಾಲಯ'

ತಾ|| ೧೧—೧—೧೯೫೪
ಬೆಂಗಳೂರು–೨

ವಿಷಯ ಸೂಚಿಕೆ

ಬಿನ್ನಹ

ಕೆಳದಿಯ ರಾಣಿ ಚೆನ್ನಮ್ಮಾಜಿ ಎಂಬ ಗ್ರಂಥವನ್ನು ಯಥಾಮತಿಯಾಗಿ ವಿರಚಿಸಿ ನಮ್ಮ ಕನ್ನಡ ನಾಡಿನ ಸೋದರೀ ಸೋದರರ ಅವಗಾಹನೆಗೆ ತಂದಿದ್ದೇನೆ. ನಾನು ಈ ಗ್ರಂಥದ ಹಸ್ತಪ್ರತಿಯನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ನಮ್ಮ ಮನೆತನಕ್ಕೆ ಚಿರಪರಿಚಿತರೂ, ನನಗೆ ಗುರುಸ್ಥಾನಾಪನ್ನರೂ ಆಗಿರುವ ಆಸ್ಥಾನ ವಿದ್ವಾನ್, ಪಂಡಿತ ರತ್ನಂ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಲ್ಲಿ ತೋರಿಸಿದಾಗ ಅವರು ಇದರಲ್ಲಿದ್ದ ಅನೇಕ ಬಗೆಯ ದೋಷಗಳನ್ನು ಸರಿಪಡಿಸಿ ಕೊಟ್ಟು, ಇದರ ಗುಣದೋಷ ವಿಮರ್ಶೆಯನ್ನು ನನಗೆ ತಿಳಿಸಿಕೊಟ್ಟು ಉಪಕಾರ ಮಾಡಿರುತ್ತಾರೆ. ಮುಖ್ಯವಾಗಿ ನೂತನವಾಗಿ ಗ್ರಂಥರಚನೆಗೆ ತೊಡಗಿದ ನನಗೆ ಶ್ರೀ ಶಾಸ್ತ್ರಿಗಳು ಈ ರೀತಿ ಮಾರ್ಗದರ್ಶನ ಮಾಡಿರುವುದಲ್ಲದೆ ಎಲ್ಲಕ್ಕೂ ಹೆಚ್ಚಾಗಿ ಈ ಗ್ರಂಥಕ್ಕೆ ವಿಚಾರ ಪೂರ್ಣವಾದ ಪ್ರಸ್ತಾವನೆಯನ್ನು ಬರೆದುಕೊಟ್ಟು ನನಗೆ ಮಹೋಪಕಾರ ಮಾಡಿರುತ್ತಾರೆ. ಹಾಗೆಯೇ ಈ ಗ್ರಂಥದ ಗೌರವವನ್ನು ಹೆಚ್ಚಿಸಿದ್ದಾರೆ. ಇದಕ್ಕಾಗಿ ನಾನು ಪೂಜ್ಯರಾದ ಅವರಿಗೆ ಚಿರಋಣಿಯಾಗಿದ್ದೇನೆ.

ಈ ಗ್ರಂಥರಚನೆಗಾಗಿ ನಾನು ಈ ಮುಂದೆ ಹೇಳುವ ಗ್ರಂಥಗಳ ಸಹಾಯವನ್ನು ಪಡೆದಿದ್ದೇನೆ :

೧. ಕೆಳದಿ ನೃಪವಿಜಯ. ೨. ಇಕ್ಕೇರಿ ಅರಸರ ಚರಿತ್ರೆ. ೩. ಮೈಸೂರು ಚರಿತ್ರೆ. ೪. ಕನ್ನಡನಾಡಿನ ಚರಿತ್ರೆ. ೫. ಹೈದರ್ ನಾಮೆ. 6. ಹಯವದನರಾವ್ ಗೆಜಿಟಿಯರ್ಸ್.

ಈ ಮೇಲೆ ಕಂಡ ಎಲ್ಲಾ ಗ್ರಂಥಕರ್ತರನ್ನು ಹೃತ್ಪೂರ್ವಕವಾಗಿ ಕೃತಜ್ಞತೆಯಿಂದ ವಂದಿಸುತ್ತೇನೆ.

ಈ ಗ್ರಂಥದ ಪ್ರಕಟಣೆಯ ಹೊಣೆಗಾರಿಕೆಯನ್ನು ಶರಣ ಸಾಹಿತ್ಯ ಕಾರ್ಯಾಲಯದ ಮಾಲೀಕರು ವಹಿಸಿಕೊಂಡುದ್ದಕ್ಕಾಗಿ ಅವರಿಗೆ ನನ್ನ ಹಾರ್ದಿಕ ವಂದನೆಗಳು.

ಈ ಪುಸ್ತಕವನ್ನು ಆದಷ್ಟು ಬೇಗನೆ ಸುಂದರವಾಗಿ ಮುದ್ರಿಸಿಕೊಟ್ಟ ಸ್ವತಂತ್ರಕರ್ಣಾಟಕ ಮುದ್ರಣಾಲಯದ ವ್ಯವಸ್ಥಾಪಕರಾದ ಶ್ರೀ ವೈ. ಎ. ರಾಮರಾಯರ ಉಪಕಾರವನ್ನು ನಾನು ಸ್ಮರಿಸುತ್ತೇನೆ. ಈ ಗ್ರಂಥಕ್ಕೆ ಅಗತ್ಯವಾದ ಪಡಿಯಚ್ಚುಗಳನ್ನು ಒದಗಿಸಿಕೊಟ್ಟ ಬೆಂಗಳೂರು ಶರಣ ಸಾಹಿತ್ಯ ಕಾರ್ಯಾಲಯದ ವ್ಯವಸ್ಥಾಪಕಗೆ ನನ್ನ ವಂದನೆಗಳು. ಈ ಗ್ರಂಥವನ್ನು ಓದಿ ಸಂತೋಷಿಸಿ ಪ್ರೋತ್ಸಾಹಿಸುವ ವಿಚಾರ ನಮ್ಮ ಕನ್ನಡ ನಾಡಿನ ಸೋದರ ಸೋದರಿಯರಿಗೆ ಸೇರಿದುದು,

ದಿನಾಂಕ ೧೦—೧—೧೯೫೯
ಗವಿಪುರಂ, ಬೆಂಗಳೂರು -೪

ಇಂತು,
ಕನ್ನಡನಾಡಿನ ಓರ್ವ ವಿನಮ್ರ ಭಾಷಾ ಸೇವಕಿ,
ಪಂಡಿತೆ ಸೀತಮ್ಮ ಬೇಲಿ.

ಪ್ರಸ್ತಾವನೆ

'ಕೆಳದಿಯ ರಾಣಿ ಚೆನ್ನಮ್ಮಾಜಿ' ಎಂಬ ಈ ಪುಸ್ತಕವನ್ನು ಓದಿ ನೋಡಿ ನನಗೆ ತುಂಬಾ ಸಂತೋಷವಾಗಿದೆ. ಇದು ಕರ್ಣಾಟಕದ ಮಲೆನಾಡಿನಲ್ಲಿ ಆಗಿಹೋದ ಕೆಳದಿಯ ರಾಜ್ಯ ಚರಿತ್ರೆಯಲ್ಲಿ ವಿಖ್ಯಾತಳಾದ ರಾಣಿ ಚೆನ್ನಮ್ಮಾಜಿಯ ಜೀವನಚರಿತ್ರೆಯನ್ನು ಕುರಿತುದಾಗಿದೆ. ಕಥಾನಾಯಕಿಯು ಉಜ್ವಲವಾದ ದೇಶಭಕ್ತಿಯಿಂದಲೂ, ಉದಾರವಾದ ರಾಜನೀತಿಯಿಂದಲೂ, ಪರಿಶುದ್ಧವಾದ ಜೀವನಚರಿತ್ರೆಯಿಂದಲೂ, ಸ್ತೋತ್ರಾರ್ಹವಾದ ಧೈರ್ಯಸ್ಥೈರ್ಯಾದಿ ಸದ್ಗುಣಸಂಪತ್ತಿನಿಂದಲೂ, ಇತಿಹಾಸ ಪ್ರಸಿದ್ಧವಾದ ವಂಶಗೌರವದಿಂದಲೂ ಕೂಡಿದವಳು. ಆದುದರಿಂದ ಈ ಗ್ರಂಥವು ಆಬಾಲವೃದ್ಧರಾಗಿ ಎಲ್ಲರಿಂದಲೂ ಓದಲು ಅರ್ಹವಾಗಿದೆ. ಆದರಲ್ಲಿಯೂ ಕರ್ಣಾಟಕ ರಾಜ್ಯೋದಯವಾದ ಇಂದಿನ ದಿವಸಗಳಲ್ಲಿ ಉದಾತ್ತ ಮತ್ತು ಉಜ್ವಲ ಗುಣಗಳಿಂದ ಪರಿಶೋಭಿಸುವ ಕನ್ನಡ ನಾಡಿನ ಚರಿತ್ರೆಗೆ ಸಂಬಂಧಪಟ್ಟ ಕನ್ನಡ ನಾರೀಮಣಿಯೊಬ್ಬಳ ಚರಿತ್ರೆಯು ಸ್ವಾಭಿಮಾನಿಗಳಾದ ಕನ್ನಡಿಗರೆಲ್ಲರ ವಾಚನಕ್ಕೆ ನಿಜಕ್ಕೂ ಅರ್ಹವಾಗಿದೆಯೆಂದು ನಾನು ಭಾವಿಸುತ್ತೇನೆ.

ಕೆಳದಿಯರಾಣಿ ಚೆನ್ನಮ್ಮಾಜಿಯನ್ನು ಕುರಿತುದಿಂಗ ಈ ಪುಸ್ತಕದಲ್ಲಿ ಕ್ರಿ. ಶ. ೧೪೫೦ರಿಂದ ೧೭೬೩ರವರೆಗೆ ನಡೆದುಬಂದ ಕೆಳದಿಯ ರಾಜ್ಯದ ಚರಿತ್ರೆಯನ್ನು ಕೂಡ ವಿಹಂಗಮದೃಷ್ಟಿಯಿಂದ ನೋಡಲಾಗಿದೆ. ಕೆಳದಿಯ ರಾಜಮನೆತನದಲ್ಲಿ ಪ್ರಖ್ಯಾತರಾದ ಸದಾಶಿವನಾಯಕ, ವೆಂಕಟಪ್ಪನಾಯಕ, ದೊಡ್ಡಸಂಕಣ್ಣನಾಯಕ, ಶಿವಪ್ಪನಾಯಕ, ಬಸವರಾಜ, ಬೂದಿಬಸವಪ್ಪನಾಯಕ, ವೀರಮ್ಮಾಜಿ ಮೊದಲಾದ ಪ್ರಖ್ಯಾತ ರಾಜರಾಣಿಯರ ಚರಿತ್ರೆಯನ್ನೆಲ್ಲಾ ಇಲ್ಲಿ ಸಂಗ್ರಹಿಸಿ ಬರೆಯಲಾಗಿದೆ. ಆದುದರಿಂದ ಈ ಪುಸ್ತಕಾವಲೋಕನದಿಂದ ಸಮಗ್ರವಾಗಿ ಕೆಳದಿಯ ರಾಜರ ಚರಿತ್ರೆಯನ್ನು ಸಿಂಹಾವಲೋಕನ ದೃಷ್ಟಿಯಿಂದ ತಿಳಿಯಲು ಅನುಕೂಲವಾಗಿದೆ.

ಕರ್ಣಾಟಕದ ಚರಿತ್ರೆಯಲ್ಲಿ ಕೆಳದಿಯ ರಾಜರಿಗೆ ಒಂದು ಸ್ವತಂತ್ರವಾದ ಅಧ್ಯಾಯವು ಮೀಸಲಾಗಲು ತಕ್ಕ ಕಾರಣಗಳಿವೆ. ಈ ರಾಜರು—

೧) ಸಂಪೂರ್ಣವಾಗಿ ದೇವರ ಅನುಗ್ರಹಕ್ಕೆ ಪಾತ್ರರಾಗಿ ಧರ್ಮಬುದ್ಧಿ ಸರ್ವಸಮತೆ, ನ್ಯಾಯನಿಷ್ಠೆ, ವಿದ್ಯಾಭಿಮಾನ, ದೇಶಪ್ರೇಮ ಮುಂತಾದ ಉದಾತ್ತ ಗುಣಗಳಿಂದ ಕೂಡಿ ರಾಜ್ಯಭಾರ ಮಾಡಿದ್ದಾರೆ.

೨) ಈ ಮನೆತನದ ರಾಜರು ಹಿಂದೂಧರ್ಮ ಸಾಹಿತ್ಯ ಸಂಸ್ಕೃತಿಗಳ ರಕ್ಷಣೆಗಾಗಿ ದಕ್ಷಿಣ ಭಾರತದಲ್ಲಿ ಎರಡೂವರೆ ಶತಮಾನಗಳ ಕಾಲ ಶ್ರಮಿಸಿದ ವಿಜಯನಗರದ ಸಾಮ್ರಾಜ್ಯದ ಪರಂಪರೆಯಲ್ಲಿ ತನ್ನ ರಕ್ಷಣೆಗೇ ಅಲ್ಲದೆ ಆ ಸಾಮ್ರಾಜ್ಯದ ರಕ್ಷಣೆಗಾಗಿಯೂ ಕೂಡ ಮೊದಲಿಂದ ಕಡೆಯುವರೆಗೂ ಹೋರಾಡಿದ್ದಾರೆ.

೩) ಕೆಳದಿಯ ರಾಜರಲ್ಲಿ ವಿಖ್ಯಾತನಾದ ವೀರಶಿವಪ್ಪನಾಯಕ, ರಾಣಿ ಚೆನ್ನಮ್ಮಾಜಿ, ವಿದ್ವತ್ಪ್ರಭು ಬಸವರಾಜ ಇವರು ಯಾವ ದೇಶಕ್ಕೂ ಯಾವ ಕಾಲಕ್ಕೂ ಅಲಂಕಾರಭೂತರಾದ ಆಡಳಿತಗಾರರೆನಿಸಿದ್ದಾರೆ. 'ಶಿವಪ್ಪನಾಯಕನ ಶಿಸ್ತು' ಇಂದು ನಮ್ಮ ದೇಶದಲ್ಲಿ ಮನೆಯ ಮಾತಾಗಿದೆ. ಈ ನಾಯಕನು ವಿಜಯನಗರ ಸಾಮ್ರಾಜ್ಯದ ಪುನರುದ್ಧಾರಕ್ಕಾಗಿ ಮಾಡಿದ ಸಾಹಸ ಕಾರ್ಯಗಳು ಇವನ ಉದಾತ್ತಗುಣಗಳಿಗೆ ಸಾಕ್ಷಿಯಾಗಿವೆ. ಪ್ರಬಲ ಶತ್ರುವಾದ ಔರಂಗಜೇಬನಿಂದ ಶಿವಾಜಿಯ ಮಗ ರಾಜಾರಾಮನನ್ನು ರಾಣಿ ಚೆನ್ನಮ್ಮಾಜಿಯು ಧೈರ್ಯದಿಂದ ರಕ್ಷಿಸಿದುದು ಓದಿ ಮರೆಯುವ ಸಂಗತಿಯಲ್ಲ.

೪) ಶಿವತತ್ವ, ರತ್ನಾಕರ, ಸುಭಾಷಿತ ಸುರದ್ರುಮ ಮೊದಲಾದ ಗ್ರಂಥಗಳನ್ನು ಬಸವರಾಜನೂ, ಕರ್ಣಾಟಕ ಶಿವಗೀತೆ, ಕನ್ನಡ ಗೀತ ಗೌರೀವರ, ಅಶ್ವಶಾಸ್ತ್ರ ಮೊದಲಾದ ಗ್ರಂಥಗಳನ್ನು ವೆಂಕಟಪ್ಪನಾಯಕನೂ, ಧರ್ಮಶಿರೋಮಣಿ, ಆಚಾರಕೌಸ್ತುಭ, ಕ್ರಿಯಾಸಾರ ವ್ಯಾಖ್ಯಾನ, ಆನಂದ ಚಂದ್ರಿಕೆ ಮೊದಲಾದ ಮಹಾಗ್ರಂಥಗಳನ್ನು ಬೂದಿ ಬಸವಪ್ಪ ನಾಯಕನೂ ತಮ್ಮ ಆಸ್ಥಾನ ಪಂಡಿತರಿಂದ ಬರೆಸಿದುದು ಯಾರೂ ಉಪೇಕ್ಷಿಸುವ ವಿಷಯವಲ್ಲ. ಈ ದೃಷ್ಟಿಯಿಂದ ಕೆಳದಿಯ ರಾಜರು ಕನ್ನಡ ಮತ್ತು

ಸಂಸ್ಕೃತ ಸಾಹಿತ್ಯಕ್ಕೆ ಮಹೋಪಕಾರಿಗಳೆಂದು ನಾವು ಭಾವಿಸಬೇಕು. ಈ ರಾಜರ ಶ್ರೇಷ್ಠ ಗುಣಗಳಿಗೆ ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು ಮತ್ತು ಕಾರವಾರ ಜಿಲ್ಲೆಗಳಲ್ಲಿ ಇಂದಿಗೂ ಕಂಗೊಳಿಸುವ ಸಾವಿರಾರು ಶಿಲಾಶಾಸನಗಳೂ, ವೀರಗಲ್ಲುಗಳೂ ನಮಗೆ ನಿದರ್ಶನವಾಗಿವೆ.

೫) ಕೆಳದಿ ವೀರಭದ್ರೇಶ್ವರ, ಇಕ್ಕೇರಿಯ ಅಘೋರೇಶ್ವರ, ಬಿದನೂರಿನ ನೀಲಕಂಠೇಶ್ವರ, ಕೊಲ್ಲೂರು ಮೂಕಾಂಬಿಕಾ ಮೊದಲಾದ ದೇವಾಲಯಗಳನ್ನು ನಿರ್ಮಿಸಿ, ಭುವನಗಿರಿದುರ್ಗ, ಬಸವರಾಜದುರ್ಗ, ಚೆನ್ನಗಿರಿ ಕೋಟೆ ಮೊದಲಾದ ಭೂ ದುರ್ಗಗಳನ್ನು ರಚಿಸಿ, ಇವರು ಶಿಲ್ಪಕಲಾ ಪ್ರಪಂಚಕ್ಕೆ ಮಹೋಪಕಾರ ಮಾಡಿದ್ದಾರೆ ಹಿಂದೆ ಕೆಳದಿಯ ಅರಸರ ಇಂದು ಮೈಸೂರಿನ ಅರಸರ ಲಾಂಛನವೆನಿಸಿರುವ ಗಂಡಭೇರುಂಡವು ಕೆಳದಿಯ ವೀರಭದ್ರ ದೇವಾಲಯದಲ್ಲಿ ಚಿತ್ರಿಸಲ್ಪಟ್ಟಿದೆ. ಹೀಗೆ ಕಲಾದೃಷ್ಟಿಯಿಂದ ಕೂಡ ಕೆಳದಿಯ ರಾಜರು ಕನ್ನಡಿಗರಿಗೆ ಸ್ಮರಣಾರ್ಹರಾಗಿದ್ದಾರೆ.

೬) ಕೆಳದಿಯ ರಾಜರು ದೈವಭಕ್ತಿಸಂಪನ್ನರೂ, ಧರ್ಮಶ್ರದ್ಧೆಯುಳ್ಳವರೂ ಎಂಬುದಕ್ಕೆ ಚರಿತ್ರೆಯಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಅವರು ಪೂರ್ವೋಕ್ತ ದೇವಾಲಯಗಳ ನಿರ್ಮಾಣದಿಂದಲೇ ಅಲ್ಲದೆ ಶೃಂಗೇರಿಮಠ, ಕೃಷ್ಣಾನಂದ ಸ್ವಾಮಿಗಳ ಮಠ, ಹಲವಾರು ಜಂಗಮರ ಮಠಗಳು ಇವುಗಳಿಗೆಲ್ಲಾ ಉದಾರವಾದ ದತ್ತಿಗಳನ್ನು ಕೊಟ್ಟು ಧರ್ಮಸ್ಥಾಪನೆಗೆ ಕೂಡ ನೆರವಾಗಿದ್ದಾರೆ. ತೀರ್ಥಹಳ್ಳಿ, ಸಾಗರ, ಶಿವರಾಜಪುರ, ಗುರುಪುರ ಮೊದಲಾದ ಹಲವಾರು ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಿದ್ದಾರೆ.

೭) ಯೂರೋಪುಖಂಡದಿಂದ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದು ಗೋವೆ, ಕಾರವಾರ, ಹೊನ್ನಾವರ ಮೊದಲಾದೆಡೆಗಳಲ್ಲಿ ವ್ಯಾಪಾರದ ಕೋಠಿಗಳನ್ನು ಕಟ್ಟಿಕೊಂಡಿದ್ದ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರೇ ಮೊದಲಾದ ಪಾಶ್ಚಾತ್ಯರ ಮೇಲೂ ಇವರು ಬಹುಕಾಲ ತಮ್ಮ ಹತೋಟಿ ಹೊಂದಿದ್ದರೆಂಬ ಸಂಗತಿ ಗಮನಾರ್ಹವಾಗಿದೆ. ಉತ್ತರ ದಿಕ್ಕಿನಿಂದ ಮೇಲಿಂದ ಮೇಲೆ ಬಂದು ದಾಳಿ ಮಾಡಿದ ಮೊಗಲಾಯರು, ಮರಾಠರು,

ಬಿಜಾಪುರದವರು ಇವರ ಮೇಲೆಲ್ಲಾ ಇವರು ನಡೆಸಿದ ಯುದ್ಧಗಳು ಇವ
ಪರಾಕ್ರಮಕ್ಕೆ ಒಳ್ಳೆಯ ನಿದರ್ಶನಗಳಾಗಿವೆ.

೮) ಕೆಳದಿಯ ಅರಸರಲ್ಲಿ ರಾಣಿ ಚೆನ್ನಮ್ಮಾಜಿಯು ರತ್ನಪ್ರಾಯಳು
ಅನೇಕ ಗ್ರಂಥಕಾರರ ಟೀಕೆಗೆ ಒಳಗಾಗಿರುವ ರಾಣಿ ವೀರಮ್ಮಾಜಿ ಕೂಡ
ಕಡೆಯವರೆಗೆ ಶತ್ರುಗಳ ಕೂಡ ಹೋರಾಡಿದಳೆಂಬ ವಿಷಯ ಮರೆಯ
ತಕ್ಕದ್ದಲ್ಲ. ಶಿವಪ್ಪನಾಯಕ ಮೊದಲಾದ ಅನೇಕ ರಾಜರ ಪತ್ನಿಯರ
ತಮ್ಮ ಗಂಡಂದಿರ ಸಮಾಧಿಯಲ್ಲೇ ಜೀವಸಮಾಧಿಯಾದರೆಂಬ ವಾರ್ತೆ
ಪ್ರಕೃತ ಗ್ರಂಥಕಾರರು ಹೇಳುವಂತೆ ರಾಜಪುತ್ರ ಸ್ತ್ರೀಯರ 'ಜೋಹರ್'
ಪದ್ಧತಿಗೆ ಸಮವಾದುದಾಗಿದೆ. ಈ ವೀರಸ್ತ್ರೀಯರ ಪಾತಿವ್ರತ್ಯದಿಂದ
ಕೆಳದಿಯ ರಾಜಮನೆತನದ ಗೌರವವು ಶತಾಧಿಕವಾಗಿ ಹೆಚ್ಚಿದೆ.

ಈ ಮೇಲೆ ಕಂಡಂತೆ ಅನೇಕ ಉತ್ತಮ ಗುಣಗಳಿಂದ ಕೂಡಿದ
ಕೆಳದಿಯ ರಾಜರ ಚರಿತ್ರೆಯನ್ನು ಅದರಲ್ಲೂ ನಾರೀರತ್ನವೆನಿಸಿದ ರಾಣಿ
ಚೆನ್ನಮ್ಮಾಜಿಯ ಚರಿತ್ರೆಯನ್ನು ಸಂಗ್ರಹವಾಗಿಯೂ, ಸುಂದರವಾಗಿಯೂ
ಬರೆದ ಈ ಗ್ರಂಥಕಾರರು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ
ಇತ್ತೀಚೆಗೆ ಕನ್ನಡ ಲೇಖಕರು ಕರ್ಣಾಟಕ ಚರಿತ್ರೆಯಿಂದಲೇ ಕಥಾವಸ್ತು
ವನ್ನು ಸಂಗ್ರಹಿಸಿ ಚರಿತ್ರೆ, ಕಾದಂಬರಿ, ನಾಟಕಗಳನ್ನು ಬರೆಯುತ್ತಿರುವುದು
ಸಂತೋಷಪ್ರದವಾಗಿದೆ. ನೃಪತುಂಗ, ಕೃಷ್ಣದೇವರಾಯ, ವಿದ್ಯಾರಣ್ಯರು,
ಬಸವೇಶ್ವರ, ಅಕ್ಕಮಹಾದೇವಿ, ಪ್ರಭುದೇವರು, ಪುಲಿಕೇಶಿ, ವಿಷ್ಣುವರ್ಧನ,
ಚಿಕ್ಕದೇವರಾಜ, ಕೊಡಗಿನ ವೀರರಾಜ, ಕೆಳದಿಯ ಶಿವಪ್ಪನಾಯಕ,
ಇಮ್ಮಡಿ ದೇವರಾಯ ಮೊದಲಾದವರನ್ನು ಕುರಿತು ಕನ್ನಡದಲ್ಲಿ ಗ್ರಂಥಗಳು
ರಚನೆಯಾಗುವುದು ನಮ್ಮ ನಾಡಿನ ಪುಣ್ಯವೆಂದು ನಾನು ಭಾವಿಸುತ್ತೇನೆ.
ಆದರೆ ಇಂತಹ ಗ್ರಂಥರಚನೆಯಿಂದ ವಾಚಕರ ಮನಸ್ಸಿಗೆ ನೋವಾಗದ,
ದೇಶಬಾಂಧವರ ಮನಸ್ಸನ್ನು ಉದ್ರೇಕಿಸದಹಾಗೆ ಗ್ರಂಥರಚನೆಯನ್ನು ಮಾಡು
ವುದು ಬರೆಯುವವರ ವಿವೇಕವನ್ನೂ, ಜಾಣ್ಮೆಯನ್ನೂ ಅವಲಂಬಿಸಿರುತ್ತದೆ.

ಶ್ರೀಮತಿ ಸೀತಮ್ಮಬೇಲಿಯವರು ರಾಣಿ ಚೆನ್ನಮ್ಮಾಜಿಯ ಉಜ್ವಲ
ಗುಣಗಳನ್ನು ಹೃದಯಂಗಮವಾಗಿ ಚಿತ್ರಿಸಿ ಅದೇ ವಂಶದ ರಾಣಿ

ವೀರಮ್ಮಾಜಿಯ ಚರಿತ್ರೆಯನ್ನು ಇತಿಹಾಸ ಸಮ್ಮತವಾಗಿ ಬರೆದಿರುವುದು ಅವರ ವಿವೇಕಕ್ಕೆ ನಿದರ್ಶನವಾಗಿದೆ. ಮಹಾತಂತ್ರಿಯಾದ ಹೈದರನು ಕೆಳದಿಯ ರಾಜ್ಯಾಪಹರಣದ ನಿಮಿತ್ತದಿಂದ ಕೆಳದಿಯ ರಾಣಿ ವೀರಮ್ಮಾಜಿಯ ಮೇಲೆ ಹರಡಿಸಿದ ಕೆಟ್ಟ ಸುದ್ದಿಗಳು ಕೆಳದಿ ನೃಪವಿಜಯ ಮೊದಲಾದ ಗ್ರಂಥಗಳ ಅವಲೋಕನದಿಂದ ನಿರಾಧಾರವೆನಿಸುತ್ತವೆ. ಒಂದ ವೇಳೆ ಇಂತಹ ವಿಷಯಗಳು ನಿಜವಾದರೂ ಇತರರ ಮನಸ್ಸಿನ ಮೇಲೆ ನೋವನ್ನುಂಟು ಮಾಡುವ ಸ್ತ್ರೀ ಜಾತಿಗೆ ಅವಮಾನವೆನಿಸುವ ಸಂಗತಿಗಳನ್ನು ಬರೆಯುವುದು ಸಮಕಾಲೀನ ವಿದ್ವಾಂಸರಿಗೆ ಸಾಧುವಾದ ಕಾರ್ಯವಲ್ಲ. ಶ್ರೀಮತಿ ಬೇಲಿಯವರು ಈ ದೃಷ್ಟಿಯಿಂದ ಅತ್ಯಂತ ದೂರದೃಷ್ಟಿಯಿಂದಲೂ ವಿವೇಕ ದಿಂದಲೂ ಲೋಕಾನುಭವದಿಂದಲೂ ಇತಿಹಾಸ ಸಮ್ಮತವಾದ ರೀತಿ ಯಿಂದಲೂ ರಾಣಿ ಚೆನ್ನಮ್ಮಾಜಿಯ ಚರಿತ್ರೆಯನ್ನು ನಿರೂಪಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆಂದು ಹೇಳಬಯಸುತ್ತೇನೆ. ಹೀಗೆ ಕನ್ನಡನಾಡಿನ ಕಥಾವಸ್ತುವನ್ನು ಸಂಗ್ರಹಿಸಿ ಗ್ರಂಥಗಳನ್ನು ನಾಡಿನ ವಿದ್ವಾಂಸರು ಬರೆಯು ವಂತಾಗಲೆಂದು ನಾನು ಆಶಿಸುತ್ತೇನೆ.

ಈ ಗ್ರಂಥದ ಶೈಲಿ ಸರಳವಾಗಿದೆ. ಭಾಷೆ ಶುದ್ಧವಾಗಿದೆ. ಕಥಾವಸ್ತು ಉಜ್ವಲವಾಗಿದೆ. ನಿರೂಪಣೆ ಪ್ರತಿಭಾನ್ವಿತವಾಗಿದೆ. ಈ ಗ್ರಂಥಸ್ಥ ವಿಷಯವು ವೀರರಸ ಪ್ರಧಾನವಾಗಿದೆಯೆಂದು ಹೇಳಬಹುದು. ಕನ್ನಡನಾಡಿನ ಚರಿತ್ರೆಗೆ ಸಂಬಂಧಿಸಿದ ಮೈಸೂರಿನ ಮಕ್ಕಳು ಓದಲರ್ಹವಾದ ಒಳ್ಳೆಯ ಚರಿತ್ರೆಯಿಂದ ಕೂಡಿರುವುದರಿಂದ ಈ ಗ್ರಂಥವು ಮೈಸೂರು ರಾಜ್ಯದ ಪೌಢಶಾಲಾ ತರಗತಿಗಳಿಗೆ ಪಠ್ಯ ಪುಸ್ತಕವಾಗಲು ಇದು ಅರ್ಹವಾಗಿದೆ ಯೆಂದು ನಾನು ಅಭಿಪ್ರಾಯಪಡುತ್ತೇನೆ.

ಈ ಗ್ರಂಥರಚನೆಗೆ ಶ್ರೀಮತಿ ಪಂಡಿತೆ ಸೀತಮ್ಮ ಬೇಲಿಯವರು ಕೆಳದಿನೃಪವಿಜಯ, ಕರ್ಣಾಟಕದ ಚರಿತ್ರೆ, ಮೈಸೂರುಚರಿತ್ರೆ ಮೊದಲಾದವು ಗಳಿಂದ ಚೆನ್ನಾಗಿ ವಿಷಯ ಸಂಗ್ರಹ ಮಾಡಿದ್ದಾರೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಲ್ಪಸ್ವಲ್ಪ ಕವಯಿತ್ರಿಯರು ಕಂಗೊಳಿಸಿದರೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗಣ್ಯತೆಯನ್ನು ಪಡೆದ ಮಹಿಳಾ ಸಾಹಿತಿಗಳ ಸಂಖ್ಯೆ ತುಂಬಾ ಕಡಿಮೆಯೆಂದು ಹೇಳಿದರೆ ಯಾರೂ ತಪ್ಪಾಗಿ ಭಾವಿಸಲಾರರೆಂದು

ನಂಬುತ್ತೇನೆ. ನನಗೆ ಚಿರಪರಿಚಿತರೂ, ಪ್ರಕೃತ ಬೆಂಗಳೂರು ಮಲ್ಲೇಶ್ವರಂ ಬಾಲಿಕಾ ಪ್ರೌಢಶಾಲೆಯ ಕನ್ನಡ ಅಧ್ಯಾಪಕರೂ ಆಗಿರುವ ಶ್ರೀಮತಿ ಪಂಡಿತೆ ಸೀತಮ್ಮ ಬೇಲಿಯವರು ತಮ್ಮ ಇಡೀ ಜೀವಮಾನವನ್ನು ಸಾಹಿತ್ಯ ಸೇವೆಗೆ ಮತ್ತು ಮಕ್ಕಳ ಪಾಠ ಬೋಧನೆಗೆ ಮೀಸಲು ಮಾಡಿದ್ದಾರೆ. ಇವರು ಹಲವಾರು ಕವಿತೆಗಳನ್ನೂ, ಲೇಖನಗಳನ್ನೂ ಬರೆದಿರುವರು. ಆದರೆ ಇವರು ಗ್ರಂಥವನ್ನು ಬರೆದುದು ಇದೇ ಮೊದಲು ಎಂದು ಕಾಣುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಈ ಗ್ರಂಥವು ಇತ್ತೀಚಿನ ಕನ್ನಡ ಕೃತಿಗಳಲ್ಲಿ ಉತ್ತಮ ವರ್ಗಕ್ಕೆ ಸೇರಿದೆ. ಇದು ನಿಜವಾಗಿಯೂ ಒಂದು ಜೀವನ ಚರಿತ್ರೆ. ಆದರೆ ಇದರಲ್ಲಿ ಅಲ್ಲಲ್ಲಿ ಜನಪ್ರಿಯ ಕಾದಂಬರಿಯ ಶೈಲಿಯನ್ನು ಕೂಡ ನಾವು ಓದಬಹುದು. ನಾಡಿನ ಮಕ್ಕಳಿಗೂ ಮಹಿಳೆಯರಿಗೂ ಮಹಾಜನರಿಗೂ ಉಪಯುಕ್ತವಾದ ಹಲವಾರು ಸಂಗತಿಗಳನ್ನು ಗ್ರಂಥ ಲೇಖಕರು ಚಮತ್ಕಾರ ವಾಗಿ ಬೋಧಪ್ರದವಾಗಿ ನಿರೂಪಿಸಿರ ತ್ತಾರೆ. ಈ ಗ್ರಂಥಾವಲೋಕನದಿಂದ ಓದುಗರ ಮನಸ್ಸಿನ ಮೇಲೆ ದೇಶಾಭಿಮಾನದ ಸ್ಫೂರ್ತಿಯೂ, ಒಳ್ಳೆಯ ಮಾನಸಿಕ ಪರಿಣಾಮವೂ ಉಂಟಾಗುವುದೆಂದು ನಾನು ನನ್ನ ಅನುಭವದಿಂದ ಹೇಳಬಲ್ಲೆನು.

ಇಂತಹ ಒಳ್ಳೆಯ ಸಾಹಿತ್ಯಕೃತಿಯನ್ನು ವಿರಚಿಸಿ ತಕ್ಕಷ್ಟು ಚಿತ್ರಗಳ ಸಹಿತ ಪ್ರಕಟಿಸಿ ಕನ್ನಡಿಗರ ಕೈಗೆ ಕೊಟ್ಟುದಕ್ಕಾಗಿ ಈ ಗ್ರಂಥಕರ್ತೃಗಳಾದ ಶ್ರೀಮತಿ ಸೀತಮ್ಮ ಬೇಲಿಯವರಿಗೆ ನಾನು ಧನ್ಯವಾದಗಳನ್ನು ಸಮರ್ಪಿಸು ತ್ತೇನೆ. ಅವರ ಈ ಬಗೆಯ ಉತ್ಸಾಹವು ಇನ್ನೂ ಹೆಚ್ಚಿ ಅವರು ಇಂತಹ ಹಲವಾರು ಕೃತಿಗಳನ್ನು ರಚಿಸುವಂತೆ ಶ್ರೀ ಭುವನೇಶ್ವರಿಯು ಅವರನ್ನು ಅನುಗ್ರಹಿಸಲೆಂದು ಮನಸಾರ ಹಾರೈಸುತ್ತೇನೆ.

ಇಂತು,


ಬಿ. ಶಿವಮೂರ್ತಿಶಾಸ್ತ್ರೀ

ಅಧ್ಯಕ್ಷ

ಕನ್ನಡ ಸಾಹಿತ್ಯ ಪರಿಷತ್ತು.

ದಿನಾಂಕ ೧೦—೧—೧೯೫೫

ಬೆಂಗಳೂರು—೨



ಶಿವಮೊಗ್ಗಜಿಲ್ಲಾ ಇಕ್ಕೇರಿಯಲ್ಲಿರುವ
ಶ್ರೀ ಅಘೋರೇಶ್ವರ ದೇವಾಲಯ



ಕೆಳದಿಯ ರಾಜ ವೀರ ಶಿವಪ್ಪನಾಯಕ

೧. ಹಿರಿಯ ಸೋಮಶೇಖರ ರಾಯ

ಅಂದು ಬಿದನೂರಿನಲ್ಲಿ ಮಹಾ ಸಡಗರ. ಮನೆಮನೆಗಳೂ, ಕೇರಿ ಕೇರಿಗಳೂ ಅಂದಚಂದವಾಗಿ ಸಿಂಗರಿಸಲ್ಪಟ್ಟಿವೆ. ರಾಜ್ಯದ ಪ್ರಮುಖ ಜನರೂ, ಮುಖ್ಯಾಧಿಕಾರಿಗಳೂ, ಸೈನಿಕಮುಖಂಡರೂ ಬಿದನೂರಿನಲ್ಲಿ ಸೇರಿದ್ದಾರೆ. ರಾಜರ ಮನೆದೇವತೆಯಾಗಿ ಚಿನ್ನದ ಗೋಪುರದಿಂದ ಕಂಗೊಳಿಸುವ ನೀಲಕಂಠೇಶ್ವರ ದೇವಾಲಯದಲ್ಲಿ ಮಂಗಳ ವಾದ್ಯಗಳು ಮೊಳಗುತ್ತಿವೆ. ಗುಡಿಯಲ್ಲಿ ವೇದಘೋಷಗಳಾಗುತ್ತಿವೆ. ಊರಿಗೆ ಊರೇ ಅಂದು ದೇವಾಲಯಕ್ಕೆ ಬಂದು ಶ್ರೀ ಸ್ವಾಮಿಯ ಸಂದರ್ಶನಮಾಡಿ ತೀರ್ಥಪ್ರಸಾದವನ್ನು ಸ್ವೀಕರಿಸುತ್ತಿದಾರೆ. ರಾಜ್ಯದ ಪ್ರಮುಖರು ಪರಮೇಶ್ವರನ ಸನ್ನಿಧಿಗೆ ಬಂದು ತಮ್ಮ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದಾರೆ. ಈ ರೀತಿ ಅಂದು ಬಿದನೂರಿನಲ್ಲಿ ಎಲ್ಲೆಡೆಯಲ್ಲೂ ಮಹಾಸಂಭ್ರಮ, ಮಹಾಉತ್ಸಾಹಗಳು ಕಾಣಬರುತ್ತಿವೆ.

ಹೆಣ್ಣುಮಕ್ಕಳು ಪಟ್ಟೆಪೀತಾಂಬರವನ್ನುಟ್ಟು, ತಮ್ಮ ಮುಡಿಯಲ್ಲಿ ಮುಡಿದಿರುವ ಪುಷ್ಪಗಳ ಸೌರಭವನ್ನು ಎಲ್ಲೆಡೆಗಳಲ್ಲೂ ಪಸರಿಸುತ್ತಾ ಸಡಗರದಿಂದ ಅರಮನೆಯ ಕಡೆಗೆ ಹೋಗುತ್ತಿದಾರೆ. ಊರಿನ ಪ್ರಮುಖರೂ, ದೇಶದ ಹಿರಿಯರೂ, ಎಲ್ಲರೂ ಅರಮನೆಯ ಕಡೆಗೆ ಬೇಗ ಬೇಗ ಧಾವಿಸುತ್ತಿದಾರೆ. ಅರಮನೆಯ ಹೊರಭಾಗದಲ್ಲಿ ಸೈನಿಕರು ಸಾಲುಸಾಲಾಗಿ ನಿಂತಿದಾರೆ. ಆನೆಯ ಸಾಲು ಬಂದವರನ್ನು ಮೊದಲು ಎದುರುಗೊಳ್ಳುತ್ತಿದೆ. ಗಜರಾಜನ ಮೈಮೇಲೆ ಬಣ್ಣಬಣ್ಣದ ಬಟ್ಟೆಗಳು ಕಂಗೊಳಿಸುತ್ತಿವೆ. ಕೈಯಲ್ಲಿ ಅಂಕುಶ ಧರಿಸಿರುವ ಮಾವಟಿಗನೂ ಅಂದು ಹೊಸ ಬಟ್ಟೆಯಿಂದ ಪರಿಶೋಭಿಸುತ್ತಿದ್ದಾನೆ. ಆನೆಯ ಸಾಲಿನ ಹಿಂದೆ ಅಲಂಕೃತ ಕುದುರೆ ಸೈನ್ಯ ಸಾಲಾಗಿ ನಿಂತಿದೆ. ಕುದುರೆಗಳ ಸವಾರರೂ ನೂತನವಸ್ತ್ರಾಭರಣಗಳಿಂದ ಕಂಗೊಳಿಸುತ್ತಿದಾರೆ. ಅವರಾದ ಮೇಲೆ ಕತ್ತಿ, ಕಠಾರಿ, ಬಿಲ್ಲು, ಬಾಣಗಳನ್ನು ಹಿಡಿದಿರುವ ಕೆಳದಿಯ ಸೈನಿಕರು ಸಾಲುಸಾಲಾಗಿ

ನಿಂತಿದ್ದಾರೆ. ಸೈನಿಕರ ಮುಖಮುದ್ರೆಯಲ್ಲಿ ಏನೋ ಒಂದು ಬಗೆಯ ಉತ್ಸಾಹ, ಸಂತೋಷ ಕಂಡು ಬರುತ್ತಿದೆ. ಈ ಎಲ್ಲ ಸೈನ್ಯ ರಾಜಿಯೂ ಅರಮನೆಕಡೆಗೆ ಅಭಿಮುಖೀಕರಣವಾಗಿದೆ. ಯಾರ ಆಗಮನವನ್ನೋ ಅದು ಎದುರು ನೋಡುತ್ತಿದೆ.

ಬಿದನೂರು * ಇರುವುದು ಮಲೆನಾಡಿನ ಮಧ್ಯದಲ್ಲಿ, ದುರ್ಗಮವಾದ ಪ್ರದೇಶದಲ್ಲಿ. ಊರ ಸುತ್ತಲೂ ಬಲವಾದ ಕೋಟೆ. ಕೋಟೆಯ ಮಧ್ಯ ಭಾಗದಲ್ಲಿ ನಾಯಕರ ಅರಮನೆ. ರಾಜರ ಒಡ್ಡೋಲಗಶಾಲೆ ಇಂದ್ರನ ಸಭೆ ಯಂತೆ ವಿರಾಜಿಸುತ್ತಿದೆ. ಸಭಾಭವನವು ನವರತ್ನ ಮಾಲೆಗಳಿಂದ ಅಲಂಕೃತ ವಾಗಿದೆ. ಬಗೆ ಬಗೆಯ ಪುಷ್ಪಗಳಿಂದ ಆ ಓಲಗಶಾಲೆಯನ್ನು ಅಲಂಕರಿಸಿ ದ್ದಾರೆ. ಸಭಿಕರ ಕಣ್ಣು, ಮೂಗು, ಮನಸ್ಸು ಗಳಿಗೆ ಆನಂದ ಕೊಡುವ ಸನ್ನಿವೇಶವು ಅಲ್ಲಿ ನಿರೂಪಿತವಾಗಿದೆ. ಅರಮನೆಯ ಒಳಭಾಗದಲ್ಲಿ ವೇದ ಘೋಷಗಳಾಗುತ್ತಿವೆ. ಮುಂಭಾಗದಲ್ಲಿ ಮಂಗಳವಾದ್ಯಗಳಾಗುತ್ತಿವೆ. ಒಡ್ಡೋಲಗದ ಮಧ್ಯೆ ಕೆಳದಿಯ ರಾಜರ ಸಿಂಹಾಸನವು ಅಲಂಕೃತವಾಗಿದೆ. ಸಭಿಕರು ಕುತೂಹಲದಿಂದ ಯಾರ ಬರವನ್ನೋ ನಿರೀಕ್ಷಿಸುತ್ತಿದಾರೆ! ಅವರ ಮನಸ್ಸಿನಲ್ಲಿ ನಿಮಿಷಗಳು ವರ್ಷಗಳಂತೆ ಪರಿಣಮಿಸುತ್ತಿವೆ! ಹೀಗಾಗು ವುದು ಮಾನವ ಸಹಜವಾದುದೇ ಸರಿ!

ಕೆಳದಿಯ ರಾಜರುಗಳಲ್ಲಿ ಹತ್ತನೆಯ ಅರಸನೆನಿಸಿದ ಭದ್ರಪ್ಪನಾಯ ಕನು ಶಿವನಪಾದವನ್ನು ಸೇರಿದಮೇಲೆ ರಾಜ್ಯದ ಒಡೆತನವನ್ನು ಯಾರಿಗೆ ಒಪ್ಪಿಸಬೇಕೆಂಬುದಕ್ಕೆ ರಾಜ್ಯದ ಮಂತ್ರಿಗಳೂ, ಸಭಿಕರೂ, ರಾಜಬಂಧು ಗಳೂ ಒಂದೆಡೆಕೂಡಿ ಕೀರ್ತಿಶಾಲಿ ಶಿವಪ್ಪನಾಯಕನ ಕಡೆಯ ಮಗ ಹಿರಿಯ ಸೋಮಶೇಖರ ನಾಯಕನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದ್ದಾರೆ. ಅಂದಿನ ಶುಭಮುಹೂರ್ತದಲ್ಲಿ ಬಿದನೂರಿನ ವೈಭವದ ಅರಮನೆಯಲ್ಲಿ ವಿಧ್ಯುಕ್ತವಾದ ರೀತಿಯಿಂದ ರಾಜನ ಪಟ್ಟಾಭಿಷೇಕ ಕಾರ್ಯವು ನಡೆಯು ತ್ತಿದೆ. ರಾಜನು ಆ ಕಾರ್ಯವನ್ನು ಮುಗಿಸಿಕೊಂಡು ಒಡ್ಡೋಲಗಕ್ಕೆ

* ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ 'ನಗರ'ಎಂಬ ಊರಿಗೆ ಹಿಂದೆ ಬಿದನೂರೆಂದು ಹೆಸರಿತ್ತು.

ಬಂದು ಸಿಂಹಾಸನವನ್ನು ಅಲಂಕರಿಸಿ ರಾಜಸಂದೇಶವನ್ನು ಸಾರಿ, ಮಂತ್ರಿಗಳಿಂದ, ಸೈನಿಕರಿಂದ, ಪ್ರಜೆಗಳಿಂದ ರಾಜಭಕ್ತಿಪ್ರಮಾಣಗಳನ್ನು ಸ್ವೀಕರಿಸಬೇಕಾಗಿದೆ. ಅಂತಹ ಸುವರ್ಣಸಮಯವನ್ನೇ ಸಭಿಕರೂ ಸೈನಿಕರೂ ಕುತೂಹಲದಿಂದ ನಿರೀಕ್ಷಿಸುತ್ತಿದಾರೆ!

ಹಿರಿಯ ಸೋಮಶೇಖರ ಭೂಪಾಲನು ಕೆಳದಿಯ ರಾಜ್ಯವನ್ನು ವಿಸ್ತರಿಸಿ ಆ ರಾಜ್ಯದಲ್ಲಿ ಒಳ್ಳೆಯ ಶಿಸ್ತನ್ನು ನೆಲೆಗೊಳಿಸಲು ಸಮರ್ಥನಾಗಿದ್ದಾನೆ. ಪ್ರತಾಪಶಾಲಿ ಶಿವಪ್ಪನಾಯಕನ ಕಡೆಯ ಮಗ ರಾಜ್ಯಕ್ಕೆ ನಿಜವಾದ ವಾರಸುದಾರನೇ ಸರಿ. ಆದುದರಿಂದಲೇ ಈತನ ಪಟ್ಟಾಭಿಷೇಕದ ವಿಚಾರದಲ್ಲಿ ರಾಜ್ಯದಲ್ಲಿ ಒಮ್ಮತ ಸಮ್ಮತವಾದ ತೀರ್ಮಾನವಾಗಿದೆ. ಇದು ರಾಜ್ಯಕ್ಕೆ ಒಳ್ಳೆಯ ಶುಭಸೂಚನೆಯೂ ಆಗಿದೆ.

ಸೋಮಶೇಖರ ನಾಯಕನು ಒಳ್ಳೆಯ ವ್ಯಕ್ತಿತ್ವವುಳ್ಳವನು. ಅವನು ಆಕರ್ಷಕ ನಿಲವುಳ್ಳವನು. ಒಳ್ಳೆಯ ಕಾಯಪುಷ್ಟಿಯುಳ್ಳವನು. ಮೊಣಕಾಲಿಗೆ ಮುಟ್ಟುವ ನೀಳವಾದ ಬಾಹುವುಳ್ಳವನು. ಅವನು ಉಬ್ಬಿದ ಎದೆ, ಪ್ರಸನ್ನವಾದ ಮುಖಮುದ್ರೆಗಳಿಂದ ಭವ್ಯವಾಗಿ ಕಂಗೊಳಿಸುತ್ತಿದ್ದನು. ಭವ್ಯವಾದ ಶಿರಸ್ಸು ಅವನ ಬುದ್ಧಿಶಕ್ತಿಗೆ ಸಾಕ್ಷಿಯಾಗಿದ್ದಿತು. ವಿಶಾಲವಾದ ಹಣೆಯು ಅವನ ಮಹಾನುಭಾವತೆಯನ್ನು ವ್ಯಕ್ತಪಡಿಸುತ್ತಿದ್ದಿತು. ನೀಳವಾದ ಮೂಗು ಅವನು ಭಾಗ್ಯಶಾಲಿಯೆಂದು ಸೂಚಿಸುತ್ತಿತ್ತು. ಅಗಲವಾದ ಕಿವಿಗಳು ಅವನು ರಾಜಲಕ್ಷಣ ಸಂಪನ್ನನೆಂಬುದಕ್ಕೆ ಸಾಕ್ಷಿಯಾಗಿದ್ದುವು. ಅವನ ದೇಹದ ವರ್ಣವು ಸುವರ್ಣವನ್ನು ನಾಚಿಸುತ್ತಿದ್ದಿತು. ತೇಜಃ ಪುಂಜವಾದ ಕಣ್ಣುಗಳು ಅವನ ಸಾಮರ್ಥ್ಯವನ್ನು ಸೂಚಿಸುತ್ತಿದ್ದುವು. ಇಂತಹ ದಿವ್ಯ ವ್ಯಕ್ತಿತ್ವವುಳ್ಳ ಸೋಮಶೇಖರ ಭೂಪಾಲನು ರಾಜೋಚಿತವಾದ ವಸ್ತ್ರಾಭರಣಗಳಿಂದ ಅಲಂಕೃತನಾಗಿದ್ದನು. ಶಿವಭಕ್ತನಾದ ಅವನ ಹಣೆಯು ವಿಭೂತಿಯಿಂದ ಕಂಗೊಳಿಸುತ್ತಿದ್ದಿತು. ಈ ವಿಭೂತಿಯ ಲಾಂಛನವು ಅವನ ದೈವಭಕ್ತಿಗೆ ನಿಚ್ಚಳವಾದ ಸಾಕ್ಷಿಯೆನ್ನುವಂತಿದ್ದಿತು. ಅವನ ಸೊಂಟದಲ್ಲಿ ಕೆಳದಿಯ ರಾಜರ ಪರಂಪರಾಗತವಾದ 'ನಾಗರಮುರಿ' ಖಡ್ಗವು ಪರಿಶೋಭಿಸುತ್ತಿದ್ದಿತು. ನವರತ್ನ ಮಯವಾದ ರಾಜಕಿರೀಟದಿಂದ ಪರಿಶೋಭಿ

ಸುತ್ತಿದ್ದ ಆ ಸೋಮಶೇಖರ ಭೂಪಾಲನು ಇತಿಹಾಸ ಪ್ರಸಿದ್ಧರಾದ ಇಮ್ಮಡಿ ಪುಲಿಕೇಶಿ, ಚಾಲುಕ್ಯ ವಿಕ್ರಮಾದಿತ್ಯ, ಹೊಯ್ಸಳ ವಿಷ್ಣುವರ್ಧನ, ರಾಷ್ಟ್ರ ಕೂಟರ ನೃಪತುಂಗ, ವಿಜಯನಗರದ ಕೃಷ್ಣದೇವರಾಯ, ದೇವಗಿರಿಯ ಸಿಂಘಣ, ಮೈಸೂರಿನ ಚಿಕ್ಕದೇವರಾಯ ಮೊದಲಾದ ಪ್ರಖ್ಯಾತ ಕನ್ನಡರಾಜ ಪರಂಪರೆಯ ಪ್ರತಿನಿಧಿಯೆಂಬಂತೆ ಪರಿಶೋಭಿಸುತ್ತಿದ್ದನು. ಕನ್ನಡ ಕುಲದ ಅರಸರ ನಿರ್ಮಲ ಕ್ಷಾತ್ರತೇಜಸ್ಸಿಗೆ ಅವನು ಸೀಮಾಪುರುಷನೆನಿಸಿದ್ದನು.

ಕೆಳದಿಯ ರಾಜರಿಗೆ ಪರಂಪರಾಗತವಾಗಿ ಬರುತ್ತಿದ್ದ ರಾಜವಿದ್ಯೆ ಗಳಲ್ಲಿ ಸೋಮಶೇಖರ ಭೂಪಾಲನು ನಿಷ್ಣಾತನಾಗಿದ್ದನು. ಅವನು ಕತ್ತಿಯ ವರಸೆ, ಬಾಣ ವಿದ್ಯೆ, ಕುದುರೆಯ ಸವಾರಿ, ಮಲ್ಲ ಯುದ್ಧ ಮೊದ ಲಾದ ಶೂರವಿದ್ಯೆಗಳಲ್ಲಿ ಪ್ರವೀಣನೆನಿಸಿದ್ದನು. ರಾಜನೀತಿಶಾಸ್ತ್ರದಲ್ಲಿಯೂ, ರಾಮಾಯಣ ಭಾರತಾದಿ ಕಥೆಗಳಲ್ಲಿಯೂ, ಯುದ್ಧಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಲ್ಲಿಯೂ ಅವನು ಪರಿಣತನೆನಿಸಿದ್ದನು. ಕಣ್ಮರೆಯಾದ ಭದ್ರಪ್ಪ ನಾಯಕನು ತನ್ನ ಅನಂತರ ರಾಜ್ಯಕ್ಕೆ ಹಕ್ಕುದಾರನಾಗಿಯೂ, ಸಕಲ ರಾಜಲಕ್ಷಣ ಸಂಪನ್ನನಾಗಿಯೂ ಇರುವ ಹಿರಿಯ ಸೋಮಶೇಖರನಾಯ ಕನು ಕೆಳದಿಯ ರಾಜ್ಯಸೂತ್ರಗಳನ್ನು ಕೈಗೊಳ್ಳುವುದು ತಮ್ಮ ಮನೆತನದ ಮತ್ತು ನಾಡಿನ ಹಿತದೃಷ್ಟಿಯಿಂದ ಅಗತ್ಯವೆಂದು ಭಾವಿಸಿದ್ದನು. ಅದು ಕಾರಣವೇ ಹಿರಿಯ ಸೋಮಶೇಖರರಾಜನಿಗೆ ರಾಜೋಚಿತವಾದ ಎಲ್ಲ ಶಸ್ತ್ರ ಮತ್ತು ಶಾಸ್ತ್ರ ವಿದ್ಯೆಗಳಲ್ಲಿಯೂ ತಕ್ಕಶಿಕ್ಷಣವನ್ನು ಕೊಟ್ಟಿದ್ದನು. ಇಂತಹ ದೂರದೃಷ್ಟಿಯಿಂದ ನಡೆದುಕೊಂಡುದರಿಂದಲೇ ಕೆಳದಿಯ ರಾಜ ಮನೆತನವು ಕರ್ನಾಟಕದ ಪಶ್ಚಿಮಭಾಗದಲ್ಲಿ ಸುಮಾರು ಎರಡೂ ವರೆ ನೂರು ವರ್ಷಕಾಲ ಧರ್ಮದಿಂದ ಮತ್ತು ದರ್ಪದಿಂದ ರಾಜ್ಯಭಾರಮಾಡಿ ದುದು, ಹಾಗೂ ಇತಿಹಾಸದಲ್ಲಿ ಚಿರಸ್ಮರಣೀಯವಾದುದು.

ರಾಜಪುರೋಹಿತರಿಂದ ಈ ಮೊದಲೇ ನಿಶ್ಚಯಿಸಿದ ಶುಭಮುಹೂರ್ತ ದಲ್ಲಿ ಸಕಲಾಲಂಕಾರಸಂಶೋಭಿತನಾದ ಹಿರಿಯ ಸೋಮಶೇಖರ ಭೂಪಾ ಲನು, ಕುಲಗುರುಗಳ ಮತ್ತು ಪುರೋಹಿತರ ಮಾರ್ಗದರ್ಶನದಲ್ಲಿ ಮುಖ್ಯ ಮಂತ್ರಿ ಮತ್ತು ದಂಡನಾಯಕರ ಹಸ್ತಲಾಘವದೊಡನೆ ಅರಮನೆಯ

ಒಡ್ಡೋಲಗಶಾಲೆಗೆ ಬಂದನು. ದೇವೇಂದ್ರನಂತೆ ಕಂಗೊಳಿಸುತ್ತಿದ್ದ ಆ ನೂತನ ರಾಜನನ್ನು ಕಂಡು ಜನರು ಹರ್ಷೋದ್ಗಾರದಿಂದ ಜಯಜಯ ಕಾರ ಮಾಡಿದರು. ಆ ಜಯಧ್ವನಿಯು ಕೈಲಾಸದಲ್ಲಿದ್ದ ಕೆಳದಿಯ ಕೀರ್ತಿ ಶಾಲಿ ರಾಜರಿಗೆ ಆನಂದ ಬಾಷ್ಪಗಳನ್ನು ತರುವಂತಿತ್ತು. ಮಂಗಳವಾದ್ಯಗಳು ಮೊಳಗಿದುವು. ಅರಸನು ಸಿಂಹಾಸನವನ್ನು ಅಲಂಕರಿಸಿದನು. ಪರಾಕುಗಳು ಮೊಳಗಿದುವು. ಸಭೆಯಲ್ಲಿ ಸಂಗೀತ ನೃತ್ಯಾದಿಗಳು ಪದ್ಧತಿಯಂತೆ ನಡೆದುವು. ಎಲ್ಲೆಲ್ಲೂ ಸಂತೋಷ ಉತ್ಸಾಹಗಳು ನಲಿದಾಡಿದವು. ಮಂತ್ರಿದಂಡನಾಯ ಕರು ರಾಜನಿಗೆ ತಮ್ಮ ನಿಷ್ಠೆಯನ್ನು ಸಲ್ಲಿಸಿದರು. ಅಧಿಕಾರಿಗಳು ಸಿಂಹಾ ಸನಕ್ಕೆ ತಲೆಬಾಗಿ ನಮಿಸಿದರು. ಅಧೀನರು ಕಪ್ಪಕಾಣಿಕೆಗಳನ್ನು ಒಪ್ಪಿಸಿ ದರು. ಗುರು ಜಂಗಮರು ರಾಜನಿಗೆ ಶುಭವನ್ನು ಕೋರಿ ಆಶೀರ್ವದಿ ಸಿದರು. ವೈದಿಕವಿಪ್ರರು ಮಂತ್ರಾಕ್ಷತೆಗಳನ್ನು ಕೊಟ್ಟರು. "ಕೆಳದಿಯ ರಾಜಪರಂಪರೆಗೆ ಅನುಗುಣವಾಗಿ ನಾನು ರಾಜ್ಯದ ಸಕಲ ಪ್ರಜೆ ಗಳನ್ನೂ, ಧರ್ಮದಿಂದ, ನ್ಯಾಯದಿಂದ, ಸರ್ವಸಮತಾಭಾವದಿಂದ ಸಂರಕ್ಷಿಸುತ್ತೇನೆ ಎಂದು ಈ ದಿನ ತಮಗೆ ಭರವಸೆ ನೀಡಿದ್ದೇನೆ. ನಮ್ಮ ರಾಜ್ಯದ ಕೀರ್ತಿಯನ್ನೂ, ಪ್ರಜೆಗಳ ಸೌಖ್ಯವನ್ನೂ ರಕ್ಷಿಸುವ ಸಲುವಾಗಿ ತಾವೆಲ್ಲರೂ ನನಗೆ ಸಹಾಯರಾಗಿದ್ದೀರೆಂದು ನಂಬಿದ್ದೇನೆ. ನಮ್ಮ ರಾಜ್ಯದ ಅಧಿದೇವತೆಯಾಗಿ ಕಂಗೊಳಿಸುತ್ತಿರುವ ಬಿದನೂರಿನ ನೀಲ ಕಂಠೇಶ್ವರನೂ, ಇಕ್ಕೇರಿಯ ಅಘೋರೇಶ್ವರನೂ, ಕೆಳದಿಯ ರಾಮೇಶ್ವರನೂ ತಮ್ಮೆಲ್ಲರಿಗೂ "ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ" ಎಂದು ರಾಜನು ತನ್ನ ಪಟ್ಟಾಭಿಷೇಕದ ಸಂದೇಶವನ್ನು ಸಾರಿದನು. ಪಟ್ಟಾಭಿಷೇಕದ ಸಂತೋಷದ ಸಲುವಾಗಿ ಮಂತ್ರಿಗಳಿಗೂ, ದಂಡನಾಯಕರಿಗೂ, ಉನ್ನತ ರಾಜ್ಯಾಧಿಕಾರಿಗಳಿಗೂ, ರಾಜಪ್ರಮುಖರಿಗೂ, ವಿದ್ವಾಂಸರಿಗೂ, ಕಲಾವಿದ ರಿಗೂ ಉಚಿತವಾದ ರೀತಿಯಿಂದ ಮನ್ನಣೆಗಳಾದವು. ಸಭಿಕರು ಆ ರಾಜ ನಿರೂಪವನ್ನು ಕೇಳಿ ಹರ್ಷಿಸಿದರು. ಈ ಮಾತುಗಳು ಕೆಳದಿಯ ರಾಜ್ಯದ ಉಜ್ವಲ ಪರಂಪರೆಗೆ ಅನುಗುಣವಾದುವೆಂದು ಎಲ್ಲರೂ ಸಂತೋಷದಿಂದ ತಮ್ಮತಮ್ಮ ಮನೆಗೆ ತೆರಳಿದರು. ರಾಜನು ಒಡ್ಡೋಲಗವನ್ನು ವಿರಮಿಸಿ

ಸಂತೋಷದಿಂದ ಅಂತಃಪುರಕ್ಕೆ ಹೋದನು. ರಾಜಧಾನಿಯಾದ ಬಿದನೂರಿನಲ್ಲಿ ನಡೆದ ಈ ಸಮಾರಂಭವು ಕೆಳದಿಯ ರಾಜ್ಯಾದ್ಯಂತ ಸಂತೋಷವನ್ನುಂಟುಮಾಡಿತು. ರಾಜ್ಯದ ದೇವಾಲಯಗಳಲ್ಲಿಯೂ, ಪ್ರಾರ್ಥನಾ ಮಂದಿರಗಳಲ್ಲಿಯೂ, ಮಠಮಾನ್ಯಗಳಲ್ಲಿಯೂ ಸಡಗರದ ಸಂಭ್ರಮಗಳಾದುವು. ಈ ಉತ್ಸವವನ್ನು ಜನರು ನಾಡಹಬ್ಬದಂತೆ ಆಚರಿಸಿದರು.

ಹಿರಿಯ ಸೋಮಶೇಖರ ರಾಜನು ರಾಜ್ಯಭಾರವನ್ನು ಕೈಕೊಂಡ ಕೂಡಲೇ ಅವನ ಸತ್ತ್ವಪರೀಕ್ಷೆಯ ಸನ್ನಿವೇಶವೊಂದು ಪ್ರಾಪ್ತವಾಯಿತು. ಬಿದನೂರಿನ ಪಕ್ಕದ ರಾಜ್ಯವಾದ ತರೀಕೆರೆಯ ಪಾಳೆಯ ಪಟ್ಟಿನಲ್ಲಿ ಅವ್ಯವಸ್ಥೆ ಉಂಟಾಯಿತು. ತರೀಕೆರೆ ಹನುಮಪ್ಪ ನಾಯಕನು ಬುದ್ಧಿಭ್ರಮಣೆಯಿಂದ ತನ್ನ ರಾಜ್ಯದಲ್ಲಿ ಅನೇಕ ಅವಿವೇಕದ ಕಾರ್ಯಭಾರಗಳನ್ನು ಮಾಡಹತ್ತಿದನು. ಅವನು ಅರಮನೆಯಲ್ಲಿ ಅವನ ಹೆಂಡತಿಯನ್ನೇ ಕ್ರೂರವಾಗಿ ಕೊಂದು ಹಾಕಿದನು. ರಾಜ್ಯದಲ್ಲಿ ನಿರಪರಾಧಿಗಳನ್ನು ಶಿಕ್ಷಿಸಿದನು. ಹೀಗೆ ನೆರೆಯ ರಾಜ್ಯದಲ್ಲಿ ಅಲ್ಲಕಲ್ಲೋಲವುಂಟಾಗಲು ಅಲ್ಲಿನ ಪ್ರಜಾಮುಖಂಡರಿಂದ ತಮ್ಮ ರಾಜ್ಯವನ್ನು ರಕ್ಷಿಸಬೇಕೆಂಬ ಬಗೆಗೆ ಸೋಮಶೇಖರರಾಯನಿಗೆ ದೂರು ಬಂದಿತು. ಮರೆಹೊಕ್ಕವರನ್ನು ರಕ್ಷಿಸುವುದು ರಾಜಧರ್ಮವೆಂದು ಅರಿತಿದ್ದ ಸೋಮಶೇಖರ ಭೂಪಾಲನು ಅವರ ಕೋರಿಕೆಯನ್ನು ಮನ್ನಿಸಿ ತನ್ನ ನಚ್ಚಿನ ಮಂತ್ರಿ ಸುಬ್ಬುನೀಸ ಕೃಷ್ಣಪ್ಪಯ್ಯನ ನೇತೃತ್ವದಲ್ಲಿ ಒಂದು ಬಲವಾದ ಸೈನ್ಯವನ್ನು ತರೀಕೆರೆ ಪಾಳೆಯ ಪಟ್ಟಿಗೆ ಕಳುಹಿಸಿ ಹನುಮಪ್ಪನಾಯಕನನ್ನು ಬಂಧಿಸಿ ಸೆರೆಯಿಟ್ಟು ಅವನ ಮಗನಿಗೆ ಅಧಿಕಾರವನ್ನು ಕೊಡುವಂತೆ ನಿರೂಪಿಸಿದನು. ಅಂತೆಯೇ ಶೂರನಾದ ಕೃಷ್ಣಪ್ಪಯ್ಯನು ತರೀಕೆರೆಗೆ ಹೋಗಿ ತನ್ನ ಸೈನದ ಬಲದಿಂದ ಹುಚ್ಚನಾದ ಹನುಮಪ್ಪನಾಯಕನನ್ನು ಬಂಧಿಸಿ ಅವನ ಮಗನಿಗೆ ಆ ಪಾಳೆಯ ಪಟ್ಟಿನ ಒಡೆತನವನ್ನು ಕೊಟ್ಟು ಸುವ್ಯವಸ್ಥೆಯಿಂದ ಆಡಳಿತವನ್ನು ನಡೆಸಲು ನಿರೂಪಿಸಿದನು. ಅಶಾಂತರಾಗಿದ್ದ ತರೀಕೆರೆ ಪ್ರಜೆಗಳು ಬಿದನೂರು ರಾಯರ ಈ ಔದಾರ್ಯ ಮತ್ತು ಧರ್ಮನಿಷ್ಠೆಗಳನ್ನು ಬಹಳವಾಗಿ ಹೊಗಳಿದರು. ಈ ವಿಜಯದಿಂದ ಸೋಮಶೇಖರರಾಜನ ಕೀರ್ತಿಯು ಎಲ್ಲೆಡೆಯ

ಲ್ಲಿಯೂ ಹಬ್ಬಿತು. ರಾಜಕೀಯದಲ್ಲಿ ಕೆಳದಿಯರಸರ ಘನತೆ ಅಧಿಕ ವಾಯಿತು. ರಾಜನ ಬಗೆಗೆ ಜನತೆಯ ಆದರ ಹೆಚ್ಚಿತು.

ಇದೇ ಸಮಯದಲ್ಲಿ ತುಳುನಾಡಿನಲ್ಲಿ ದಂಗೆಯೆದ್ದ ಜನಗಳನ್ನು ಸೋಮಶೇಖರ ರಾಜನು ತನ್ನ ಬಲವಾದ ಸೈನ್ಯದ ಸಹಾಯದಿಂದ ಅಡಗಿಸಿ ಆ ಪ್ರದೇಶವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇದರಿಂದ ಮಂಗ ಳೂರು ಜಿಲ್ಲೆ ಸಂಪೂರ್ಣವಾಗಿ ಕೆಳದಿಯ ರಾಜರ ಸ್ವಾಧೀನಕ್ಕೆ ಬಂದಿತು. ಪಿತ್ರಾರ್ಜಿತವಾದ ಕೆಳದಿಯ ರಾಜ್ಯದಲ್ಲಿ ರಾಜ್ಯಭಾರಕ್ರಮವು ತ್ವರಿತವಾಗಿ ಸರ್ವಸಮ್ಮತವಾಗಿ ನಡೆಯುವಂತೆ ರಾಜನು ಎಚ್ಚರಿಕೆ ತೆಗೆದುಕೊಂಡನು. ನ್ಯಾಯಾಲಯಗಳನ್ನು ವ್ಯವಸ್ಥೆಗೊಳಿಸಿದನು. ಮಂತ್ರಿಗಳನ್ನೂ, ದಂಡನಾಯಕರನ್ನೂ ತನ್ನ ಅಂತರಂಗಕ್ಕೆ ತೆಗೆದುಕೊಂಡು ಅವರನ್ನು ಯಥೋಚಿತವಾಗಿ ಧನಕನಕಾದಿಗಳನ್ನು ಕೊಟ್ಟು ಗೌರವಿಸಿದನು. ರಾಜ್ಯದ ಹಿರಿಯರನ್ನೂ, ಪುರಪ್ರಮುಖರನ್ನೂ ಆಗಾಗ್ಗೆ ಬರಮಾಡಿಕೊಂಡು ಅವರಿಂದ ರಾಜ್ಯದ ಎಲ್ಲ ಬಗೆಯ ಸುಖದುಃಖಗಳನ್ನೂ ತಿಳಿದುಕೊಳ್ಳಹತ್ತಿ ದನು. ಪಟ್ಟಾಭಿಷೇಕವಾದ ಕೂಡಲೇ ರಾಜ್ಯದ ಎಲ್ಲ ಭಾಗಗಳನ್ನೂ ಬಲವಾದ ರಕ್ಷಣಾಪರಿವಾರದೊಡನೆ ಸಂಚರಿಸಿ ಪ್ರಜಾಕೋಟಿಯ ಪರಿಚಯ ವನ್ನು ಮಾಡಿಕೊಂಡನು. ಮನೆದೇವರುಗಳಾದ ಕೆಳದಿಯ ರಾಮೇಶ್ವರ ಮತ್ತು ವೀರಭದ್ರೇಶ್ವರ, ಇಕ್ಕೇರಿಯ ಅಘೋರೇಶ್ವರ, ಬಿದನೂರು ನೀಲ ಕಂಠೇಶ್ವರ, ಕೊಲ್ಲೂರು ಮೂಕಾಂಬಿಕಾ ಮೊದಲಾದ ದೇವರ ಪೂಜಾದಿಗಳು ಕ್ರಮವಾಗಿ ನಡೆಯುಲು ಏರ್ಪಡಿಸಿದನು. ಜ್ಞಾನಿಗಳಾದ ಬ್ರಾಹ್ಮಣರನ್ನೂ, ಜಂಗಮರನ್ನೂ, ಪ್ರತಿಭಾನ್ವಿತರಾದ ಕಲಾವಿದರನ್ನೂ, ವಿದ್ವಾಂಸರನ್ನೂ ಅರಮನೆಗೆ ಬರಮಾಡಿ ಅವರ ಉಪದೇಶಗಳನ್ನು ಕೇಳಿ, ಕಲಾಕೃತಿಗಳನ್ನು ನೋಡಿ ಹರ್ಷಿಸಿ ಅವರನ್ನು ಯಥೋಚಿತವಾಗಿ ಸನ್ಮಾನಿಸುತ್ತಿದ್ದನು. ಬಿದನೂರು ಅರಮನೆಯನ್ನೂ, ಊರಿನ ಕೋಟೆ ಕೊತ್ತಲಗಳನ್ನೂ ಭದ್ರ ಪಡಿಸಿದನು. ರಾಜನ ಈ ಬಗೆಯಾದ ಚಟುವಟಿಕೆಗಳು ವಿವೇಕ ಪೂರ್ಣ ವಾದವುಗಳೆಂದೂ ಯಥೋಚಿತವಾದುವುಗಳೆಂದೂ ಪ್ರಜೆಗಳು ಭಾವಿಸಿದರು. ಕೆಳದಿಯ ರಾಜ್ಯದಲ್ಲಿ ಶಾಂತಿ ಸಮಾಧಾನಗಳು ನೆಲಸಿದುವು, ಸೋಮಶೇಖರ ರಾಜನ ಕೀರ್ತಿಯು ಎಲ್ಲೆಡೆಯೂ ಹಬ್ಬಿತು.

೨. ಚೆನ್ನಮ್ಮಾಜಿಯ ಮದುವೆ

ಹಿರಿಯ ಸೋಮಶೇಖರ ಭೂಪಾಲನು ಅವಿವಾಹಿತ. ಮಂತ್ರಿಗಳೂ, ದಂಡನಾಯಕರೂ, ಪುರೋಹಿತರೂ ರಾಜನ ಮನಸ್ಸನ್ನು ತಿಳಿದು ಅವನು ಒಪ್ಪುವ ಕನ್ಯೆಯನ್ನು ಲಗ್ನಮಾಡಲು ಚಿಂತಿಸಿದರು. ಈ ಪ್ರಸಂಗದಲ್ಲಿ ಸೋಮಶೇಖರನಾಯಕನ ನಂಬುಗೆಗೆ ಪಾತ್ರನಾದ ಮಂತ್ರಿ ಸುಬ್ಬುಸೀಸ ಕೃಷ್ಣಪ್ಪಯ್ಯನನ್ನು ಮುಂದು ಮಾಡಿದರು. ಚತುರನಾದ ಆ ರಾಜಕಾರಿಣಿಯು ಸಮಯವರಿತು ನಾಯಕನನ್ನು ಸಂದರ್ಶಿಸಿ ಆತನ ಅಂತರ್ಯವನ್ನು ತಿಳಿದು ಕಾರ್ಯವನ್ನು ಮುಂದುವರಿಸಬೇಕೆಂದು ರಾಜಬಂಧುಗಳು ತೀರ್ಮಾನಿಸಿದರು.ಒಂದು ದಿನ ಸುಪ್ರಭಾತದಲ್ಲಿ ಕೃಷ್ಣಪ್ಪಯ್ಯನು ಸೋಮಶೇಖರನಾಯಕನನ್ನು ಸಂದರ್ಶಿಸಿ ಈ ರೀತಿ ಪ್ರಸ್ತಾಪಿಸಿದನು.

ಮಂತ್ರಿ ಕೃಷ್ಣಪ್ಪಯ್ಯ–ಒಡೆಯರೆ, ತಮ್ಮ ಪಟ್ಟಾಭಿಷೇಕದ ಅನಂತರ ರಾಜ್ಯದ ಭದ್ರತೆ ಹೆಚ್ಚಿದೆ. ತಮ್ಮ ಪರಾಕ್ರಮವನ್ನೂ, ನ್ಯಾಯ ನಿಷ್ಠೆಯನ್ನೂ ಪ್ರಜೆಗಳು ಮನಗಂಡಿದ್ದಾರೆ . ದೇವರ ಕೃಪೆಯಿಂದ ರಾಜ್ಯದಲ್ಲಿ ಮಳೆಬೆಳೆಗಳು ಆಗಿ ನಾಡು ಸುರಕ್ಷಿತವಾಗಿದೆ. ನಮ್ಮ ರಾಜ್ಯದಲ್ಲಿ ಏಲಕ್ಕಿ, ಮೆಣಸು, ಭತ್ತ, ಅಡಿಕೆ, ಬಾಳೆ-ಕಾಫಿ ಮೊದಲಾದ ಬೆಲೆಯುಳ್ಳ ಬೆಳೆಗಳು ಬೆಳೆಯುವುದರಿಂದ ರೈತರೂ ವರ್ತಕರೂ ಹಣಗಾರರಾಗಿದ್ದಾರೆ. ಪಾಶ್ಚಾತ್ಯರಾದ ಪೋರ್ಚುಗೀಸರು, ಇಂಗ್ಲೀಷರು ನಮ್ಮ ರಾಜ್ಯದಲ್ಲಿ ಪಶ್ಚಿಮ ಸಮುದ್ರ ತೀರದಲ್ಲಿ ವ್ಯಾಪಾರದಲ್ಲಿ ತೊಡಗಿದ್ದಾರೆ. ಎಲ್ಲೆಡೆಯಲ್ಲೂ ಸಮಾಧಾನ ನೆಲೆಸಿದೆ. ಆದರೆ ಪ್ರಜೆಗಳನ್ನು ಒಂದು ಚಿಂತೆ ಬಹಳವಾಗಿ ಬಾಧಿಸುತ್ತಿದೆ, ಅಪ್ಪಣೆಯಾದರೆ....

ಸೋಮಶೇಖರ ನಾಯಕ—ಮಂತ್ರಿವರ್ಯರೆ, ನೀವು ಮಾತಿನಲ್ಲಿ ಬಲ್ಲಿದರು. ಲೋಕವನ್ನು ಚೆನ್ನಾಗಿ ಅರಿತವರು. ರಾಜಮನೆತನದಲ್ಲಿ ನಿಷ್ಠೆಯುಳ್ಳವರು. ರಾಜನೀತಿಶಾಸ್ತ್ರದಲ್ಲಿಯೂ ಪ್ರವೀಣರು. ನಿಮ್ಮ ಸಾಹಸದಲ್ಲೂ, ರಾಜನಿಷ್ಠೆಯಲ್ಲೂ ನನಗೆ ಸಂಪೂರ್ಣವಾದ ನಂಬುಗೆಯಿದೆ. ನೀವು

ನಿಮ್ಮ ಮನಸ್ಸಿನಲ್ಲಿರುವುದನ್ನು ಧಾರಾಳವಾಗಿ ಹೇಳಿ ಅದನ್ನು ನಾನು ಸಂತೋಷದಿಂದ ನಡೆಸಿಕೊಡುತ್ತೇನೆ. ಅನುಮಾನವೇಕೆ ?

ಮಂತ್ರಿ ಕೃಷ್ಣಪ್ಪಯ್ಯ—ಒಡೆಯರೆ, ನನಗಾಗಲಿ, ಪ್ರಜೆಗಳಿಗಾಗಲಿ ಇರುವ ಚಿಂತೆ ಸ್ವಕೀಯವಾದುದಲ್ಲ. ಅದು ರಾಜ್ಯಕ್ಕೂ ರಾಜಮನೆತನಕ್ಕೂ ವಿಶೇಷವಾಗಿ ಪ್ರಭುಗಳಾದ ತಮಗೂ ಸಂಬಂಧಿಸಿದುದು. ಧರ್ಮಾತ್ಮರಾದ ರಾಜ್ಯಸ್ಥಾಪಕ ಚೌಡಪ್ಪನಾಯಕರ ಕಾಲದಲ್ಲಿ ದಿಗಂತವಿಶ್ರಾಂತವಾದ ಕೆಳದಿಯ ರಾಜ್ಯದ ಕೀರ್ತಿಗೌರವಗಳು ದಿನ ದಿನ ಹೆಚ್ಚಲೆಂಬುದೇ ನಮ್ಮೆಲ್ಲರ ಆಶಯ. ಅದಕ್ಕೆ ಈಗ ಬಲವಾದ ಒಂದು ಅಡಚಣೆ ಪ್ರಾಪ್ತವಾಗಿದೆಯೆಂದು ನಮ್ಮೆಲ್ಲರ ಚಿಂತೆ. ಆ ನಮ್ಮ ಚಿಂತೆಯನ್ನು ಪರಿಹರಿಸುವ ಭಾರ ತಮ್ಮ ಕೈಯ್ಯಲ್ಲಿಯೇ ಇದೆ. ತಾವು ದೊಡ್ಡ ಮನಸ್ಸು ಮಾಡಿದರೆ................

ಸೋಮಶೇಖರ ನಾಯಕ—ಸುಬ್ಬುನೀಸರೆ, ನಿಮ್ಮ ಹೃದ್ಗತವನ್ನು ನೇರವಾಗಿ ಹೇಳಿ. ಅದನ್ನು ನಾನು ಖಂಡಿತವಾಗಿಯೂ ನಡೆಸಿಕೊಡುತ್ತೇನೆ. ಅನುಮಾನಿಸಬೇಡಿರಿ. ನಿಮಗಿಂತ ಹಿತಚಿಂತಕರಾದವರು ನನಗಾರುಂಟು ? ನೀವು ಹೇಳುವುದು ನನ್ನ ಹಿತಕ್ಕಾಗಿಯೇ ಅಲ್ಲವೆ ?

ಮಂತ್ರಿ ಕೃಷ್ಣಪ್ಪಯ್ಯ—ಪ್ರಭುಗಳೆ, ತಮ್ಮ ಪಟ್ಟಾಭಿಷೇಕದಿಂದ ರಾಜ್ಯವು ಸನಾಯಕವಾಗಿದೆ. ತಾವು ಸಕಲಸದ್ಗುಣಗಳಿಂದಲೂ ರಾಜಲಕ್ಷಣಗಳಿಂದಲೂ ಕೂಡಿರುವಿರಿ. ಮೇಲಾಗಿ ತಮಗೆ ಯೌವನೋದಯವಾಗಿದೆ. ರಾಜ್ಯಕ್ಕೆ ತಾವು ತಂದೆಯಂತೆ ಕಂಗೊಳಿಸುತ್ತಿರುವಿರಿ. ವಿವಾಹಕ್ಕೆ ಉಚಿತವಾದ ಕಾಲವು ತಮಗೆ ಪ್ರಾಪ್ತವಾದರೂ ತಾವು ಅವಿವಾಹಿತರಾಗಿರುವುದರಿಂದ ರಾಜ್ಯಕ್ಕೆ ಒಬ್ಬ ತಾಯಿಇಲ್ಲವಾಗಿದೆಯೆಂದು ಜನ ಕಳವಳಿಸುತ್ತಿದಾರೆ. ತಾವು ಗೃಹಸ್ಥಾಶ್ರಮಸ್ವೀಕರಿಸಬೇಕೆಂಬುದು ನಮ್ಮ ಬಯಕೆ. ಈ ಬಗ್ಗೆ ತಮ್ಮ ಅಭಿಮತವನ್ನು ಕೃಪೆಮಾಡಿ ಅಪ್ಪಣೆಮಾಡಬೇಕು.

ಸೋಮಶೇಖರ ನಾಯಕ—ಸುಬ್ಬುನೀಸರೆ, ನೀವು ಯಥೋಚಿತವಾಗಿ ಮಾತನಾಡುತ್ತಿದೀರಿ. ವಿವಾಹವು ನನಗೆ ಅನಿವಾರ್ಯವೆಂದೇ ಭಾವಿಸಿದ್ದೇನೆ. ಜೀವನದ ಪರಿಪೂರ್ಣತೆಗೆ, ಪುರುಷನ ಹೃದಯದ ವಿಕಾಸಕ್ಕೆ ಸಹ

ಜೀವನದ ಗೆಳತಿಯು ಅಗತ್ಯವೆಂದು ಭಾವಿಸಿದ್ದೇನೆ. ಇದು ನಿಸರ್ಗದ ನಿಯಮವೂ ಅಹುದು. ಆದರೆ ಈ ಬಗೆಗೆ ನನಗಿರುವ ಆದರ್ಶವು ಉನ್ನತವಾದುದು. ಅದು ಪರಿಪೂರ್ಣವಾಗುವುದೋ ಇಲ್ಲವೋ ಎಂಬ ಸಂದೇಹದಿಂದ ಈ ವಿಷಯದಲ್ಲಿ ಮೌನವನ್ನು ವಹಿಸಿದ್ದೇನೆ.

ಮಂತ್ರಿಕೃಷ್ಣಪ್ಪಯ್ಯ—ಪ್ರಭುಗಳೆ, ತಾವು ಆಲೋಚಿಸುತ್ತಿರುವುದೇನು? ಕುಲ, ಶೀಲ, ರೂಪ, ಯೌವನ, ಘನತೆ, ಗಾಂಭೀರ್ಯಗಳಲ್ಲಿ ತಮಗೆ ಅನುರೂಪಳಾದ ವಧು ದೊರೆಯಲಾರಳೆಂದು ಭಾವಿಸಿರುವಿರಾ ?

ಸೋಮಶೇಖರ ನಾಯಕ—ಅಹುದು ! ನೀವು ನನ್ನಮನಸ್ಸನ್ನು ಚೆನ್ನಾಗಿ ಅರಿತಿರುವಿರಿ. ನನ್ನ ಮನಸ್ಸಿನ ಯೋಚನೆಯನ್ನೇ ನೀವು ಹೇಳುತ್ತಿರುವಿರಿ. ಚಕೋರವು ಚಂದ್ರನನ್ನು ಬಯಸುವಂತೆ, ಹಂಸವು ಹಾಲನ್ನು ಅಪೇಕ್ಷಿಸುವಂತೆ, ದುಂಬಿಯು ಸುಕೋಮಲ ಪುಷ್ಪವನ್ನು ಇಚ್ಛಿಸುವಂತೆ ನನ್ನ ಮನಸ್ಸು ಸರ್ವವಿಧದಿಂದಲೂ ನನಗೆ ಅನುರೂಪಳಾದ ಕನ್ಯೆಯನ್ನು ಬಯಸುತ್ತಿರುವುದು. ಆದರೆ ಅದು ಸಾಧ್ಯವೆಂದು ನನಗೆ ತೋರುತ್ತಿಲ್ಲ....

ಮಂತ್ರಿ ಕೃಷ್ಣಪ್ಪಯ್ಯ—ಒಡೆಯರೆ, ನಿಮ್ಮ ಬಹುದಿನದ ಸಾಹಚರ್ಯದಿಂದ ನಾನು ನಿಮ್ಮ ಮನಸ್ಸಿನ ಭಾವನೆಗಳನ್ನು ಅರಿತಿದ್ದೇನೆ. ಪ್ರಸಂಗ ಬಂದಾಗ ವಿಷಯವು ಸಿದ್ಧವಾಗಿರಲೆಂದು ಕುಲ, ಶೀಲ, ರೂಪಗಳಲ್ಲಿ ನಿಮಗೆ ಅನುರೂಪಳಾದ ಕನ್ಯಾರತ್ನವನ್ನು ಅನ್ವೇಷಣೆ ಮಾಡಿದ್ದೇನೆ. ಆ ಕನ್ಯೆ ಕೊಟ್ಟೀಪುರದ ಸತ್ಕುಲಪ್ರಸೂತ ಸಿದ್ದಪ್ಪಶೆಟ್ಟಿಯ ಮಗಳು. ಆಕೆಯ ಹೆಸರು ಚೆನ್ನಮ್ಮಾಜಿ. ಮಹಾರಾಣಿ ಪದವಿಗೆ ಅರ್ಹವಾದ ಗುಣಗಳು ಎಲ್ಲವೂ ಆಕೆಯಲ್ಲಿವೆ. ನಾನು ಒಮ್ಮೆ ಆ ಮಾರ್ಗದಲ್ಲಿ ಹೋಗುವಾಗ ಆಕೆಯ ಪೂರ್ವೋತ್ತರಗಳನ್ನು ವಿಚಾರಿಸಿ ಶಿವಭಕ್ತ ಸಿದ್ದಪ್ಪಶೆಟ್ಟರನ್ನು ಕಂಡು ಆ ಭಾಗ್ಯಶಾಲಿನಿ ಚೆನ್ನಮ್ಮಾಜಿಯನ್ನು ಸಂದರ್ಶಿಸಿ ಆಕೆಯಲ್ಲಿ ಮಾತುಕತೆ ಸಹ ನಡೆಸಿರುವೆನು. ಇದೋ ! ಆಕೆಯ ಸುಂದರವಾದ ಭಾವಚಿತ್ರ (ಚೆನ್ನಮ್ಮಾಜಿಯ ಭಾವಚಿತ್ರವನ್ನು ಮಹಾರಾಜರ ಕೈಯಲ್ಲಿ ಕೊಡುವನು)

ಸೋಮಶೇಖರ ನಾಯಕ—(ಚೆನ್ನಮ್ಮಾಜಿಯ ಭಾವಚಿತ್ರವನ್ನು ಎವೆಯಿಕ್ಕದೆ ನೋಡಿ, ಗಂಭೀರ ಮುಖಮುದ್ರೆಯಿಂದ ತನ್ನ ಸಮ್ಮತಿಯನ್ನು

ಸೂಚಿಸುವನು) ಸುಬ್ಬುನೀಸರೆ, ಕನ್ಯೆಯ ವಿದ್ಯೆ, ಬುದ್ಧಿ, ಚಾತುರ್ಯಾದಿಗಳನ್ನು ಕೊಂಚ ಕೇಳಬಯಸುತ್ತೇನೆ.

ಮಂತ್ರಿ ಕೃಷ್ಣಪ್ಪಯ್ಯ (ಮನಸ್ಸಿನ ಮುಂಡಿಗೆ ಫಲಿಸಿದಂತೆ ಭಾವಿಸಿ ಹರ್ಷದಿಂದ) ಒಡೆಯರೆ, ಚೆನ್ನಮ್ಮಾಜಿಯು ರೂಪಿನಿಂದ ರತಿ, ಚಾತುರ್ಯದಿಂದ ಸರಸ್ವತಿ, ಭಾಗ್ಯಲಕ್ಷಣಗಳಿಂದ ಲಕ್ಷ್ಮಿ, ಮಂಗಳ ಗುಣಗಳಿಂದ ಸರ್ವಮಂಗಳೆ, ಸುಮನೋಧರ್ಮದಿಂದ ರೋಹಿಣಿ, ಪಾವಿತ್ರತೆಯಿಂದ ಅನಸೂಯೆ-ಇವರನ್ನು ಹೋಲುವಳು. ಆಕೆಗೆ ಕನ್ನಡ, ಸಂಸ್ಕೃತ, ಸಂಗೀತ, ನೃತ್ಯ, ರಾಜನೀತಿ ಅರ್ಥಶಾಸ್ತ್ರ,ಗೃಹನಿರ್ವಹಣೆ ಮೊದಲಾದುವುಗಳಲ್ಲಿ ಪಾಂಡಿತ್ಯ ವಿದೆ. ಆಕೆಯು ನಿಜವಾಗಿಯೂ ದಿವ್ಯ ವ್ಯಕ್ತಿತ್ವವುಳ್ಳ ಯೋಷಾಮಣಿ. ಶಿವನ ಕೃಪೆಯಿಂದ ಆಕೆ ತಮ್ಮ ಧರ್ಮಪತ್ನಿಯಾದರೆ ತಮ್ಮ ಅದೃಷ್ಟಕ್ಕೆ ಸಮವಿಲ್ಲ! ರಾಜ್ಯದ ಭಾಗ್ಯಕ್ಕೆ ಎಣೆಯಿಲ್ಲ! ಆಕೆ ತಮಗೆ ಅನುರೂಪಳಾದ ಸಹಧರ್ಮಿಣಿ ಎನಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಸೋಮಶೇಖರ ನಾಯಕ—ಮಂತ್ರಿವರ್ಯರೆ, ರಾಜನ ವಿವಾಹವು ಅವನೊಬ್ಬನಿಗೆ ಮಾತ್ರ ಸಂಬಂಧಿಸಿದ ಅಂಶವಲ್ಲ. ರಾಜನ ಪತ್ನಿಯು ರಾಜ್ಯದ ರಾಣಿಯೆನಿಸುತ್ತಾಳೆ. ಅದರಿಂದ ಅವಳು ರಾಜ್ಯದ ಮಾತೆ. ಅಂತಹವಳನ್ನು ಆರಿಸುವ ಕಾಲದಲ್ಲಿ ಪ್ರಜೆಗಳ ಸಮ್ಮತಿಯು ಅಗತ್ಯ. ನೀವು ನನ್ನ ಹಿತೈಷಿಗಳು, ಹಾಗೂ ರಾಜ್ಯದ ಅಭ್ಯುದಯಾಕಾಂಕ್ಷಿಗಳು. ತಾವೆಲ್ಲರೂ ಒಪ್ಪುವ ಪಕ್ಷದಲ್ಲಿ ಈ ವಿವಾಹಕ್ಕೆ ನನ್ನ ಸಮ್ಮತಿಯುಂಟು. ಇದರಿಂದ ನನ್ನ ಮನಸ್ಸಿನಲ್ಲಿ ಏನೋ ಒಂದು ನೆಮ್ಮದಿಯ ಭಾವನೆ ಉಂಟಾಗಿದೆ ಎಂದು ಹೇಳಿ ಕೃಷ್ಣಪ್ಪಯ್ಯನನ್ನು ಉಚಿತಮರ್ಯಾದೆಯಿಂದ ಬೀಳ್ಕೊಟ್ಟನು.

ಕೃಷ್ಣಪ್ಪಯ್ಯನು ಕೃತಾರ್ಥವಾದ ಮುಖಭಾವದಿಂದ ಹೊರಗೆ ಬಂದು ದಂಡನಾಯಕ ಮಂತ್ರಿ ಪುರೋಹಿತಾದಿಗಳಿಗೂ, ಪ್ರಜಾಪ್ರಮುಖರಿಗೂ ಈ ಸಂತಸದ ಸುದ್ದಿಯನ್ನು ತಿಳಿಸಿದನು. ಎಲ್ಲರೂ ಆನಂದಭರಿತರಾದರು. ಕೆಳದಿಯ ಭಾಗ್ಯೋದಯ ಸನ್ನಿಹಿತವಾಯಿತೆಂದರು.

ಪುರೋಹಿತರು ನಿಶ್ಚಯಿಸಿದ ಒಂದು ಶುಭದಿನದಲ್ಲಿ ಸುಬ್ಬುನೀಸನೂ, ಕೆಲವು ರಾಜ ಬಂಧುಗಳೂ ಮಂಗಲದ್ರವ್ಯಸಹಿತ ಕೊಟ್ಟೇಪುರಕ್ಕೆ ಪ್ರಯಾಣ

ಮಾಡಿದರು. ದಾರಿಯಲ್ಲಿ ಶುಭಲಕ್ಷಣಗಳು ಕಂಡು ಬಂದವು. "ಶಕುನಂ ಶೋಭನಕಾಸ್ಪದಂ" ಎಂಬ ಕವಿಯ ಮಾತನ್ನು ಸ್ಮರಿಸಿಕೊಂಡರು. ಸಿದ್ದಪ್ಪ ಶೆಟ್ಟರ ಮನೆಯನ್ನು ಮುಟ್ಟಿದರು. ಶೆಟ್ಟಿಯು ರಾಜಬಂಧುಗಳ ಆಗಮನ ದಿಂದ ಆನಂದಭರಿತನಾದನು. ಚೆನ್ನಮ್ಮಾಜಿಯು ಮಹಾರಾಜನನ್ನು ಮದುವೆ ಯಾಗುವ ಸುಯೋಗವನ್ನು ಕೇಳಿ ಹರ್ಷಿಸಿದನು. ತನ್ನ ಮಗಳನ್ನು ಸೋಮ ಶೇಖರ ಭೂಪಾಲನಿಗೆ ಸಂತೋಷದಿಂದ ಲಗ್ನಮಾಡಿಕೊಡಲು ಒಪ್ಪಿ ಕೊಂಡನು. ಕೆಳದಿಯ ರಾಜನು ತನ್ನ ಅಳಿಯನಾಗುವುದು ಭಾಗ್ಯವೆಂದನು. ಪುರೋಹಿತರಿಂದ ಸುಮುಹೂರ್ತವು ನಿಶ್ಚಿತವಾಯಿತು. ಅರಮನೆಯಿಂದ ತಂದಿದ್ದ ನವರತ್ನಗಳನ್ನೂ, ವಸ್ತ್ರಾಭರಣಗಳನ್ನೂ ಪುರೋಹಿತರು ಚೆನ್ನ ಮ್ಮಾಜಿಗೆ ಆಶೀರ್ವದಿಸಿ ಕೊಟ್ಟರು. ಒಂದು ಶುಭದಿನ ಸಿದ್ದಪ್ಪಶೆಟ್ಟರೂ, ಮಿತ್ರರೂ ಚೆನ್ನಮ್ಮಾಜಿಯೊಡನೆ ರಾಜಸೈನಿಕರ ರಕ್ಷಣೆಯಿಂದ ಬಿದನೂರಿಗೆ ಹೊರಟರು. ರಾಜಪರಿವಾರದವರು ಅವರನ್ನು ಒಲುಮೆಯಿಂದ ಸ್ವಾಗತಿ ಸಿದರು. ಎಲ್ಲರೂ ಅರಮನೆಯಲ್ಲಿ ನೆಲೆಸಿದರು.

ಬಿದನೂರು ಅರಮನೆ ಸರ್ವಾಲಂಕಾರ ಸಂಶೋಭಿತವಾಯಿತು. ರಾಜನ ಪರಿಣಯದ ವಿಷಯವು ದೇಶಾದ್ಯಂತ ಹರಡಿತು. ಪ್ರಮುಖ ರಿಗೆ ಆಹ್ವಾನಗಳು ಹೋದವು. ಮದುವೆಯ ಶುಭ ಮುಹೂರ್ತಕ್ಕೆ ಎಲ್ಲರೂ ಬಿದನೂರಿಗೆ ಬಂದರು. ಸೋಮಶೇಖರ ಭೂಪಾಲನು ತನ್ನ ವಿವಾಹಕ್ಕೆ ವೈಭವದ ಏರ್ಪಾಡನ್ನು ಮಾಡಿಸಿದನು. ಅಂದು ಬಿದನೂರು ಅಮರಾವತಿ ಯಂತೆ ಕಂಗೊಳಿಸಿತು. ಅಳಕಾವತಿಯಂತೆ ಐಶ್ವರ್ಯ ಪೂರ್ಣವೆನಿಸಿತು. ಭಂಗಾರದ ಗೋಪುರದಿಂದ ಕಂಗೊಳಿಸುವ ಕುಲದೇವತೆ ಶ್ರೀ ನೀಲಕಂಠೇ ಶ್ವರ ದೇವಾಲಯವು ಅಲಂಕೃತವಾಗಿ ಕೈಲಾಸದಂತೆ ಕಂಗೊಳಿಸಿತು. ಶುಭ ಮುಹೂರ್ತದಲ್ಲಿ ಸೋಮಶೇಖರ ಭೂಪಾಲನಿಗೂ, ಚೆನ್ನಮ್ಮಾಜಿಗೂ ವಿವಾಹವು ನೆರವೇರಿತು. ಅದಕ್ಕಾಗಿ ದಾನಧರ್ಮಗಳು ನಡೆದವು. ಬ್ರಾಹ್ಮಣ ರಿಗೂ, ಜಂಗಮರಿಗೂ, ಸಾಧುಸಂತರಿಗೂ ಭೂರಿ ದಕ್ಷಿಣೆದೊರೆಯಿತು. ದೇವಾ ಲಯದಲ್ಲಿ ಪೂಜಾದಿಗಳು ನಡೆದುವು. ಭಂಗಾರದ ಪಲ್ಲಕ್ಕಿಯಲ್ಲಿ ಚತುರಂಗಬಲ ಸಹಿತ ರಾಜದಂಪತಿಗಳ ಮೆರೆವಣಿಗೆ ರಾಜಧಾನಿಯಲ್ಲಿ ನಡೆದು ಜನರ ಕಣ್ಮನ

ಗಳಿಗೆ ಹಬ್ಬವಾಯಿತು. ಮದುಮಕ್ಕಳು ದೇವೇಂದ್ರಶಚೀದೇವಿಯರಂತೆ ಕಂಗೊಳಿಸಿದರು. ಕೆಳದಿಯ ಭಾಗ್ಯೋದಯ ಕಳೆಗೊಂಡಿತೆಂದು ಜನ ಭಾವಿಸಿದರು. ಸೋಮಶೇಖರ ಭೂಪಾಲನು ಅನುರೂಪಳಾದ ಧರ್ಮಪತ್ನಿ ದೊರೆತುದಕ್ಕೆ ಆನಂದಿಸಿದನು. ಇದು ಮನೆದೇವತೆಯಾದ ಶ್ರೀ ರಾಮೇಶ್ವರನ ಅನುಗ್ರಹ ವೆಂದು ಭಾವಿಸಿದನು. 'ನೀನೊಲಿದರೆ ಕೊರಡು ಕೊನರುವುದಯ್ಯಾ, ಬರಡು ಹಯನಹುದಯ್ಯಾ' ಎಂದು ಬಸವಣ್ಣನವರು ಹೇಳಿರುವರಲ್ಲವೆ?

ಚೆನ್ನಮ್ಮಾಜಿಯ ಚರಿತ್ರೆಗೆ ಸಂಬಂಧಿಸಿದ ಈ ಗ್ರಂಥದಲ್ಲಿ ಕೆಳದಿಯ ರಾಜ್ಯಸ್ಥಾಪನೆ ಮತ್ತು ರಾಜ್ಯೋದಯಗಳಿಗೆ ಸಂಬಂಧಿಸಿದ ಸಂಗತಿಯನ್ನು ಪ್ರಿಯವಾಚಕರಿಗೆ ಮುಂದಿನ ಪ್ರಕರಣಗಳಲ್ಲಿ ಪರಿಚಯ ಮಾಡಿಕೊಡಲು ಬಯಸುತ್ತೇವೆ. ಅನಂತರ ಚೆನ್ನಮ್ಮಾಜಿಯ ಪ್ರಭಾವಪೂರ್ಣವಾದ ಚರಿತ್ರೆಯನ್ನು ಮನದಟ್ಟುಮಾಡಿಕೊಳ್ಳಲು ವಾಚಕರಿಗೆ ಅನುಕೂಲವಾಗುತ್ತದೆ. ಕನ್ನಡನಾಡಿನಲ್ಲಿ ನಮ್ಮಜನ ಕೆಳದಿಯ ರಾಜರು ಮಾಡಿದ ಘನತಮವಾದ ಕಾರ್ಯಕಲಾಪಗಳನ್ನು ಮುಂದಿನ ಪ್ರಕರಣದಲ್ಲಿ ಅರಿಯಬಹುದು.

೩. ಕೆಳದಿಯ ರಾಜ್ಯಸ್ಥಾಪನೆ

ಪ್ರಕೃತಿ ಸೌಂದರ್ಯದಿಂದಲೂ, ಐತಿಹಾಸಿಕ ಮಾಹಾತ್ಮ್ಯದಿಂದಲೂ, ಗಗನ ಚುಂಬಿತಗಳಾದ ಮರಗಿಡಗಳಿಂದಲೂ ಕೂಡಿದ ಮಲೆನಾಡು ಅನಾದಿ ಕಾಲದಿಂದಲೂ ಪರಿಶೋಭಿಸುತ್ತಿದೆ. ಈ ಗಣ ವಿಶಾಲ ಮೈಸೂರು ರಾಜ್ಯದಲ್ಲಿ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕಾರವಾರ ಜಿಲ್ಲೆಗಳನ್ನುಸಾಮಾನ್ಯವಾಗಿ 'ಮಲೆನಾಡು'ಎಂದು ನಾವು ಕರೆಯಬಹುದು. ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲೂ ಈ ಮಲೆನಾಡಿನ ಶರಗು ಹಬ್ಬಿದೆ. ನೀಲಗಿರಿ ಕೂಡ ಮಲೆನಾಡಿನ ಭಾಗವೇ ಸರಿ. ಪಶ್ಚಿಮ ಘಟ್ಟವು ಈ ಮಲೆನಾಡಿನಲ್ಲಿ ಹಾದುಹೋಗಿರುವುದರಿಂದ ಇದರ ಸೌಂದರ್ಯವು ದ್ವಿಗುಣಿತವಾಗಿದೆ.

ಈ ಭಾಗದಲ್ಲಿ ಮಳೆಯು ಹೆಚ್ಚಾಗಿ ಬೀಳುವುದು ಪ್ರಕೃತಿ ಸಹಜವಾಗಿದೆ. ಎಲ್ಲಿ ಮರ ಹೆಚ್ಚೋ ಅಲ್ಲಿ ಮಳೆ ಹೆಚ್ಚು. ಇದಕ್ಕೆ 'ಮಲೆ' ಅಂದರೆ ಬೆಟ್ಟಗಳ, 'ನಾಡು' ಅಂದರೆ ದೇಶ ಎಂದು ಹೆಸರಾಗಿದ್ದರೂ, ಇದು 'ಮಳೆಯ ನಾಡು' ಸಹ ಆಗಿದೆ. ಇಲ್ಲಿ ಬೆಲೆ ಬಾಳುವ ಕಾಫಿ, ಟೀ, ಮೆಣಸು, ಏಲಕ್ಕಿ, ಬಾಳೆ, ಭತ್ತ, ಅಡಿಕೆ ಹುಲುಸಾಗಿ ಬೆಳೆಯುತ್ತವೆ. ಘಮಘಮಿಸುವ ಚಂದನ ತರುಗಳಿಗೆ ಇದು ಹೆಸರಾಗಿದೆ. 'ಗಂಧದ ನಾಡಿದು ಮೈಸೂರು' ಎಂದು ಹಾಡಿದ ಕವಿಯು ಈ ಮಲೆನಾಡಿನಿಂದ ಸ್ಫೂರ್ತಿಯನ್ನು ಪಡೆದಿರಬೇಕು. ಲೋಕಪ್ರಸಿದ್ಧವಾದ ಗೇರುಸೊಪ್ಪೆ ಜಲಪಾತ* ಈ ಮಲೆನಾಡಿನಲ್ಲಿಯೇ ಇದೆ. ತುಂಗ, ಭದ್ರಾ, ನೇತ್ರಾವತಿ, ವರದಾ, ಶರಾವತಿ ಮತ್ತು ಕಾವೇರಿ ಮೊದಲಾದ ನದಿಗಳು ಈ ಮಲೆನಾಡಿನಲ್ಲಿಯೇ ಹುಟ್ಟುತ್ತವೆ. ಈ ಭಾಗದ ಜನರು ಕಷ್ಟಸಹಿಷ್ಣುಗಳೂ, ಸ್ವದೇಶಾಭಿಮಾನಿಗಳೂ, ಅತಿಥಿಪ್ರೇಮಿಗಳೂ ಸತ್ಯವಂತರೂ ಎನಿಸಿದ್ದಾರೆ. ಇದು ಶತ್ರುಗಳಿಗೆ ಅಗಮ್ಯವಾದ ಸ್ಥಳವಾದುದರಿಂದ, ಕೆಳದಿ, ಬಿಳದಿ, ಸ್ವಾದಿ, ಕೊಡಗು ಮೊದಲಾದ ಸಣ್ಣ ಪುಟ್ಟ ರಾಜ್ಯಗಳು ಆಳಿ

---

* Jog Falls

ಾಳಿದುವೆಂದು ತಿಳಿದು ಬರುತ್ತದೆ. ಹೊಯ್ಸಳರ ರಾಜಧಾನಿ, ಹಳೇ
ೀಡು ಸಹ ಮಲೆನಾಡಿನಲ್ಲಿಯೇ ಇವೆ.

ಈ ಗಣ ವಿಶಾಲ ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ ಸಾಗರ
ಾಲ್ಲೂಕಿನಲ್ಲಿ 'ಕೆಳದಿ' ಎಂಬ ಊರಿರುವುದು. ಇದು ಕನ್ನಡ ಮಾತೆಯ
ುಖಕಮಲವೆಂಬಂತೆ ಕಂಗೊಳಿರುತ್ತಿದೆ. ಈ ಕೆಳದಿಗೆ ಅನತಿ ದೂರ
ಲ್ಲಿ 'ಹಳ್ಳಿ ಬಯಲು' ಎಂಬ ಗ್ರಾಮ ಒಂದಿದ್ದಿತು. ಅಲ್ಲಿ ಕ್ರಿ.ಶ. ೧೫೦೦
ಲ್ಲಿ ಕೃಷಿಕರ್ಮದಿಂದ ಜೀವಿಸುತ್ತಿದ್ದ **ಬಸವಪ್ಪ** ಎಂಬ ಗೃಹಸ್ಥನಿದ್ದನು.
ತನು ಶಿವಭಕ್ತನಾಗಿಯೂ ಆದರ್ಶಗೃಹಸ್ಥನಾಗಿಯೂ ಇದ್ದನು. ಈತನ
ರ್ಮಪತ್ನಿ **ಬಸವಾಂಬೆ.** ಈ ಪುಣ್ಯದಂಪತಿಗಳ ಗರ್ಭದಲ್ಲಿ **ಚೌಡಪ್ಪ,**
ದ್ರಪ್ಪ ಎಂಬ ಇಬ್ಬರು ಸುಪುತ್ರರು ಜನಿಸಿದರು. ಇವರು ರಾಮ
ಕ್ಷ್ಮಣರಂತೆ ನೀತಿವಂತರಾಗಿಯೂ, ಭೀಮಾರ್ಜುನರಂತೆ ಪರಾಕ್ರಮ ಶಾಲಿ
ಳಾಗಿಯೂ, ಕುಶಲವರಂತೆ ಹೊಂದಿಕೊಂಡು ಹೋಗುವಂತಹವರಾಗಿಯೂ
ರೆಹೊರೆಯ ಜನಗಳಿಗೆ ಪ್ರೀತಿ ಪಾತ್ರರಾಗಿಯೂ ಗಣ್ಯತೆಯನ್ನು ಪಡೆದರು.

ಸುಪುತ್ರರಾದ **ಚೌಡಪ್ಪ** ಮತ್ತು **ಭದ್ರಪ್ಪ** ಎಲ್ಲ ವಿಧದಿಂದಲೂ ಅಭಿ
ವೃದ್ಧಿಯನ್ನು ಪಡೆದು ಮನೆತನವನ್ನು ನಿರ್ವಹಿಸುವಂತೆ ಆದುದನ್ನು
ಂಡು ತಂದೆ ತಾಯಿಗಳಾದ ಬಸವಪ್ಪ, ಬಸವಾಂಬೆಯರು ಹರ್ಷಿತರಾದರು.
ಯೋಗ್ಯರಾದ ಮಕ್ಕಳನ್ನು ಕಂಡು ಸಂತೋಷಿಸುವುದಕ್ಕಿಂತ ತಂದೆ ತಾಯಿ
ಳಿಗೆ ಸಂಸಾರದಲ್ಲಿ ಹೆಚ್ಚಿನ ಲಾಭವೇನಿದೆ? ಮಕ್ಕಳ ಅಭ್ಯುದಯದ
ಾರ್ಥನೆಯನ್ನು ಪರಮೇಶ್ವರನಿಗೆ ಅರುಹಲು ಪಯಣಗೊಂಡನೋ ಎಂಬಂತೆ
ಂದೆಯಾದ ಬಸವಪ್ಪನು ಇಹ ಲೋಕಯಾತ್ರೆಯನ್ನು ಮುಗಿಸಿ ಶಿವನ ಸನ್ನಿಧಿ
ಯನ್ನು ಸೇರಿದನು. ಬಸವಪ್ಪನ ಮರಣವು ಮನೆಯವರಿಗೆಲ್ಲಾ ಹೆಚ್ಚಿನ
ವ್ಯಾಕುಲವನ್ನು ಉಂಟುಮಾಡಿತು. ಬಸವಾಂಬೆಯು ಪತಿವಿಯೋಗದಿಂದ
ಸವಳಿದಳು. ಒಂದು ಕಡೆ ಗಂಡನ ವಿಯೋಗದ ಚಿಂತೆ, ಇನ್ನೊಂದು
ಡೆ ಮಕ್ಕಳ ಅಭ್ಯುದಯದ ಆಕಾಂಕ್ಷೆ ಇವು ಅವಳ ಮನಸ್ಸನ್ನು ಉಯ್ಯಾಲೆ
ಯಂತೆ ತೂಗಾಡಿಸಿದುವು. ಕಾಲವು ಎಲ್ಲವನ್ನೂ ಮರೆಸುತ್ತದೆ ಎಂಬ
ಾಜ್ಞರ ಮಾತಿನಂತೆ ಸುಪುತ್ರರಾದ ಚೌಡಪ್ಪ, ಭದ್ರಪ್ಪರ ಅಭ್ಯುದಯದ
ಳಿಕೆನಲ್ಲಿ ಮನಸ್ಸಿಗೆ ತಿಳಿವಳಿಕೆಯನ್ನು ತಂದುಕೊಂಡು ಬಸವಾಂಬೆಯು

ಮನೆತನದ ಅಭ್ಯುದಯಕಾರ್ಯಗಳಲ್ಲಿ ತೊಡಗಿದಳು. ಸಾಧ್ವಿಯರ ರೀತಿಯೇ ಹೀಗೆ.

ಹಿರಿಯ ಮಗನಾದ ಚೌಡಪ್ಪನು ಒಂದು ದಿನ ತನ್ನ ಮನೆಯ ಪಡಸಾಲೆಯಲ್ಲಿ ಸುಖನಿದ್ರೆಯಲ್ಲಿದ್ದನು. ಆಗಸದಲ್ಲಿ ನಕ್ಷತ್ರಗಳು ಹೊಳೆಯುತ್ತಿದ್ದವು. ಚಂದ್ರನು ಮಂದಹಾಸದಿಂದ ಬೆಳುದಿಂಗಳನ್ನು ಬೀರುತ್ತಿದ್ದನು. ಲೋಕವು ಪ್ರಶಾಂತವಾಗಿದ್ದಿತು. ಮನೆಯವರೂ, ಊರಿನವರೂ, ನಿದ್ರಾಂಗನೆಯಿಂದ ಆವರಿಸಲ್ಪಟ್ಟಿದ್ದರು. ಸುಮಾರು ಅದು ಬೆಳಗಿನ ಜಾವದ ಸಮಯವಿರಬೇಕು. ಚೌಡಪ್ಪನಿಗೆ ಈ ಮುಂದಿನಂತೆ ಶುಭ ಸ್ವಪ್ನವಾಯಿತು.

ವಿಭೂತಿ ರುದ್ರಾಕ್ಷಿಗಳಿಂದಲೂ, ಜಡೆಮುಡಿಗಳಿಂದಲೂ, ಕಾವಿಯ ವಸ್ತ್ರದಿಂದಲೂ ಕಂಗೊಳಿಸುವ ಮಂಗಳಮೂರ್ತಿಯಾದ ಓರ್ವ ಜಂಗಮನು ಭಾಗ್ಯಶಾಲಿಯಾದ ಚೌಡಪ್ಪನ ಸ್ವಪ್ನದಲ್ಲಿ ಕಾಣಿಸಿಕೊಂಡನು. "ಚೌಡಪ್ಪ, ನಿನ್ನ ಭಾಗ್ಯದ ಬಾಗಿಲು ತೆರೆಯಿತು. ಇನ್ನು ಎಚ್ಚರಗೊಳ್ಳು. ಕೆಳದಿಯ ಪಕ್ಕದಲ್ಲಿರುವ **ಸೀಗೆಬಯಲು** ಎಂಬ ಹಳ್ಳಿಯೊಂದರಲ್ಲಿ ರಾಮೇಶ್ವರ ಲಿಂಗವು ಸೀಗೆಯ ಮೆಳೆಯಲ್ಲಿ ಭೂಮಿಯಲ್ಲಿ ಹೂತುಹೋಗಿದೆ. ಪ್ರತಿದಿನವೂ ನಿನ್ನ ಮನೆಯ ಕಪಿಲೆಯ ಬಣ್ಣದ ಹಸು ಅಲ್ಲಿ ಹೋಗಿ ಹಾಲನ್ನು ಕರೆಯುತ್ತಿದೆ. ಅದನ್ನು ನೀನು ಗುರುತಿಸಿ ಆ ಲಿಂಗವನ್ನು ಹೊರತೆಗೆದು, ಪ್ರತಿಷ್ಠೆ ಮಾಡಿಸಿ ಗುಡಿ ಗೋಪುರವನ್ನು ಕಟ್ಟಿಸಿ ಭಕ್ತಿಯಿಂದ ಅರ್ಚಿಸು. ಅದರಿಂದ ನಿನಗೆ ಸಕಲಸಂಪತ್ತುಗಳೂ ರಾಜ್ಯ ಪ್ರಾಪ್ತಿಯೂ ಆಗುತ್ತದೆ. ನಿನ್ನ ಮನೆತನದ ಕೀರ್ತಿಯು ಆ ಚಂದ್ರಾರ್ಕವಾಗುತ್ತದೆ". ಎಂದು ಹೇಳಿ ಕಣ್ಮರೆಯಾದನು.

ಸ್ವಪ್ನವನ್ನು ತಿಳಿದೆದ್ದು ಚೌಡಪ್ಪನು ಚಕಿತನಾಗಿ ನಡೆದ ಕನಸಿನ ವೃತ್ತಾಂತವನ್ನು ತಾಯಿಯಾದ ಬಸವಾಂಬೆಗೂ, ತಮ್ಮನಾದ ಭದ್ರಪ್ಪನಿಗೂ ಹೇಳಿದನು. ಅವರು ಇದು ಶುಭಸ್ವಪ್ನವೆಂದರು. ಸ್ವಪ್ನದಲ್ಲಿ ಬಂದ ಜಂಗಮನು ಸಾಕ್ಷಾತ್ ಪರಶಿವನೇ ಆಗಿರಬೇಕೆಂದು ತರ್ಕಿಸಿದರು. ಸ್ವಪ್ನವೃತ್ತಾಂತವನ್ನು ಕಾರ್ಯಗತ ಮಾಡಬೇಕೆಂದು ತೀರ್ಮಾನಿಸಿದರು. ಮರುದಿನ ಚೌಡಪ್ಪ ಭದ್ರಪ್ಪ ಸಹೋದರರು ಸೂರ್ಯೋದಯಕ್ಕೆ ಮೊದಲೇ ಎದ್ದು, ಸ್ನಾನ, ಶಿವಪೂಜೆ ಮೊದಲಾದುವನ್ನು ಮುಗಿಸಿಕೊಂಡು ತಮ್ಮ

ಗುರುದೇವತೆಗಳ ನಾಮವನ್ನು ಸ್ಮರಿಸಿಕೊಂಡು, ತಮ್ಮ ತಾಯಿಯಾದ ಬಸವಾಂಬೆಗೆ ನಮಸ್ಕರಿಸಿ, ಸ್ವಪ್ನವೃತ್ತಾಂತವನ್ನು ಪ್ರತ್ಯಕ್ಷಗೊಳಿಸುವ ಕಾರ್ಯವನ್ನು ಕೈಗೊಂಡಿರುವುದಾಗಿ ಹೇಳಿ, ಹಾರೆ, ಗುದ್ದಲಿ, ಪಿಕಾಸಿ, ಮಚ್ಚು, ಕೊಡಲಿ ಮೊದಲಾದ ಉಪಕರಣಗಳ ಸಹಿತವಾಗಿ ಮಿತಪರಿವಾರದೊಡನೆ ತಮ್ಮ ಮನೆಯ ಕಪಿಲೆಯ ಹಸು ಹಾಲುಕರೆಯುತ್ತಿದ್ದ ಸೀಗೆಮೆಳೆ ಪ್ರದೇಶಕ್ಕೆ ಹೋದರು. ಆ ಸೀಗೆಮೆಳೆಯನ್ನು ಬಿಡಿಸಿ ಅದನ್ನೆಲ್ಲಾ ಸವರಿ ಬಯಲು ಮಾಡಿಸಿ ಅಲ್ಲಿರುವ ಹುತ್ತವನ್ನು ನೋಡಿ ಸ್ವಪ್ನದ ಕುರುಹು ಇಲ್ಲಿಯೇ ಇರಬೇಕೆಂದು ತರ್ಕಿಸಿ ಆ ಹುತ್ತವನ್ನು ಅಗಿಸಿ ನೋಡಲಾಗಿ ಅಲ್ಲಿ ಒಂದು ಪ್ರಕಾಶಮಾನವಾದ ಶಿವಲಿಂಗವು ಕಾಣಿಸಿಕೊಂಡಿತು. ಅದನ್ನು ಕಂಡು, ಚೌಡಪ್ಪ ಭದ್ರಪ್ಪ ಸಹೋದರರಿಗೆ ಮಹದಾನಂದವಾಯಿತು. ಕೈಲಾಸ ಪತಿಯಾದ ಪರಮೇಶ್ವರನು ತಮ್ಮನ್ನು ಅನುಗ್ರಹಿಸಲು ಈ ಲಿಂಗ ರೂಪದಲ್ಲಿ ಕಂಗೊಳಿಸಿದನೆಂದು ನಲಿದಾಡಿದರು. ಆ ಲಿಂಗದ ಮೇಲೆ ಒಂದು ಗುಡಿಸಲನ್ನು ಕಟ್ಟಿದರು. ಪಕ್ಕದಲ್ಲಿ ಹರಿಯುತ್ತಿದ್ದ ನಿರ್ಮಲೋದಕವನ್ನು ತಂದು ಶಿವಲಿಂಗವನ್ನು ಅಭಿಷೇಕಿಸಿದರು. ಬಗೆ ಬಗೆಯ ಪತ್ರ ಪುಷ್ಪಗಳನ್ನು ತಂದು ಪೂಜಿಸಿದರು. ಶಿವರೂಪಿ ಜಂಗಮನು ಸ್ವಪ್ನದಲ್ಲಿ ಹೇಳಿದಂತೆ ಆ ಲಿಂಗವನ್ನು 'ರಾಮೇಶ್ವರ' ಎಂಬುದಾಗಿ ಕರೆದರು. ಹೀಗೆ ದೇವರು ತಮ್ಮನ್ನು ಅನುಗ್ರಹಿಸಿದ ಶುಭದಿನವನ್ನು ಪವಿತ್ರವನ್ನಾಗಿ ಭಾವಿಸಿ ಊರಿನವರಿಗೆಲ್ಲಾ ಸಂತೋಷದ ಸಮಾರಂಭವನ್ನು ಏರ್ಪಡಿಸಿದರು. ಈ ಪ್ರಸಂಗವು ಆ ಹಳ್ಳಿಯ ಜನರಿಗೆ ಅತಿಶಯವಾದ ಮೋದವನ್ನೇ ಉಂಟು ಮಾಡಿತು. ಶಿವಾನುಗ್ರಹವಾದವರು ಭಾಗ್ಯಶಾಲಿಗಳಲ್ಲವೆ ?

"ಕುಂಕುಮ ಹಚ್ಚಿದವರ ಹಣೆಗೇ ಕುಂಕುಮ ಹಚ್ಚುವರು" ಎಂಬ ನಾಣ್ಣುಡಿಯೊಂದು ಕನ್ನಡ ನಾಡಿನಲ್ಲಿ ಬಳಕೆಯಲ್ಲಿದೆ. ಹೀಗೆಯೇ ದೇವರ ದಯೆಯಿಂದ ಯಾರಿಗೆ ಶುಭವೊದಗುತ್ತದೋ ಅವರಿಗೇ ಮೇಲಿಂದ ಮೇಲೆ ಶುಭಪರಂಪರೆಗಳು ಉಂಟಾಗುವುದು ಸ್ವಭಾವವೆಂದು ಕಾಣುತ್ತದೆ. ಭಾಗ್ಯಶಾಲಿಯಾದ ಚೌಡಪ್ಪನಿಗೆ ಇನ್ನೊಂದು ಶುಭೋದಯದ ಕಾಲ ಸನ್ನಿಹಿತವಾಯಿತು. ಒಂದು ದಿನ ಕಾಯಕನಿಷ್ಠನಾದ ಚೌಡಪ್ಪನು ಕೃಷಿ

ಕರ್ಮಕ್ಕಾಗಿ ಗದ್ದೆಗೆ ಹೋಗಿದ್ದನು. ಮುಂಜಾನೆಯಿಂದ ಮಧ್ಯಾಹ್ನದ ವರೆಗೆ ಬಹಳವಾಗಿ ದುಡಿದನು. ಅದನ್ನು ಮುಗಿಸಿಕೊಂಡು ಮನೆಗೆ ಬರುವಾಗ ಸೂರ್ಯನಾರಾಯಣನು ನೆತ್ತಿಯ ಮೇಲೆ ಬಂದಿದ್ದನು. ಸೂರ್ಯನ ಕಿರಣಗಳು ಪ್ರಖರವಾಗಿದ್ದುವು. ನೆಲದ ಮೇಲಿಟ್ಟ ಕಾಲುಗಳು ಹಪ್ಪಳವಾಗುತ್ತಿದ್ದುವು. ಬೀಸುತ್ತಿದ್ದ ಗಾಳಿ ಬೆಚ್ಚಗಾಯಿತು. ತಲೆಯ ಮೇಲೆ ಬಿಸಿಲು, ಕಾಲ ಕೆಳಗೆ ಬೆಂಕಿ, ಹೊಟ್ಟೆಯಲ್ಲಿ ಹಸಿವು, ಸಾಲದುದಕ್ಕೆ ಬಿಸಿಲುಗಾಳಿ, ಇವೆಲ್ಲವೂ ಒಟ್ಟುಗೂಡಿ ಕಟ್ಟಾಳಾದ ಚೌಡಪ್ಪನನ್ನು ಸೊರಗಿಸಿದವು. ತನ್ನ ಮುಂದೆ ಕಂಡ ಒಂದು ಮಾವಿನಮರದ ನೆರಳಿನಲ್ಲಿ ಅವನು ವಿಶ್ರಾಂತಿಗಾಗಿ ನೆಲವನ್ನು ಆಶ್ರಯಿಸಿದನು. ಬಳಲಿಕೆ, ಹಾಗೂ ಬೇಸಿಗೆಯ ಫಲವಾಗಿ ನಿದ್ರೆ ಅವನನ್ನು ಆವರಿಸಿತು. ನಿದ್ರಾದೇವಿಗೆ ತಿಪ್ಪೆ ಉಪ್ಪರಿಗೆಗಳೆಂಬ ಪಕ್ಷಪಾತವಿಲ್ಲವೆಂದು ಪ್ರಾಚೀನರು ಹೇಳುವ ಮಾತನ್ನು ನಾವಿಲ್ಲಿ ಸ್ಮರಿಸಬಹುದು. ಮೈಮೇಲೆ ಎಚ್ಚರ ತಪ್ಪಿ ಗೊರಕೆಗಳನ್ನು ಹೊಡೆಯುತ್ತಾ ಚೌಡಪ್ಪನು ಮಲಗಿದನು. ಈಶ್ವರೇಚ್ಛೆಯನ್ನು ಬಲ್ಲವರಾರು ? ಅಡವಿಯಲ್ಲಿ ಸಂಚರಿಸುತ್ತಿದ್ದ ಒಂದು ಕೃಷ್ಣಸರ್ಪವು ತನ್ನ ಹೆಡೆಯನ್ನು ಬಿಚ್ಚಿ ಮಂದಮಂದವಾಗಿ ಚೌಡಪ್ಪ ಮಲಗಿದ್ದ ಮಾವಿನಮರದ ಪ್ರದೇಶಕ್ಕೆ ಬಂದಿತು. ಸುಕೃತಶಾಲಿಯಾದ ಅವನ ತಲೆಯಮೇಲೆ ಹೆಡೆಯನ್ನು ಆಡಿಸುತ್ತಾ ತೂಗಾಡುತ್ತಿದ್ದಿತು. ಅದೇ ಸಮಯಕ್ಕೆ ಊಟದ ಹೊತ್ತಾದರೂ ಮನೆಗೆ ಬಾರದಿರುವ ಮಗನನ್ನು ಹುಡುಕಿಕೊಂಡು ತಾಯಿ ಬಸವಾಂಬೆ ತನ್ನ ಗದ್ದೆಯ ಕಡೆಗೆ ವೇಗವಾಗಿ ಬರುತ್ತಿದ್ದಳು. ದಾರಿಯಲ್ಲಿ ಮಾವಿನಮರದ ತಣ್ಣೆಳಲಲ್ಲಿ ಚೌಡಪ್ಪ ಮಲಗಿರುವುದನ್ನು ತಾಯಿ ಬಸವಾಂಬೆಯು ನೋಡಿದಳು. ಕೃಷ್ಣಸರ್ಪವು ಮಗನ ತಲೆಯಮೇಲೆ ಹೆಡೆಯಾಡುತ್ತಿರುವುದನ್ನು ನೋಡಿ ಅವಳು ಹೌಹಾರಿಹೋದಳು ! ತನ್ನ ಕುಲದೇವತೆಯಾದ ರಾಮೇಶ್ವರನಿಗೆ ಮೊರೆಯಿಟ್ಟಳು. ಒಂದು ಕಡೆ ಮಗನ ಮೇಲಣ ಮಮತೆ ! ಇನ್ನೊಂದು ಕಡೆ ಕೃಷ್ಣಸರ್ಪದ ಭಯ ! ಇವೆರಡೂ ಅವಳನ್ನು ಸ್ತಂಭೀಭೂತಳನ್ನಾಗಿ ಮಾಡಿದುವು. ಇದ್ದಕ್ಕಿದ್ದಂತೆಯೇ ಆ ಸರ್ಪವು ಸ್ಥಳವನ್ನು ಬಿಟ್ಟು ಮುಂದೆ ಹೋಯಿತು. ತಾಯಿ ಬೇಗಬೇಗನೆ ಬಂದು

ಮಲಗಿದ್ದ ಮಗನನ್ನು ಮುಟ್ಟಿ ತಟ್ಟಿ ಚೌಡಪ್ಪಾ, ಎಂದು ಕೂಗಿ ಏಳಿಸಿದಳು. ತಾಯಿಯ ಅಮೃತಮಯವಾದ ಕರಸ್ಪರ್ಶದಿಂದ, ಆಕೆಯ ಕೂಗು ಕಿವಿಯನ್ನು ತಾಕಿದುದರಿಂದ ನಿದ್ರೆಯನ್ನು ತಿಳಿದು ಚೌಡಪ್ಪನು ಕಣ್ಣೊರಳಿಸಿಕೊಂಡು ಎದ್ದನು. ಸೂರ್ಯನು ಪಶ್ಚಿಮ ಸಮುದ್ರದ ಕಡೆಗೆ ಧಾವಿಸುತ್ತಿರುವುದನ್ನು ಕಂಡನು. ತಾನು ಬಹಳಹೊತ್ತು ಮಲಗಿದ್ದೆನೆಂಬುದನ್ನು ಆಗ ಅರಿತುಕೊಂಡನು. ತಾಯಿಯು ಸರ್ಪವು ಮಗನ ತಲೆಯಮೇಲೆ ಹೆಡೆಯಾಡಿಸಿದ ಅಂಶವನ್ನು ತಿಳಿಸಿದಳು ! ಆಗ ಚೌಡಪ್ಪನು ಜಗ್ಗನೆದ್ದು ಸರ್ಪವು ಹೋದೆಡೆಗೆ ದಿಟ್ಟಿಸಿದನು ! ಅಲ್ಲಿ ಆ ಶಿವನ ಆಭರಣವು ಇವನಿಗಾಗಿಯೇ ದಾರಿಯನ್ನು ಕಾಯುತ್ತಾ ಕುಳಿತಿತ್ತು. ಧೈರ್ಯಶಾಲಿಯೂ, ಲೋಕಾನುಭವಿಯೂ ಆದ ಚೌಡಪ್ಪನು ಆ ಸರ್ಪವು ಹೋದ ಹಾಗೆ ಗಮಿಸಿದನು. ಆಗ ಆ ಸರ್ಪರಾಜನು ಇವನ ಗದ್ದೆಯಿದ್ದ ಪ್ರದೇಶಕ್ಕೆ ಕೊಂಡೊಯ್ದು ಒಂದು ಸ್ಥಳವನ್ನು ತನ್ನ ಹೆಡೆಯಿಂದ ಮುಟ್ಟಿ ಮುಟ್ಟಿ ತೋರಿಸಿತು. ಆ ಸ್ಥಳದಲ್ಲಿ ನಲಿದಾಡಿತು. ಚೌಡಪ್ಪನು ನೋಡುನೋಡುತ್ತಿದ್ದಂತೆಯೇ ಆ ಸರ್ಪವು ಅದೃಶ್ಯವಾಯಿತು. ಬುದ್ಧಿಶಾಲಿಯಾದ ಚೌಡಪ್ಪನು ಆ ಸರ್ಪವು ತೋರಿಸಿದ ಸ್ಥಳವನ್ನು ಗುರುತುಮಾಡಿದನು. ಅಲ್ಲಿಂದ ಸಂಜೆಯ ವೇಳೆಯಾಗಲು ತಾಯಿ ಬಸವಾಂಬೆ ಸಹಿತ ಮನೆಗೆ ಬಂದನು. ನಡೆದ ಎಲ್ಲ ವೃತ್ತಾಂತವನ್ನೂ ಸಹೋದರನಾದ ಭದ್ರಪ್ಪನಿಗೆ ತಿಳಿಸಿದನು. ಆಗ ಅಣ್ಣ ತಮ್ಮಂದಿರೂ, ತಾಯಿಯೂ ಮೂವರೂ ಸೇರಿ ತಮಗೆ ಕಾಣಿಸಿಕೊಂಡ ಸರ್ಪವು ಸಾಮಾನ್ಯ ವಾದುದಲ್ಲ. ಶಿವನ ಆಭರಣವಾದ ಆ ಸರ್ಪವು ಶಿವಾನುಗ್ರಹ ರೂಪವಾಗಿಯೇ ಬಂದಿತು. ಅದು ಗುರುತುಮಾಡಿದ ಸ್ಥಳದಲ್ಲಿ ಏನೋ ಮಹತ್ವವಿರಬೇಕು, ಅದನ್ನು ನಾಳಿನ ಬೆಳಗ್ಗೆ ಹೋಗಿ ಆ ಭೂಮಿಯನ್ನು ಅಗಿದು ನೋಡಿ ಪರೀಕ್ಷಿಸಬೇಕೆಂದು ತೀರ್ಮಾನಿಸಿದರು. ಇದರಲ್ಲಿ ತಮಗಾವುದೋ ಶುಭೋದಯವಿರಬೇಕೆಂದು ತರ್ಕಿಸಿದರು. ಸರ್ವಜ್ಞನಾದ ಶಿವನ ಕರುಣೆಯನ್ನು ಬಲ್ಲವರಾರು ?

ಆ ರಾತ್ರಿಯನ್ನು ಸಹೋದರರು ಕುತೂಹಲದಿಂದ ಕಳೆದರು. ಮರುದಿನ ಕೋಳಿಗಳು ಕೊಕ್ಕೋ! ಎಂದು ಕೂಗುವ ಸಮಯಕ್ಕೆ ಸರಿಯಾಗಿ

ಚೌಡಪ್ಪ, ಭದ್ರಪ್ಪರು ನಿದ್ರೆಯಿಂದ ಎಚ್ಚೆತ್ತರು. ಆ ಕುಕ್ಕುಟಗಳ ಧ್ವನಿಯು ಚೌಡಪ್ಪ, ಭದ್ರಪ್ಪರ ಭಾಗ್ಯೋದಯ ಸೂಚಕಗಳಾದ ಕೊಂಬು ಕಹಳೆಗಳೋ ಎಂಬಂತೆ ಕೇಳಿಬಂದಿತು. ಇವರ ಸೌಭಾಗ್ಯ ರವಿಯು ಪೂರ್ವದಿಕ್ಕಿನಲ್ಲಿ ಕಾಣಿಸಿಕೊಂಡನು. ಸಹೋದರರು ಮಿತಪರಿವಾರದೊಡನೆ ಸರ್ಪವು ಗುರುತುತೋರಿಸಿದ ಸ್ಥಳಕ್ಕೆ ಧಾವಿಸಿದರು. ಆ ಪ್ರದೇಶವನ್ನು ಅಗಿದರು. ಅಲ್ಲಿ ಭಂಗಾರದ ನಾಣ್ಯಗಳಿಂದ ಭರಿತವಾದ ಒಂದು ದೊಡ್ಡ ನಿಕ್ಷೇಪವು ಅವರಿಗೆ ಕಾಣಿಸಿತು. ಆ ನಿಕ್ಷೇಪದಮೇಲೆ "ನಾಗರಮುರಿ" ಎಂಬ ಒಂದು ಕತ್ತಿಯು ಶೋಭಿಸುತ್ತಿದ್ದಿತು. ಚೌಡಪ್ಪ, ಭದ್ರಪ್ಪರು ಈ ಅಪೂರ್ವವಾದ ಸಂಪತ್ತನ್ನು ನೋಡಿ ಇದನ್ನು ರಾಮೇಶ್ವರನ ಅನುಗ್ರಹವೆಂದು ಭಾವಿಸಿದರು. ಆ ನಿಕ್ಷೇಪಕ್ಕೆ ಕೈಮುಗಿದು ಅರ್ಚಿಸಿ ಅದನ್ನು ವಶಪಡಿಸಿಕೊಂಡರು. ಅದರ ರಕ್ಷಣೆಗಾಗಿ ಅಲ್ಲೊಂದು ಮನೆಯನ್ನು ಕಟ್ಟಿದರು. ತಮ್ಮನ್ನು ಅನುಗ್ರಹಿಸಿದ ಆ ಸುಕ್ಷೇತ್ರದಲ್ಲಿಯೇ ಇನ್ನು ಮುಂದೆ ವಾಸಿಸತೊಡಗಿದರು.

ಕಾಲಕ್ರಮದಲ್ಲಿ ಚೌಡಪ್ಪ, ಭದ್ರಪ್ಪರು ತಮಗೆ ದೊರೆತ ಐಶ್ವರ್ಯದ ಫಲವಾಗಿ ಪ್ರಬಲರಾದರು. ಹಿರಿಯನಾದ ಚೌಡಪ್ಪನಿಗೆ ಅವನ ಧರ್ಮಪತ್ನಿಯ ಗರ್ಭಾಂಬುಧಿಯಲ್ಲಿ ಶುಭಯೋಗ ಶುಭಕರಣದಲ್ಲಿ, ಒಬ್ಬ ಸುಪುತ್ರನು ಜನಿಸಿದನು. ಗಂಡುಮಗನು ಹುಟ್ಟಿದ ಘಳಿಗೆ ಸಕಲ ರಾಜಲಕ್ಷಣಗಳಿಂದ ಕೂಡಿತ್ತು. ಕುಲಪುರೋಹಿತರು 'ಈತನು ಒಮ್ಮೆ ಈ ನಾಡಿನ ರಾಜನಾಗುವನು' ಎಂದು ಭವಿಷ್ಯವನ್ನು ಹೇಳಿದರು. ಚೌಡಪ್ಪನು ಅತಿಹರುಷದಿಂದ ತನ್ನ ಮಗನಿಗೆ ಜಾತಕರ್ಮವನ್ನೂ, ನಾಮಕರಣವನ್ನೂ ನಡೆಸಿದನು. ಗುರುಹಿರಿಯರ ಸಲಹೆಯಂತೆ ಅವನಿಗೆ 'ಸದಾಶಿವ' ಎಂದು ನಾಮಕರಣ ಮಾಡಿದನು. ಸದಾಶಿವನು ಶುಕ್ಲಪಕ್ಷದ ಚಂದ್ರನಂತೆ ಬಳೆದನು. ತಂದೆಯು ಮಗನಿಗೆ ರಾಜೋಚಿತವಾದ ವಿದ್ಯೆಗಳನ್ನು ಕಲಿಸಿದನು. ಗುಣ, ಶೀಲ, ರೂಪ, ವಿದ್ಯೆ, ಬುದ್ಧಿ ಇವುಗಳಿಂದ ಸದಾಶಿವನು ಪ್ರಖ್ಯಾತನೆನಿಸಿದನು. ಪ್ರಾಪ್ತವಯಸ್ಕನಾದ ಮಗನಿಗೆ ಚೌಡಪ್ಪನು, ವೀರಮ್ಮ, ಭದ್ರಮ್ಮ ಎಂಬ ಇಬ್ಬರು ಕನ್ಯೆಯರನ್ನು ತಂದು ಲಗ್ನಮಾಡಿದನು. ತಂದೆ ಮಕ್ಕಳಿಬ್ಬರೂ ಬಲಶಾಲಿಗಳಾಗಿ ಅಪಾರವಾದ ಐಶ್ವರ್ಯವನ್ನೂ, ಕೀರ್ತಿಯನ್ನೂಗಳಿಸಿ

ಗಣ್ಯರಾದರು. ತಮ್ಮ ಕುಲದೇವತೆಯಾದ ರಾಮೇಶ್ವರನಿಗೆ ದೊಡ್ಡ ಗುಡಿಯನ್ನು ಕಟ್ಟಿ ಅದನ್ನು ಗೋಪುರದಿಂದ ಅಲಂಕರಿಸಿದರು. ದಿನವೂ ದೇವರ ಪೂಜೆಯು ಶಾಸ್ತ್ರೋಕ್ತವಾಗಿ ನಡೆಯುವಂತೆ ಮಾಡಿದರು. ಕೆಳದಿಯಲ್ಲಿ ಒಂದು ಜಂಗಮರ ಮಠವನ್ನು ಸ್ಥಾಪಿಸಿ ಅದಕ್ಕೆ ಭೂಮಿ ಕಾಣಿಗಳನ್ನು ಕೊಟ್ಟರು. ಆ ಮಠವು ಇಲ್ಲಿ ಇಂದಿಗೂ ಕಂಗೊಳಿಸುತ್ತಿದೆ.

ಸದಾಶಿವನಾಯಕನು ಅತ್ಯಂತ ಪ್ರಬಲನಾದನು. ಸ್ವಭಾವತಃ ರಾಜಲಕ್ಷಣಗಳಿಂದ ಕಂಗೊಳಿಸುತ್ತಿದ್ದ ಅವನಿಗೆ ಜನತೆಯ ಬೆಂಬಲವು ದೊರೆಯಿತು. ಸಮರ್ಥರಾದ ಚೌಡಪ್ಪ, ಭದ್ರಪ್ಪ ಸಹೋದರರು ಆ ಸದಾಶಿವನಿಗೆ ಬೆಂಬಲವಾಗಿ ನಿಂತರು. ಅಕ್ಕ ಪಕ್ಕದ ಹಳ್ಳಿಗಳನ್ನು ಆಕ್ರಮಿಸಿದರು. ಕಡೆಗೊಮ್ಮೆ ಒಬ್ಬ ದೊಡ್ಡ ಪಾಳೆಯಗಾರನಂತೆ ನಡೆದುಕೊಂಡರು. ಸುತ್ತುಮುತ್ತಣ ಗ್ರಾಮಗಳು ಇವರ ಒಡೆತನವನ್ನು ಒಪ್ಪಿಕೊಂಡುವು. ಇವರು ಮಲೆನಾಡಿನ ಮುಖಂಡರೆನಿಸಿದರು. 'ಕೆಳದಿಯ ನಾಯಕರು' ಎಂಬ ಹೆಸರಿನಿಂದ ಇವರು ಎಲ್ಲೆಲ್ಲೂ ಕೀರ್ತಿಗೊಂಡರು.

ಹೀಗೆ ಕೆಳದಿಯ ನಾಯಕರು ಮಲೆನಾಡಿನಲ್ಲಿ ಪ್ರಬಲರಾದ ವಾರ್ತೆ, ಅಂದು ವಿಜಯನಗರದಲ್ಲಿ ಚಕ್ರವರ್ತಿಯಾಗಿ ರಾಜ್ಯಭಾರಮಾಡುತ್ತಿದ್ದ ಕೃಷ್ಣದೇವರಾಯನಿಗೆ ಅರಿಕೆಯಾಯಿತು. ದೂರದೃಷ್ಟಿಯುಳ್ಳವನೂ, ರಾಜನೀತಿವಿಶಾರದನೂ ಆದ ಆ ರಾಜನು, ದೂತರ ಮುಖದಿಂದ ಭಾಗ್ಯಶಾಲಿಗಳಾದ ಚೌಡಪ್ಪ ಮತ್ತು ಭದ್ರಪ್ಪರನ್ನು ವಿಜಯನಗರಕ್ಕೆ ಕರೆಸಿಕೊಂಡನು. ಧೀರರಾದ ಅವರ ವ್ಯಕ್ತಿತ್ವಕ್ಕೆ ಸಂತೋಷಪಟ್ಟನು. ಅವರನ್ನು ಒಳ್ಳೆಯ ಮಾತಿನಿಂದ ಸತ್ಕರಿಸಿದನು. ಬಡವರಾಗಿದ್ದ ಅವರಿಗೆ ಐಶ್ವರ್ಯ ಮತ್ತು ಪ್ರಾಬಲ್ಯ ಪ್ರಾಪ್ತವಾದ ರೀತಿ ಹೇಗೆ ಎಂದು ಅವರ ಮುಖದಿಂದಲೇ ಕೇಳಿ ತಿಳಿದನು. ಶಿವಕೃಪೆಗೆ ಪಾತ್ರರಾದ ಇವರು ಭಾಗ್ಯಶಾಲಿಗಳೆಂದು ಅರಿತನು. ಅವರಿಗೆ ಛತ್ರಿ, ಚಾಮರ, ಪಲ್ಲಕ್ಕಿಗಳನ್ನು ಕೊಟ್ಟು ಸತ್ಕರಿಸಿದನು. ಸನ್ನಿಹಿತವಾದ ಒಂದು ಯುದ್ಧದಲ್ಲಿ ಅವರಿಬ್ಬರ ಪರಾಕ್ರಮವನ್ನೂ ಕಂಡು ಮೆಚ್ಚಿದನು. ಇವರ ಸಹಾಯವು ವಿಜಯನಗರ ಸಾಮ್ರಾಜ್ಯಕ್ಕೆ ಅತ್ಯಗತ್ಯವೆಂದು

ಅರಿತು, ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಸೌರ್ಬಯಲು, ಎಲಗಳಲೆ, ಮೋದೂರು, ಕಲಿಸೆ ಮತ್ತು ಲಾತವಡಿ ಎಂಬ ಎಂಟು ಮಾಗಣೆಗಳನ್ನು ಅವರಿಗೆ ಮಾನ್ಯವಾಗಿ ಕೊಟ್ಟನು. ಈ ಗ್ರಾಮಗಳನ್ನು ನಿಮ್ಮ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರತಕ್ಕದೆಂದು ಶಾಸನ ಮಾಡಿ ಕೊಟ್ಟನು. ಅಲ್ಲದೆ ರಾಜೋಚಿತವಾದ, ಆನೆ, ಕುದುರೆ, ಪದಾತಿ, ಛತ್ರಿ, ಪಲ್ಲಕ್ಕಿ, ಶಂಖ, ಚಕ್ರ, ಚೌಗುರಿ ಮೊದಲಾದ ಬಿರುದುಗಳನ್ನು ಕೊಟ್ಟನು. "ಕೆಳದಿಯ ಮೂಲ ಸಂಸ್ಥಾನದ ಮನ್ನೆಯ ಚೌಡಪ್ಪನಾಯಕ" ಎಂದು ಪ್ರಖ್ಯಾತನಾಗುವ ಹಾಗೆ ದೇಶಾಂತರದ ಅಧಿಪತಿಗಳಿಗೆ ರಾಯಸವನ್ನು ಬರೆದು ಕಳುಹಿಸಿದನು. ಅವರಿಗೆ ವಸ್ತ್ರಾಭರಣಗಳನ್ನು ಕೊಟ್ಟು ಗೌರವಿಸಿದನು. ಸಾರ್ವಭೌಮ ಕೃಷ್ಣದೇವರಾಯನಿಂದ ಸತ್ಕೃತರಾಗಿ ಚೌಡಪ್ಪ, ಭದ್ರಪ್ಪ ಸಹೋದರರು ಅತಿ ಸಂತೋಷದಿಂದ ಕೆಳದಿಗೆ ಹಿಂದಿರುಗಿದರು. ಒಂದು ಶುಭ ಮುಹೂರ್ತದಲ್ಲಿ ಅಂದರೆ ಶಾಲಿವಾಹನ ಶಕ ೧೪೨೨ನೆಯ ಸಿದ್ಧಾರ್ಥಿಸಂವತ್ಸರ ಮಾಘ ಶುದ್ಧ ತೃತೀಯೆಯಂದು (ಕ್ರಿ.ಶ. ೧೪೯೯-೧೫೦೦) ಚೌಡಪ್ಪನಿಗೆ ಕೆಳದಿ ರಾಜ್ಯದ ಪಟ್ಟಾಭಿಷೇಕವು ವಿಧ್ಯುಕ್ತವಾಗಿ ನಡೆಯಿತು. ಅಂದಿನಿಂದ ಅವನು ಚೌಡಪ್ಪನಾಯಕನಾಗಿ ಕೆಳದಿಯ ಮೊದಲನೆಯ ರಾಜನಾಗಿ ತನ್ನ ರಾಜ್ಯಭಾರವನ್ನು ಪ್ರಾರಂಭಿಸಿದನು. ಅಂದಿನಿಂದ ವಿಜಯನಗರದ ಅಧೀನರಾಜ್ಯಗಳಲ್ಲಿ ಕೆಳದಿಯ ರಾಜ್ಯವು ಪರಿಗಣಿತವಾಯಿತು. ದೊರೆಯಾದ ಚೌಡಪ್ಪನಾಯಕನು ತನಗೆ ಸೇರಿದ ಎಂಟು ಮಾಗಣೆಗಳಲ್ಲಿ ಪ್ರಜಾಸೌಖ್ಯಕ್ಕೂ, ಆಡಳಿತಕ್ಕೂ ಬೇಕಾದ ಏರ್ಪಾಡುಗಳನ್ನು ಮಾಡಿದನು. ಮನೆದೇವತೆಯಾದ ರಾಮೇಶ್ವರನ ಗುಡಿಯನ್ನು ಕೆಳದಿಯಲ್ಲಿ ನೂತನವಾಗಿ ಕಟ್ಟಿಸಿದನು. ನಿತ್ಯನೈಮಿತ್ತಿಕಾದಿ ದೇವತಾರ್ಚನೆಗಳು ಕ್ರಮವಾಗಿ ನಡೆಯಲು ನಿಯಮಿಸಿದನು. ಹಳ್ಳಿಬಯಲು ಮೊದಲಾದ ಗ್ರಾಮಗಳನ್ನು ದೇವರ ಸೇವಾರ್ಥವಾಗಿ ದತ್ತಿಕೊಟ್ಟನು. ಹೀಗೆ ರಾಮೇಶ್ವರನ ಕೃಪೆಯಿಂದಲೂ, "ನಾಗರ ಮುರಿ" ಎಂಬ ಕತ್ತಿಯ ಬಲದಿಂದಲೂ, ದೇವರ ಅನುಗ್ರಹ ರೂಪವಾದ ನಿಧಿನಿಕ್ಷೇಪಗಳಿಂದಲೂ ಕೆಳದಿಯ ರಾಜ್ಯಸ್ಥಾಪನೆಯಾಯಿತು. ವಿಜಯನಗರದ ಅರಸರ ಮನ್ನಣೆ

ಪಡೆಯಿತು. ಮಲೆನಾಡಿನ ಭಾಗ್ಯದೇವತೆ ಸಡಗರಗೊಂಡಳು. ಆ ನಾಡಿನಲ್ಲಿ ಎಲ್ಲೆಲ್ಲೂ ಮಂಗಳೋದಯವಾದುವು. "ಕೆಳದಿ" ಮಲೆನಾಡಿನ ವೈಭವದ ನೆಲೆಬೀಡಾಯಿತು. ಭುವನೇಶ್ವರಿಯ ಹಣೆಯ ಕುಂಕುಮವೆನಿಸಿತು.

ಕೆಳದಿಯ ಸಂಸ್ಥಾಪಕನಾದ ಪುಣ್ಯಶಾಲಿ ಚೌಡಪ್ಪನಾಯಕನು ಸಾಮ್ರಾಜ್ಯದ ಭದ್ರತೆ ಮತ್ತು ವಿಸ್ತರಣೆಯ ಕಾರ್ಯದಲ್ಲಿ ಇತರ ಪಾಳೆಯಗಾರರೊಡನೆ ತಾನೂ ನೆರವಾಗಿ ನಿಂತನು. ಕೆಳದಿಯ ಕೀರ್ತಿ ಎಲ್ಲೆಡೆಗಳಲ್ಲಿಯೂ ಹಬ್ಬಿತು. ಶ್ರೀರಾಮೇಶ್ವರನ ಅನುಗ್ರಹದಿಂದ ಕೆಳದಿಯು ಬಾಲಚಂದ್ರನಂತೆ ಬಳೆಯಿತು. ಒಂದು ದಿನ ಚೌಡಪ್ಪನಾಯಕನು ತನ್ನ ಪಾಳೆಯಪಟ್ಟಿಗೆ ಸೇರಿದ ಇಕ್ಕೇರಿಪ್ರಾಂತ್ಯಕ್ಕೆ ತನ್ನ ಮಗನೂ, ಕೆಳದಿಯ ಯುವರಾಜನೂ ಆದ ಸದಾಶಿವನಾಯಕನೊಡನೆ ಕುದುರೆಯನ್ನು ಹತ್ತಿ ಸಂಚಾರಕ್ಕೆ ಹೊರಟನು. ಸ್ವಭಾವ ಸುಂದರವಾದ ಪ್ರಕೃತಿಯಿಂದ ಕಂಗೊಳಿಸುತ್ತಿದ್ದ ಆ ಪ್ರದೇಶವು, ಈ ತಂದೆ ಮಕ್ಕಳ ಮನಸ್ಸಿಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿತು. ಆಕಾಶದ ಕಡೆಗೆ ಬೆಳೆದ ಮರಗಳು, ಮರದಿಂದ ಮರಕ್ಕೆ ಹಬ್ಬಿದ ಬಳ್ಳಿಗಳು, ಬಗೆಬಗೆಯಾದ ಫಲಪುಷ್ಪಗಳು, ಕೂಗುವ ಕೋಗಿಲೆಗಳು, ಹಾರಾಡುವ ಪಕ್ಷಿಗಳು, ಸಂಚರಿಸುವ ಮೃಗಾವಳಿಗಳು, ಇವೆಲ್ಲವೂ ಅವರ ಪ್ರವಾಸವನ್ನು ಉಲ್ಲಾಸಕರವನ್ನಾಗಿ ಮಾಡಿದುವು. ಹೀಗೆ ತಂದೆ ಮಕ್ಕಳು ರಾಜ್ಯದ ಭವಿಷ್ಯವನ್ನು ಕುರಿತು ಯೋಚಿಸುತ್ತಾ, ಪ್ರಕೃತಿಯ ಪ್ರಸನ್ನತೆಯನ್ನು ಕಂಡು ಹರ್ಷಿಸುತ್ತಾ, ಅವರ ಮಾಗಣಿಗೆ ಸೇರಿದ ಇಕ್ಕೇರಿಗೆ ಬಂದು ಸೇರಿದರು. ಅಲ್ಲಿ ಇದ್ದಕ್ಕಿದ್ದಂತೆ ಅವರ ಕಣ್ಣಿಗೆ ಒಂದು ಅಪೂರ್ವವಾದ ದೃಶ್ಯವು ಕಾಣಿಸಿಕೊಂಡಿತು. ಆ ಅಡವಿಯ ಮಧ್ಯದಲ್ಲಿ ಒಂದು ಮೊಲವು ಒಂದು ನಾಯಿಯನ್ನು ಬೆನ್ನಟ್ಟಿಕೊಂಡು ಓಡುತ್ತಿದ್ದಿತು. ಈ ಪ್ರಸಂಗವು ಕೆಳದಿಯ ನಾಯಕರ ಕಣ್ಣಿಗೆ ಆಶ್ಚರ್ಯಕರವಾಗಿ ಕಾಣಿಸಿದುದು ಮಾತ್ರವಲ್ಲದೆ, ಈ ಇಕ್ಕೇರಿ ಪ್ರಾಂತವು ಗಂಡುಭೂಮಿ ಎಂಬ ಭಾವನೆಯನ್ನು ಕೂಡ ಉಂಟುಮಾಡಿತು. ಇದು ಕೆಳದಿಯ ರಾಜ್ಯೋದಯಕ್ಕೆ ಮಿಗಿಲಾದ ಶುಭಸೂಚನೆಯೆಂದು ಆ ತಂದೆ ಮಕ್ಕಳು ಭಾವಿಸಿದರು. ಇನ್ನು ಮುಂದೆ ತಮ್ಮ ರಾಜ್ಯದ ಕೇಂದ್ರವು ಕೆಳದಿಯಿಂದ ಇಕ್ಕೇರಿಗೆ

ವರ್ಗವಾಗಬೇಕೆಂದು ತೀರ್ಮಾನಿಸಿದರು. ಅವರ ಆ ತೀರ್ಮಾನದಂತೆ ಇಕ್ಕೇರಿಯಲ್ಲಿ ಹೊಸ ಅರಮನೆ ತಯಾರಾಯಿತು. ರಾಜ್ಯದ ಕಛೇರಿ ಸಿದ್ಧವಾಯಿತು. ಚೌಡಪ್ಪ ನಾಯಕನು ಆಳಿಕೆಯ ಹನ್ನೆರಡನೆಯ ವರ್ಷದ ಪ್ರಜೋತ್ಪತ್ತಿ ಸಂವತ್ಸರದ ಮಾಘ ಶುದ್ಧ ಪಂಚಮಿಯಲ್ಲಿ (ಕ್ರಿ.ಶ. ೧೫೧೩) ಇಕ್ಕೇರಿ ಅರಮನೆಗೆ ಸಕುಟುಂಬವಾಗಿ ಬಂದು ವಾಸಿಸತೊಡಗಿದನು. ಅನಂತರ ಚೌಡಪ್ಪ ನಾಯಕನು ಸುಮಾರು ಹದಿನೆಂಟು ತಿಂಗಳು ಇಕ್ಕೇರಿಯಲ್ಲಿ ರಾಜ್ಯಭಾರಮಾಡಿದನು. ತನ್ನ ರಾಜ್ಯದ ಭದ್ರತೆಗೆ ಬೇಕಾದ ಏರ್ಪಾಡುಗಳನ್ನು ಅತ್ಯಂತ ಚಾಣಾಕ್ಷತ್ವದಿಂದ ನಿರ್ವಹಿಸಿದನು. ಕ್ರಿ. ಶ. ೧೫೧೫ರಲ್ಲಿ ಚೌಡಪ್ಪ ನಾಯಕನು ವಿಧಿವಿಲಾಸದಿಂದ ಪರಲೋಕವನ್ನು ಸೇರಿದನು. ಅವನ ವಿಯೋಗವು ಕೆಳದಿಯ ಪ್ರಜೆಗಳಿಗೆ ಹೆಚ್ಚಿನ ದುಃಖವನ್ನು ಉಂಟುಮಾಡಿತು. ಪ್ರಾಜ್ಞನಾದ ಚೌಡಪ್ಪ ನಾಯಕನು ತನ್ನ ಪರಾಕ್ರಮದಿಂದಲೇ ಅಲ್ಲದೆ, ತನ್ನ ನ್ಯಾಯನಿಷ್ಠೆ, ಪರೋಪಕಾರ, ಆಡಳಿತದ ಪ್ರಾವೀಣ್ಯತೆ, ವಿದ್ಯಾಭಿಮಾನ, ಉಚಿತಜ್ಞತೆ, ಮೊದಲಾದ ಸದ್ಗುಣಗಳಿಂದ ಪ್ರಜೆಗಳ ಮೇಲೆ ತನ್ನ ಪ್ರಭಾವವನ್ನು ಸ್ಥಾಪಿಸಿದನು.

ಚೌಡಪ್ಪ ನಾಯಕನ ಅನಂತರ ಕ್ರಿ. ಶ. ೧೫೧೪ರಲ್ಲಿ ಇಕ್ಕೇರಿಯ ಅರಮನೆಯಲ್ಲಿ ಸದಾಶಿವನಾಯಕನಿಗೆ ಶಾಸ್ತ್ರೋಕ್ತವಾಗಿ ಪಟ್ಟವಾಯಿತು. ತಂದೆಯಂತೆ ಸದಾ ಶಿವನಾಯಕನೂ ಧರ್ಮದಿಂದ ರಾಜ್ಯಭಾರಮಾಡಿದನು. ಪರಾಕ್ರಮದಿಂದ ತನ್ನ ರಾಜ್ಯದ ಎಲ್ಲೆಯನ್ನು ವಿಸ್ತರಿಸಿದನು. ವಿಜಯನಗರದ ಬಗ್ಗೆ ತನಗಿರುವ ನಿಷ್ಠೆಯನ್ನು ದೃಢಪಡಿಸಿದನು. ಕಾಲಕ್ರಮದಲ್ಲಿ ಇವನಿಗೆ ದೊಡ್ಡ ಸಂಕಣ್ಣನಾಯಕ, ಚಿಕ್ಕ ಸಂಕಣ್ಣನಾಯಕ ಎಂಬ ಇಬ್ಬರು ಮಕ್ಕಳಾದರು. ತಂದೆ ತಾತರಂತೆ ಅವರೂ ಬಲಶಾಲಿಗಳೆನಿಸಿದರು. ಇಬ್ಬರಿಗೂ ಯೋಗ್ಯ ಸ್ಥಾನದಲ್ಲಿ ಲಗ್ನವಾಯಿತು. ಈ ಇಬ್ಬರು ಮಕ್ಕಳೂ ತಂದೆಯ ರಾಜಕಾರ್ಯದಲ್ಲಿ ನೆರವಾಗಿ ಕೆಳದಿಯ ಕೀರ್ತಿಯನ್ನು ಹಬ್ಬಿಸಲು ಸಹಾಯರಾದರು. ಹೀಗೆ ಕೆಳದಿಯ ರಾಜ್ಯವು ದಿನೇ ದಿನೇ ಅಭಿವೃದ್ಧಿಯಾಗುತ್ತಿರುವುದು ವಿಜಯನಗರ ಚಕ್ರವರ್ತಿಗೆ ತಿಳಿದು ಅವರ ಸಂತೋಷಕ್ಕೆ ಕಾರಣವೆನಿಸಿತು. ಒಮ್ಮೆ ಕೃಷ್ಣದೇವ ರಾಯನು ರಾಜ್ಯದ ಕ್ಷೇಮಚಿಂತನೆ

ನೋಡುವ ಸಲುವಾಗಿ ಸೈನ್ಯ ಸಮೇತನಾಗಿ ಮಲೆನಾಡಿಗೆ ಆಗಮಿಸಿದನು. ಚಕ್ರವರ್ತಿಯ ಆಗಮನ ವಾರ್ತೆಯನ್ನು ಕೇಳಿ ಉಚಿತವಾದ ರಾಜಮರ್ಯಾದೆ ಗಳೊಡನೆ ಸದಾಶಿವನಾಯಕನು ವಿಜಯನಗರದ ಸಾರ್ವಭೌಮನನ್ನುಎದುರು ಗೊಂಡನು. ಹಸಾದವೇನೆಂದು ಪ್ರಾರ್ಥಿಸಿದನು. ಚಕ್ರವರ್ತಿಯ ಅಪ್ಪಣೆ ಯಂತೆ ಕಲ್ಯಾಣದುರ್ಗ, ಕಲ್ಬುರ್ಗಿ, ಮೊದಲಾದ ಕಡೆ ತುರುಷ್ಕರು ನಡೆಸು ತ್ತಿರುವ ದಾಳಿಯನ್ನು ಸೈನ್ಯಸಮೇತನಾಗಿ ಹೋಗಿ ಪ್ರತಿಭಟಿಸಿ ಶತ್ರುಗಳನ್ನು ಹಿಮ್ಮೆಟ್ಟಿಸಿದನು. ಆ ಪ್ರದೇಶವನ್ನು ಜಯಿಸಿದನು. ಹೀಗೆ ಸದಾಶಿವನಾಯ ಕನು ಗಳಿಸಿದ ವಿಜಯವು ಚಕ್ರವರ್ತಿಯ ಸನ್ನಿಧಾನದಲ್ಲಿ ಇವನಿಗೆ ಉನ್ನತ ಸ್ಥಾನವನ್ನು ಉಂಟುಮಾಡಿಕೊಟ್ಟಿತು. ಈ ಸದಾಶಿವನಾಯಕನು ಧರ್ಮ ದಿಂದ ರಾಜ್ಯಭಾರ ಮಾಡುತ್ತಾ ಕ್ರಿ. ಶ. ೧೫೪೬ ರವರೆಗೆ ಆಳಿ ಶಿವಲೋಕ ವನ್ನು ಸೇರಿದನು. ಮಾರ್ಗಮಧ್ಯೆ ಸ್ವರ್ಗದ ತರುಣಿಯರು ಆತನಿಗೆ ಸುಸ್ವಾಗತವನ್ನು ಬಯಸಿದರು. ಸುರಪತಿಯ ಸಭೆಯಲ್ಲಿ ಸನ್ಮಾನ ದೊರ ಕಿತು ಈ ನಮ್ಮ ಕನ್ನಡ ರಾಜನಿಗೆ.

ಸದಾಶಿವನಾಯಕನು ವಿಜಯನಗರದ ರಾಜ್ಯವಿಸ್ತಾರ ಕಾರ್ಯದಲ್ಲಿ ಮಿಗಿಲಾದ ಸೇವೆಯನ್ನು ಸಲ್ಲಿಸಿದನು. ಬಹಮನಿದಂಡನಾಯಕರನ್ನು ಯುದ್ಧದಲ್ಲಿ ಹಿಮ್ಮೆಟ್ಟಿಸಿದನು. ಜಂಬುಕಂಡಿಯ ಕಾಳಗದಲ್ಲಿ ಬೊಕ್ಕಸಿಂಗ ನೆಂಬ ಬಹಮನಿದಂಡನಾಯಕನನ್ನು ಉಗ್ರವಾಗಿ ಪ್ರತಿಭಟಿಸಿ ಎದುರಿ ಸಿದನು. ಕಲ್ಯಾಣದುರ್ಗದ ಪಾಳೆಯಗಾರರನ್ನು ಮಣಿಸಿದನು. ಕಲ್ಬು ರ್ಗಿಯ ಕೋಟೆಯನ್ನು ಹಿಡಿದು ವಿಜಯನಗರಕ್ಕೆ ಸೇರಿಸಿದನು. ಅವನ ಈ ಪರಾಕ್ರಮವು, ವಿಜಯನಗರದ ಚಕ್ರವರ್ತಿಯಿಂದ ಇವನಿಗೆ ಕೋಟಿಕೋಲಾ ಹಲ, ಎಂಬ ಬಿರುದನ್ನು ಅನುಗ್ರಹಿಸುವಂತೆ ಮಾಡಿತು. ಇಷ್ಟೇ ಅಲ್ಲದೆ, 'ಬಲವಂತ, ಏಕಾಂಗವೀರ ಎಂಬ ಮತ್ತೆರೆಡು ಬಿರುದುಗಳು ವಿಜಯನಗರದ ರಾಯರಿಂದ ಸದಾಶಿವನಾಯಕನಿಗೆ ಪ್ರಾಪ್ತವಾದುವು. ಸದಾಶಿವನಾಯ ಕನು ತಂದೆಯಂತೆಯೇ ಅತ್ಯಂತ ದೈವಭಕ್ತನಾಗಿದ್ದನು. ಕೆಳದಿಯ ರಾಮೇ ಶ್ವರ ದೇವಾಲಯದ ಮುಂದೆ ನಂದಿಮಂಟಪವನ್ನು ಕಟ್ಟಿಸಿದನು. ರಾಮೇ ಶ್ವರ ಗುಡಿಯ ಪಕ್ಕದಲ್ಲಿ ಪಾರ್ವತೀದೇವಿಯ ಮಂದಿರವನ್ನು ಕಟ್ಟಿಸಿ ಅಲ್ಲಿ

ಮಹಾದೇವಿಯನ್ನು ಪ್ರತಿಷ್ಠಾಪಿಸಿದನು. ಕೆಳದಿಯಲ್ಲಿ ಜಂಗಮರ ಮಠವನ್ನು ಉದ್ಧರಿಸಿದನು. ಅವರಿಗೆ ಬೇಕಾದಷ್ಟು ದತ್ತಿಗಳನ್ನು ಕೊಟ್ಟನು. ಕೆಳದಿಗೂ ಇಕ್ಕೇರಿಗೂ ಮಧ್ಯೆ 'ಸದಾಶಿವ ಸಾಗರ'ಎಂಬ ಊರನ್ನು ಕಟ್ಟಿಸಿದನು. ಅಲ್ಲಿ ಸದಾಶಿವೇಶ್ವರಲಿಂಗವನ್ನು ಸ್ಥಾಪಿಸಿದನು. ಬ್ರಾಹ್ಮಣರಿಗೂ, ವಿದ್ವಾಂಸರಿಗೂ ಸ್ವಾಸ್ಥ್ಯಗಳನ್ನು ಕಲ್ಪಿಸಿದನು. ಇವನ ಉದಾತ್ತಗುಣಗಳನ್ನು ಕವಿಗಳು ಬಹಳವಾಗಿ ಹೊಗಳಿಸಿದ್ದಾರೆ.

ಭೀಮುಂ ಸಂಗರದೊಳ್ಸು ।
ತ್ರಾಮುಂ ಭೋಗದೊಳೆ ಶಾಂತಿಗುಣದೊಳ್ಸೋಮುಂ ।
ರಾಮುಂನನ್ನಿಯೊಳೆಂದೀ ।
ಭೂಮಿಜನಂ ಪೊಗಳೆ ಬಾಳ್ದನಾನರನಾಥಂ ॥

ಎಂದು ಕೆಳದಿನೃಪ ವಿಜಯದಲ್ಲಿ ಲಿಂಗಣ್ಣನೆಂಬ ಕವಿಯು ವರ್ಣಿಸಿದ್ದಾನೆ.

ಅನಂತರ ಸದಾಶಿವನಾಯಕನ ಜ್ಯೇಷ್ಠಪುತ್ರನಾದ ದೊಡ್ಡಸಂಕಣ್ಣನಾಯಕನು ಕೆಳದಿಯ ರಾಜನೆನಿಸಿದನು. ಕ್ರಿ. ಶ. ೧೫೬೬ ರಿಂದ ೧೫೭೦ರವರೆಗೆ ಧರ್ಮದಿಂದ ರಾಜ್ಯಭಾರವನ್ನು ಮಾಡಿದನು. ಇವನಿಗೆ ಇಕ್ಕೇರಿಯ ಅರಮನೆಯಲ್ಲಿ ಪಟ್ಟವಾಯಿತು. ಈ ದೊಡ್ಡಸಂಕಣ್ಣನಾಯಕನು ಗೋವೆಯನ್ನು ವಿಜಯನಗರದ ರಾಜರಿಗೆ ಜಯಿಸಿಕೊಡುವುದರಲ್ಲಿ ತುಂಬಾ ಸಾಹಸವನ್ನು ತೋರಿದನು. ಇವನಿಗೆ ರಾಮರಾಜನಾಯಕ, ವೆಂಕಟಪ್ಪನಾಯಕ ಎಂಬ ಇಬ್ಬರು ಗಂಡುಮಕ್ಕಳಾದರು. ಅವರಿಗೆ ವಿದ್ಯೆ ವಿನಯಗಳನ್ನು ಕಲಿಸಿ ತಕ್ಕ ಕಾಲದಲ್ಲಿ ಲಗ್ನಮಾಡಿದನು. ಅವರು ಕಡುಗಲಿಗಳೆನಿಸಿ ಅಭಿವೃದ್ಧಿಗೊಂಡರು. ತಂದೆಗೆ ಬೆಂಬಲವಾದರು.

ದೊಡ್ಡಸಂಕಣ್ಣನಾಯಕನು ಸ್ವಭಾವತಃ ವೈರಾಗ್ಯಶಾಲಿ. ಅವನು ನಿಜವಾಗಿಯೂ 'ರಾಜರ್ಷಿ' ಎಂದೆನ್ನಬಹುದು. ರಾಜ್ಯವನ್ನೂ ತನ್ನ ಮಕ್ಕಳನ್ನೂ ತಮ್ಮನಾದ ಚಿಕ್ಕಸಂಕಣ್ಣನಾಯಕನಿಗೆ ಒಪ್ಪಿಸಿ 'ನಾಗರಮುರಿ' ಎಂಬ ಕತ್ತಿಯನ್ನು ಆತ್ಮಸಂರಕ್ಷಣಾರ್ಥವಾಗಿ ತನ್ನ ಸಂಗಡ ತೆಗೆದುಕೊಂಡು

A. ಈಗ ಅದನ್ನು 'ಸಾಗರ, ಎಂದು ಮಾತ್ರ ಕರೆಯುತ್ತಾರೆ. ಈ ಊರು ಕೆಳದಿ, ಇಕ್ಕೇರಿಗಳ ಮಧ್ಯೆ ಇದೆ. ಮಲೆನಾಡಿನ ಕೇಂದ್ರವೆನಿಸಿದೆ.

ನಾಲ್ಕು ಜನ ಊಳಿಗದವರೊಡನೆ ತೀರ್ಥಕ್ಷೇತ್ರ ಸಂಚಾರಹೊರಟನು. ದಕ್ಷಿಣ ಮತ್ತು ಉತ್ತರ ಭಾರತದ ಎಲ್ಲ ಕ್ಷೇತ್ರಗಳನ್ನೂ ಸಂಚರಿಸಿದನು. ಅನೇಕ ದಾನಧರ್ಮಗಳನ್ನು ಮಾಡಿದನು. ದಿಳ್ಳಿಗೆ ಹೋಗಿ ಅಲ್ಲಿ ಮದಿಸಿದ್ದ ಅಂಕುಶಖಾನನೆಂಬ ಜಟ್ಟಿಯನ್ನು ಎದುರಿಸಿ ಖಡ್ಗಯುದ್ಧದಲ್ಲಿ ಅವನನ್ನು ಕೊಂದನು. ಆಗ ಬಾದಶಹನು ಇವನ ಪರಾಕ್ರಮಕ್ಕೆ ಮೆಚ್ಚಿ ಹಸುರು ನಿಶಾನಿ, ಅನೇಕ ವಸ್ತ್ರವಾಹನಾದಿ ಉಡುಗೊರೆಗಳನ್ನು ಕೊಟ್ಟನು. ಅವನ ಇಷ್ಟದಂತೆ, ದಿಲ್ಲಿ, ಕಾಶಿ, ಪ್ರಯೋಗ, ಕೇದಾರ ಮೊದಲಾದ ಕಡೆ ಜಂಗ ಮರಮಠಗಳನ್ನು ಕಟ್ಟಿಸಿಕೊಟ್ಟು ಅವುಗಳಿಗೆ ಉದಾರವಾದ ದತ್ತಿಗಳನ್ನು ಕೊಟ್ಟನು. ಈ ಕಾಲದಲ್ಲಿ ದಿಲ್ಲಿಯಲ್ಲಿ ಆಳುತ್ತಿದ್ದ ಬಾದಶಹ ಅಕ್ಬರ್ ಚಕ್ರವರ್ತಿಯೆಂದು ಇತಿಹಾಸಕಾರರು ಹೇಳುತ್ತಾರೆ. ಹೀಗೆ ದೊಡ್ಡ ಸಂಕಣ್ಣನಾಯಕನು ಸಮಗ್ರಭಾರತದ ತೀರ್ಥ ಕ್ಷೇತ್ರವನ್ನು ಮುಗಿಸಿಕೊಂಡು ಮೈಸೂರಿನಿಂದ ವೀರಭದ್ರವಿಗ್ರಹವನ್ನು ತಂದು ಕೆಳದಿಯ ರಾಮೇಶ್ವರ ದೇವಾಲಯದ ಬಲಭಾಗದಲ್ಲಿ ಪ್ರತಿಷ್ಠೆಮಾಡಿಸಿದನು. ಪ್ರೈಣದಿಂದ ತಾನು ತಂದಿದ್ದ ಒಂದು ಚಿತ್ರದ ಮಾದರಿಯಲ್ಲಿ ಅಘೋರೇಶ್ವರ ದೇವಾಲಯ ವನ್ನು ಕಟ್ಟಿಸಿದನು. ಹೀಗೆ ಧರ್ಮಾತ್ಮನಾದ ದೊಡ್ಡ ಸಂಕಣ್ಣನಾಯಕನು ಕ್ರಿಸ್ತಶಕ ೧೫೭೧ರಲ್ಲಿ ಶಿವಲೋಕವನ್ನು ಸೇರಿದನು. ಈತನ ಪರಾಕ್ರಮ, ಧರ್ಮಬುದ್ಧಿ ಮೊದಲಾದುವು ಕೆಳದಿಯ ಚರಿತ್ರೆಯಲ್ಲಿ ವಿಖ್ಯಾತ ವಾಗಿವೆ. ಕ್ರಿ. ಶ. ೧೫೬೬ರಿಂದ ೧೫೭೧ರ ವರೆಗೆ ಇವನು ರಾಜ್ಯಭಾರ ಮಾಡಿದನು. ಅನಂತರ ಕೆಳದಿಯ ರಾಜ್ಯಕ್ಕೆ ಚಿಕ್ಕಸಂಕಣ್ಣನಾಯಕನು ಅರಸನಾದನು ಈ ಚಿಕ್ಕ ಸಂಕಣ್ಣನಾಯಕನು ಬಿಜಾಪುರದ ಕಡೆ ಸೈನ್ಯ ವನ್ನು ಯುದ್ಧದಲ್ಲಿ ಸೋಲಿಸಿದನು. ಗೇರುಸೊಪ್ಪೆ ಭೈರಾದೇವಿಯ ರಾಜ್ಯ ವನ್ನು ಜಯಿಸಿ ಅವರ ರಾಜ್ಯವನ್ನು ತನ್ನ ಸೀಮೆಗೆ ಸೇರಿಸಿಕೊಂಡನು.

ಚಿಕ್ಕಸಂಕಣ್ಣನ ಕಾಲದಲ್ಲಿ ವಿಜಯನಗರ ರಾಜ್ಯಕ್ಕೂ ಬಹಮನೀ ರಾಜ್ಯಕ್ಕೂ ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದವು. ಕೆಳದಿಯ ರಾಜರು ವಿಜಯನಗರದ ಪರವಾಗಿ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಕಾರಣ, ಕೆಳದಿ ರಾಜ್ಯವು ತನ್ನ ಅಭ್ಯುದಯದ ಕಡೆಗೆ ಗಮನಕೊಡಲು ಹೆಚ್ಚುಅವಕಾಶ ಸಿಕ್ಕಲಿಲ್ಲ.

೧೫೬೫ರಲ್ಲಿ ಕೃಷ್ಣಾ ತೀರದಲ್ಲಿ ವಿಜಯನಗರಕ್ಕೂ ಬಹಮನೀ ರಾಜ್ಯಕ್ಕೂ ಆದ ಘೋರಸಂಗ್ರಾಮದಲ್ಲಿ ಕೆಳದಿಯ ಚಿಕ್ಕಸಂಕಣ್ಣನಾಯಕನು ವಿಜಯನಗರದ ಪರವಾಗಿ ಯುದ್ಧ ಮಾಡಿದನು. ಆ ಮಹಾಸಂಗ್ರಾಮವನ್ನು ಕಣ್ಣಾರಕಂಡ ವೀರರಲ್ಲಿ ಇಕ್ಕೇರಿಯ ರಾಜನೊಬ್ಬನು. ಇವನು ಒಟ್ಟು ಹನ್ನೆರಡು ವರ್ಷ ರಾಜ್ಯಭಾರ ಮಾಡಿದನು. ಶಾಲಿವಾಹನ ಶಕ ೧೪೯೩ನೆಯ ಪ್ರಮೋದೂತ ಸಂವತ್ಸರದಲ್ಲಿ ಇವನು ಶಿವಲೋಕವಾಸಿಯಾದನು. ಅನಂತರ ಇವನ ಅಣ್ಣನ ಮಗನೂ, ರಾಜ್ಯಕ್ಕೆ ನಿಜವಾದ ಹಕ್ಕುದಾರನೂ ಎನಿಸಿದ ರಾಮರಾಜನಾಯಕನು ಕೆಳದಿಯ ನೂತನ ರಾಜನಾದನು.

ಕೆಳದಿಯ ಐದನೆಯ ದೊರೆಯಾದ ರಾಮರಾಜನು ಕ್ರಿ. ಶ. ೧೫೭೩ರಿಂದ ೧೫೮೬ರ ವರೆಗೆ ರಾಜ್ಯಭಾರ ಮಾಡಿದನು. ಇವನಿಗೆ ರಾಜ್ಯದ ಅನುಭವ ಅಷ್ಟಾಗಿ ಇರಲಿಲ್ಲ. ಇವನ ಕಾಲದಲ್ಲಿ ಅಂತಹ ಮಹತ್ವದ ಕಾರ್ಯಗಳೇನೂ ನಡೆದಂತೆ ತೋರುವುದಿಲ್ಲ.

ರಾಮರಾಜನ ಅನಂತರ ಅವನ ತಮ್ಮ ವೆಂಕಟಪ್ಪನಾಯಕನು ಕೆಳದಿಯ ರಾಜನಾದನು. ಇವನು ಕ್ರಿ. ಶ. ೧೫೮೬ರಿಂದ ೧೬೩೦ರ ವರೆಗೆ ಆಳಿದನು. ಇವನ ಕಾಲದಲ್ಲಿ ಇಕ್ಕೇರಿಯ ರಾಜರಿಗೂ, ವಿಜಯನಗರದವರಿಗೂ ಶರೀರಬಾಂಧವ್ಯ ಉಂಟಾಯಿತು. ಇವನು ತನ್ನ ರಾಜ್ಯವನ್ನು ಮುತ್ತಿದ ಬಿಜಾಪುರದ ಆದಿಲ್‌ಷಾಹಿಯ ಸೈನ್ಯವನ್ನು ಹೊಡೆದೋಡಿಸಿದನು. ಇವನು ಅತ್ಯಂತ ಪರಾಕ್ರಮಶಾಲಿ. ಇವನಿಗೆ ಭದ್ರಪ್ಪನಾಯಕನೆಂಬ ಮಗನು ಉದಿಯಿಸಿದನು. ಇವನೂ ತಂದೆಯಂತೆ ಬಲಶಾಲಿಯಾಗಿದ್ದನು. ವೆಂಕಟಪ್ಪನಾಯಕನು ಪಶ್ಚಿಮಕರಾವಳಿಯಲ್ಲಿ ವ್ಯಾಪಾರನಿಮಿತ್ತ ಬಂದಿದ್ದ ಪಾಶ್ಚಾತ್ಯರನ್ನು ಹತೋಟಿಗೆ ತಂದನು. ಇವನು ಮಲೆಯಾಳದ ರಾಣಿ ಭೈರಾದೇವಿಯನ್ನು ಜಯಿಸಿದನು. ಅಕ್ಕಪಕ್ಕದ ಪ್ರದೇಶಗಳನ್ನು ಜಯಿಸಿ ರಾಜ್ಯವನ್ನು ವಿಸ್ತರಿಸಿದನು.

ಇವನು ವಿದ್ವಾಂಸನೂ, ಕವಿಜನ ಪೋಷಕನೂ ಎನಿಸಿದ್ದನು. ಇವರ ರಾಜ್ಯದ ಪಶ್ಚಿಮಕ್ಕೆ ಸಮುದ್ರವೇ ಮೇರೆಯಾಗಿತ್ತು. ಇವನು ಕೊಲ್ಲೂರು ಮೂಕಾಂಬಿಕೆಯ ದೇವಾಲಯ, ಕಾವಲೇದುರ್ಗದ ಗುಡಿಗೋಪುರ ಇವನ್ನು

ಕಟ್ಟಿಸಿದನು. ಇವನು ತಿರುಮಲಭಟ್ಟನೆಂಬ ಕವಿಗೆ ಆಶ್ರಯವಿತ್ತು ಶಿವಗೀತೆಯನ್ನೂ ಗೀತಗೌರೀವರ ವನ್ನೂ ಕನ್ನಡದಲ್ಲಿ ಬರೆಯಿಸಿದನು. ಅಶ್ವಪ್ರಿಯ ಪಂಡಿತನಿಂದ'ಮಾನಸ ಪ್ರಿಯ'ಎಂಬ ಅಶ್ವಶಾಸ್ತ್ರಗ್ರಂಥವನ್ನು ಬರೆಯಿಸಿದನು. ಇವನು ತನ್ನ ಆ ಸ್ಥಾನದಲ್ಲಿ ವಿದ್ವಾಂಸರ ವೃಂದಗಳನ್ನೇ ಕೂಡಿಸಿ ಚರ್ಚೆಗಳನ್ನು ಏರ್ಪಡಿಸಿ ತನ್ನ ಆಯುಷ್ಯದ ಬಹುಭಾಗವನ್ನು ಸದ್ವ್ಯಾಸಂಗದಲ್ಲಿ ಕಳೆಯುತ್ತಿದ್ದನು. ಶೃಂಗೇರಿ ಮಠ, ಬಾಳೆಹಳ್ಳಿ ಮಠ, ಮಹಂತರ ಮಠ, ಮೊದಲಾದುವುಗಳಿಗೆ ಉದಾರವಾಗಿ ಭೂಮಿಕಾಣಿಗಳನ್ನು ಕೊಟ್ಟನು. ವಿಧಿ ವಿಲಾಸದಂತೆ ಕ್ರಿ. ಶ. ೧೬೩೦ರಲ್ಲಿ ಈ ದೊರೆ ತನ್ನ ಭೌತಿಕದೇಹವನ್ನು ತೊರೆದು ಶಿವ ಸಾಯುಜ್ಯವನ್ನು ಪಡೆದನು.

ವೀರಭದ್ರನಾಯಕನು ಕೆಳದಿಯ ಮುಂದಿನ ಅರಸನಾದನು. ಇವನು ಕ್ರಿ. ಶ. ೧೬೩೦–೪೫ ವರೆಗೆ ರಾಜ್ಯಭಾರ ಮಾಡಿದನು. ಇವನ ಕಾಲದಲ್ಲಿ ಕೆಲವು ಅಧಿಕಾರಿಗಳು ಸ್ವೇಚ್ಛಾಚಾರಿಗಳಾಗಿ ವರ್ತಿಸಿದರು. ದುಷ್ಟರು ರಾಜ ಬಂಧುಗಳಲ್ಲಿ ಕೆಲವರನ್ನು ಹೆಚ್ಚಿಸಲು ಆರಂಭಿಸಿದರು. ಇವನು ಕೆಲವು ಕಾಲ ತುಂಗಾತೀರದ ತೀರ್ಥಹಳ್ಳಿಯಲ್ಲಿ ಇರತೊಡಗಿದನು.

ಇವನ ಕಾಲದಲ್ಲಿ ಬಿಜಾಪುರದ ರಣದುಲ್ಲಾ ಖಾನನು ಇಕ್ಕೇರಿ ಸಂಸ್ಥಾನದ ಮೇಲೆ ಬಲವಾದ ಸೈನ್ಯದೊಡನೆ ಬಿದ್ದನು. ಆಗ ಆ ಸೈನ್ಯವನ್ನು ನಿಗ್ರಹಿಸಲಾರದೆ ವೀರಭದ್ರನಾಯಕನು ಮೊದಲು ಕವಿಲೇದುರ್ಗಕ್ಕೂ, ಅನಂತರ ಭುವನಗಿರಿದುರ್ಗಕ್ಕೂ ಓಡಿಹೋದನು.ರಣದುಲ್ಲಾ ಖಾನನು ಅಲ್ಲಿಗೂ ಬಂದು ರಾಜನನ್ನು ಆಕ್ರಮಿಸಿದುದರಿಂದ, ಅಗ ರಾಜನು ಮುಂದುಗಾಣದೆ ಬಿಜಾಪುರದ ಸೇನಾಪತಿಯಕೂಡ ರಾಜಿಮಾಡಿಕೊಂಡನು. ಇವನ ಕಾಲದಲ್ಲಿ ಅಕ್ಕಪಕ್ಕದ ತರೀಕೆರೆ–ಮೊದಲಾದ ಪಾಳೆಯಗಾರರು ರಾಜ್ಯಕ್ಕೆ ತೊಂದರೆ ಕೊಟ್ಟರು. ಇವನ ಕಾಲದಲ್ಲಿಯೇ ಶಿವಪ್ಪನಾಯಕನ ನೇತೃತ್ವದಲ್ಲಿ ಕೆಳದಿಯ ಸೈನ್ಯವು, ಸೋದೆ, ಬಳ್ಳಾಳ, ತುಳುವ ಸೀಮೆಗಳನ್ನು ಜಯಿಸಿತು.

ಇವನ ಕಾಲದಲ್ಲಿ ವಿಖ್ಯಾತನಾದ ಶಿವಪ್ಪನಾಯಕನು (ಇವನು ವಾವೆಯಲ್ಲಿ ವೀರಭದ್ರನಾಯಕನಿಗೆ ಚಿಕ್ಕಪ್ಪನಾಗಬೇಕು.) ಮುಂದೆ ಬಂದನು. ಈ ವೀರಭದ್ರನಾಯಕನ ಕಾಲದಲ್ಲೇ ರಾಜ್ಯದಕೇಂದ್ರವು ಇಕ್ಕೇರಿಯಿಂದ ಬಿದನೂರಿಗೆ ಹೋಯಿತು.

ವೀರಭದ್ರನಾಯಕನು ಅತ್ಯಂತ ಪರಾಕ್ರಮಶಾಲಿಯಾಗಿಯೂ, ರಾಜ ತಂತ್ರವಿಶಾರದನಾಗಿಯೂ ಇದ್ದನು. ಇವನು ಶಾಲಿವಾಹನ ಶಕ ೧೫೬೦ ರಲ್ಲಿ ಇಕ್ಕೇರಿಯನ್ನು ಬಿಟ್ಟು ಬಿದನೂರಿಗೆ ಬಂದು ನೆಲಸಿದಂತೆ ತಿಳಿದು ಬಂದಿದೆ. ಇವನ ಪತ್ನಿ ಗಂಡನಸಮಾಧಿಯಲ್ಲಿ ಸಜೀವವಾಗಿ ಹೂಳಿಸಿ ಕೊಂಡು ತನ್ನ ಪತಿನಿಷ್ಠೆಯನ್ನು ವ್ಯಕ್ತಪಡಿಸಿದಳು. ವೀರಭದ್ರನಾಯಕನು ದೂರದೃಷ್ಟಿಯುಳ್ಳವನಾದುದರಿಂದ ತನ್ನ ದಾಯಾದಿಯೂ, ಆಳಿದ ದೊಡ್ಡ ಸಂಕಣ್ಣನಾಯಕನ ಪ್ರಪೌತ್ರನೂ, ಸಕಲರಾಜ ಲಕ್ಷಣ ಸಂಪನ್ನನೂ ಆದ ಶಿವಪ್ಪನಾಯಕನನ್ನು ಸರ್ವ ವಿಧದಿಂದಲೂ ಪ್ರೋತ್ಸಾಹಿಸುತ್ತಾ ಅವನು ಮುಂದಿನ ರಾಜನಾಗುವುದಕ್ಕೆ ಸರ್ವಸಿದ್ಧತೆಗಳನ್ನೂ ಮಾಡುತ್ತಿದ್ದನು. ಅವನ ಮದುವೆಯನ್ನು ಅತ್ಯಂತ ವೈಭವದಿಂದ ಮಾಡಿದನು. ಅವನನ್ನು ಅನೇಕ ಯುದ್ಧಗಳ ಮುಂದಾಳುವನ್ನಾಗಿಮಾಡಿ ಗಣ್ಯನಾಗುವಂತೆ ಮಾಡಿದನು. ಶಿವಪ್ಪನಾಯಕನು ಕೇವಲ ತಾರುಣ್ಯದಲ್ಲಿಯೇ ತರೀಕೆರೆ, ಬಸವಾಪಟ್ಟಣ, ಮೊದಲಾದ ಕೋಟೆಗಳನ್ನು ಹಿಡಿದು ಕೆಳದಿಯ ರಾಜ್ಯವನ್ನು ವಿಸ್ತರಿಸಿದನು. ಅಷ್ಟೇ ಅಲ್ಲದೆ ಶಿವಪ್ಪನಾಯಕನು ಮಿತ್ರರ ಸೈನ್ಯದೊಡನೆ ಮೈಸೂರು ರಾಜ್ಯದ ಮೇಲೆ ದಾಳಿಯಿಟ್ಟನು. ಸೋದೆ, ಬಿಳಗಿ ಮೊದಲಾದ ಪಾಳೆಯಗಾರ ರನ್ನು ಜಯಿಸಿ ಅಪಾರವಾದ ಐಶ್ವರ್ಯವನ್ನು ಗಳಿಸಿ ಬಿದನೂರು ಕೋಟೆ ಯನ್ನು ಬಲಪಡಿಸಿದನು. ಮತ್ತು ತನ್ನ ಅರಮನೆಯಲ್ಲಿ ಸೇರಿಕೊಂಡು ಪಿತೂರಿಮಾಡುತ್ತಿದ್ದ ದಿವಾನ್ ಪುಟ್ಟಣ್ಣ, ರಾಮಕೃಷ್ಣಪ್ಪ, ಕಾಶೀವೀರಯ್ಯ- ಮೊದಲಾದವರನ್ನು ಸದೆಬಡಿದು ರಾಜ್ಯದ ಭದ್ರತೆಯನ್ನು ಹೆಚ್ಚಿಸಿದನು. ವೀರಭದ್ರನಾಕನು ತನ್ನ ಪತ್ನಿಯ ವಿಯೋಗದಿಂದ ವೈರಾಗ್ಯ ಹೊಂದಿ ದೇಶವನ್ನು ಸಂಚರಿಸುವ ಸಮಯದಲ್ಲಿ ವೀರ ಶಿವಪ್ಪನಾಯಕನು ರಾಜ್ಯದ ವ್ಯವಸ್ಥೆಯನ್ನು ನೋಡಿಕೊಂಡನು. ವೀರಭದ್ರನಾಯಕನು ಶಾಲಿವಾಹನ ಶಕ ೧೫೬೭ ನೆಯ ಪಾರ್ಥಿವ ಸಂವತ್ಸರದಲ್ಲಿ ಖಂಡಲೂರಿನಲ್ಲಿ ಶಿವಲೋಕ ವನ್ನು ಸೇರಿದನು. ಈತನ ಹೆಂಡತಿ ಕೊಲ್ಲೂರಮ್ಮಾಜಿಯು ಗಂಡನ ಜತೆ ಯಲ್ಲಿಯೇ ಸಮಾಧಿಯಾದಳು. ಒಟ್ಟಿನಲ್ಲಿ ವೀರಭದ್ರನಾಯಕನು ಕೆಳದಿಯ ರಾಜ್ಯದ ಗೌರವವನ್ನು ಎಲ್ಲವಿಧದಿಂದಲೂ ಹೆಚ್ಚಿಸಿದನು.

೪. ವೀರ ಶಿವಪ್ಪನಾಯಕ.

ಮೇಲೆ ಸೂಚಿಸಿದ ವೀರಭದ್ರನಾಯಕನಿಗೆ ಸಂತಾನವಿಲ್ಲವಾಗಿ ಇವನ ಅನಂತರ ಚಿಕ್ಕ ಸಂಕಣ್ಣನಾಯಕನ ಮಗ ಶಿವಪ್ಪನಾಯಕನಿಗೆ ಬಿದನೂರಿನ ಅರಮನೆಯಲ್ಲಿ ಕ್ರಿ. ಶ. ೧೬೪೫ರಲ್ಲಿ ಪಟ್ಟವಾಯಿತು. ಆಗಿನ ಕಾಲದಲ್ಲಿ ಇವನಿಗಿಂತಲೂ ಸಮೀಪದ ರಾಜಬಂಧುಗಳೂ ಸಮರ್ಥರೂ,ಆಡಳಿತದಕ್ಷರೂ ಯಾರೂ ಇರಲಿಲ್ಲ. ಇವನು ರಾಜ್ಯದಲ್ಲಿದ್ದ ಅಶಾಂತಿಯನ್ನೆಲ್ಲಾ ಪರಿಹರಿಸಿ ರಾಜ್ಯವನ್ನು ಸುವ್ಯವಸ್ಥೆಗೊಳಿಸಿದನು. ಈತನು ದೂರದೃಷ್ಟಿಯುಳ್ಳವನೂ ರಾಜನೀತಿವಿದನೂ ಆಗಿದ್ದುದರಿಂದ ತಮ್ಮನಾದ ವೆಂಕಟಪ್ಪನಾಯಕ ಮತ್ತು ಇತರ ರಾಜಬಂಧುಗಳಲ್ಲಿ ಸಲುಗೆಯಿಂದ ನಡೆದುಕೊಂಡನು. ಇವನು ಜನರು ಪೂರ್ವಾಚಾರದಂತೆ ನಡೆಯಬೇಕೆಂದೂ, ಧರ್ಮನಿಷ್ಠರಾಗಿರಬೇಕೆಂದೂ ಬಹಳವಾಗಿ ಪ್ರಯತ್ನಿಸಿದನು. ಇವನ ಕಾಲದಲ್ಲಿ ಚನ್ನರಾಯಪಟ್ಟಣ, ಹೊಳೆನರಸೀಪುರ, ಐಗೂರು ಮೊದಲಾದವು ಕೆಳದಿ ರಾಜ್ಯಕ್ಕೆ ಸೇರಿದವು. ಇವನ ಆಡಳಿತಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಪತನವಾಗಿ ಆ ರಾಜವಂಶೀಯರು ಪೆನುಗೊಂಡೆ ಮತ್ತು ಚಂದ್ರಗಿರಿಯಲ್ಲಿ ಆಳುತ್ತಿದ್ದರು. ಈತನು ವಿಜಯನಗರದ ರಾಜಪ್ರತಿನಿಧಿಯಾದ ಶ್ರೀರಂಗರಾಯನಿಗೆ ಆಶ್ರಯಕೊಟ್ಟು ಸಕ್ಕರಾಯಪಟ್ಟಣದ ಆಧಿಪತ್ಯವನ್ನು ಕೊಟ್ಟು ಗೌರವಿಸಿದನು. ವಿಜಯನಗರಕ್ಕೆ ಸೇರಿದ ವೇಲೂರನ್ನು ತುರುಷ್ಕರು ಆಕ್ರಮಿಸಿದಾಗ ಅಲ್ಲಿಗೆ ದಂಡೆತ್ತಿ ಹೋಗಿ ಆ ವೇಲೂರನ್ನು ವಶಪಡಿಸಿಕೊಂಡನು. ಇವನು ವಾಜಪೇಯ ಮೊದಲಾದ ಯಾಗಗಳನ್ನು ಮಾಡಿ ಬ್ರಾಹ್ಮಣರನ್ನೂ, ವಿದ್ವಾಂಸರನ್ನೂ ಸಂತೈಸಿದನು. ಕಾಶಿ, ಕೇದಾರ, ಶಿವಗಂಗೆ, ಶ್ರೀಶೈಲ, ಗೋಕರ್ಣ, ಹಂಪೆ, ರಾಮೇಶ್ವರ ಮೊದಲಾದ ಕ್ಷೇತ್ರಗಳಲ್ಲಿ ಆಯಾದೇಶದವರ ಸೇವಾದಿಗಳು ನಡೆವಂತೆ ಉದಾರವಾಗಿ ದತ್ತಿಗಳನ್ನೂ, ಧನವನ್ನೂ ಕೊಟ್ಟನು. ಇವನ ಕೀರ್ತಿ ದಕ್ಷಿಣ ಭಾರತದ ತುಂಬ ಹರಡಿತು. ಇವನು ಧೀರೋದಾತ್ತ ನೆನಿಸಿದನು.

ಈ ಕಾಲದಲ್ಲಿ ಮೈಸೂರಿನಲ್ಲಿ ಪ್ರಖ್ಯಾತರಾದ ರಾಜಒಡೆಯರು ರಾಜ್ಯಭಾರ ಮಾಡುತ್ತಿದ್ದರು. ಅವರು ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಬದಲಾಯಿಸಿಕೊಂಡರು. ದುರ್ಬಲನಾಗಿದ್ದ ವಿಜಯ ನಗರದ ಪ್ರತಿನಿಧಿ ಶ್ರೀರಂಗರಾಯನಿಂದ ರಾಜ್ಯವನ್ನು ಕ್ರಿ. ಶ. ೧೬೧೦ಕ್ಕೆ ತಮ್ಮ ಕೈವಶ ಮಾಡಿಕೊಂಡರು.

ಈ ಸನ್ನಿವೇಶಗಳಲ್ಲಿ ಶಿವಪ್ಪನಾಯಕನು ಮತ್ತೆ ವಿಜಯನಗದ ರಾಜ್ಯವನ್ನು ಸ್ಥಾಪಿಸುವ ಹಂಬಲದಿಂದ ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಕಡೂರು, ಹಾಸನ, ಮೈಸೂರು ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ಮುತ್ತಿದನು. ಅತ್ತ ಮೈಸೂರಿನವರು ತಮ್ಮ ರಕ್ಷಣೆಗಾಗಿ ಬಲವಾದ ಸಿದ್ಧತೆ ಮಾಡಿಕೊಂಡರು. ಆದರೆ ಜಯಲಕ್ಷ್ಮಿಯ ಕೃಪಾದೃಷ್ಟಿಯು ಶ್ರೀರಂಗಪಟ್ಟಣದ ಕಡೆಗೆ ಇದ್ದುದರ ಫಲವಾಗಿ, ಕೆಳದಿಸೀಮೆಯ ಕಡೆ ರಾಜ ದ್ರೋಹಿಗಳ ದಂಗೆ ಪ್ರಾರಂಭವಾದ ನಿಮಿತ್ತವಾಗಿ, ಶಿವಪ್ಪನಾಯಕನು ಸೈನ್ಯ ಸಮೇತ ಬಿದನೂರಿಗೆ ಹಿಂದಿರುಗಬೇಕಾಯಿತು. ಈತನು ಮಂಗಳೂರು, ಮಳವೆ, ಚಂದ್ರಗಿರಿ ಮೊದಲಾದ ಪಟ್ಟಣಗಳನ್ನು ಸಾಧಿಸಿದನು. ಅಲ್ಲದೆ ಚಂದ್ರಗಿರಿಯಲ್ಲಿ ಕೋಟೆಕಟ್ಟಿದನು. ಮತ್ತು ಅರಬ್ಬಿಸಮುದ್ರದಲ್ಲಿ ಒಂದು ದ್ವೀಪವನ್ನು ಹಿಡಿದು ಅಲ್ಲಿ ಒಂದು ಕೋಟೆಯನ್ನು ಕಟ್ಟಿ ಅದಕ್ಕೆ ಬಸವರಾಜ ದುರ್ಗಎಂದು ಹೆಸರಿಟ್ಟನು. ಇದರಿಂದ ಇವನು ರಾಜ್ಯದ ರಕ್ಷಣೆಗೆ ನಾವೆಯ ಸೈನ್ಯವನ್ನು ಇಟ್ಟಿದ್ದನೆಂದು ತಿಳಿದುಕೊಳ್ಳಬಹುದು. ಅ ಕಾಲದಲ್ಲಿ ಗೋವೆ, ಕಾರವಾರ ಮೊದಲಾದೆಡೆ ವ್ಯಾಪಾರದ ಕೋಟೆಗಳನ್ನು ಕಟ್ಟಿಕೊಂಡಿದ್ದ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಮತ್ತು ಪ್ರೆಂಚರು-ಇವರುಗಳನ್ನೆಲ್ಲಾ ಜಯಿಸಿ ತನ್ನ ವಶದಲ್ಲಿಟ್ಟುಕೊಂಡನು. ಮಲಬಾರನ್ನು ಜಯಿಸಿ ಮಾಪಿಳ್ಳೆಗಳನ್ನು ಹತೋಟಿಗೆ ತಂದನು. ಶಿರಸಿ, ಬನವಾಸಿ, ಸ್ವಾದಿ ಮೊದಲಾದುವನ್ನು ಜಯಿಸಿದನು. ಸ್ವಾದಿಯ ಪಾಳೆಯಗಾರನನ್ನು ತನ್ನ ಅಧೀನ ಮಾಡಿಕೊಂಡು ಮತ್ತೆ ಅವನ ರಾಜ್ಯವನ್ನು ಹಿಂದಿರುಗಿಕೊಟ್ಟನು. ಬ್ರಾಹ್ಮಣರಿಗೂ, ವಿದ್ವಾಂಸರಿಗೂ, ಜಂಗಮರಿಗೂ ಅಪಾರವಾದ ಧನವನ್ನುಕೊಟ್ಟನು. ಅವರು ಧರ್ಮಪ್ರಸಾರ, ಸಾಹಿತ್ಯಪ್ರಸಾರ ಕಾರ್ಯದಲ್ಲಿ ನಿರತರಾಗುವಂತೆ

ಮಾಡಿದನು. ದೇಶದಲ್ಲಿ ನ್ಯಾಯವಿಮರ್ಶೆಯನ್ನು ಖಚಿತ ಗೊಳಿಸಿದನು. ರಾಜ್ಯದಲ್ಲಿ ಭೂಮಿಯನ್ನು ಅಳತೆ ಮಾಡಿಸಿ, ತರಿ, ಖುಷ್ಕಿ, ಬಾಗಾಯಿತು, ಜಮೀನುಗಳಿಗೆ ನ್ಯಾಯವಾದ ಕಂದಾಯವನ್ನು ನಿಗದಿಮಾಡಿದನು. ಈಗಲೂ ನಮ್ಮ ರಾಜ್ಯದಲ್ಲಿ "ಶಿವಪ್ಪನಾಯಕನ ಶಿಸ್ತು"ಎಂಬ ಹೆಸರು ರೂಢಿಯಲ್ಲಿದೆ. ಒಳದೇಶದಲ್ಲಿ ಗಲಭೆ ಮಾಡುತ್ತಿದ್ದ ತುಂಟರನ್ನು ಅಡಗಿಸಿದನು. ಇವನ ಕಾಲದಲ್ಲಿ ರಾಜ್ಯದ ವಿಸ್ತಾರವು ಬಹಳವಾಯಿತು. ದಕ್ಷಿಣದಲ್ಲಿ ಶ್ರೀರಂಗ ಪಟ್ಟಣ, ಉತ್ತರದಲ್ಲಿ ಬಿಜಾಪುರ, ಪಶ್ಚಿಮಕ್ಕೆ ಅರಬ್ಬೀಸಮುದ್ರ–ಇವು ಮೇರೆ ಯಾದುವು. ಈತನ ಕಾಲದಲ್ಲಿ ಕೆಳದಿಯ ರಾಜ್ಯವು ಅತ್ಯಂತ ವೈಭವದ ಶಿಖರವನ್ನು ಮುಟ್ಟಿತು. ಈತನ ಪರಾಕ್ರಮ, ಔದಾರ್ಯ, ನ್ಯಾಯನಿಷ್ಠೆ, ಧರ್ಮಬುದ್ಧಿ ಮೊದಲಾದ ಗುಣಗಳು ಶತ್ರುಗಳನ್ನೂಮಿತ್ರರನ್ನಾಗಿ ಮಾಡು ತ್ತಿದ್ದವು. ಈತನಲ್ಲಿ ಒಬ್ಬ ಚಕ್ರವರ್ತಿಗಿರಬೇಕಾದ ಎಲ್ಲ ಮಹದ್ಗುಣಗಳೂ ಇದ್ದವು. ಪರಿಸ್ಥಿತಿ ಅನುಕೂಲವಾಗಿದ್ದರೆ,ಈತನು ಚಕ್ರಾಧಿಪತ್ಯವನ್ನು ಸ್ಥಾಪಿ ಸಲು ಅರ್ಹನಾಗಿದ್ದನು. ಕರ್ಣಾಟಕ ರಾಜ್ಯಲಕ್ಷ್ಮಿಯ ಸ್ಥಾನ ಆಗ ಬಿದ ನೂರು ಎನಿಸುತ್ತಿದ್ದಿತು. ಅನೇಕ ಪಾಳೆಯಗಾರರು ಈತನನ್ನು ಆಶ್ರಯಿ ಸುತ್ತಿದ್ದರು. ಇವನು ಅತ್ಯಂತ ಧರ್ಮದಿಂದ ಮತ್ತು ದರ್ಪದಿಂದ ರಾಜ್ಯ ಭಾರ ಮಾಡಿದನು. ಈತನ ಮರಣಕಾಲದಲ್ಲಿ ಲಿಂಗಮ್ಮಾಜಿ, ನಾಗಮ್ಮಾಜಿ– ಎಂಬ ಇಬ್ಬರು ಹೆಂಡತಿಯರು ಜೀವಂತ ಸಮಾಧಿಯಾದರು. ಕೆಳದಿಯ ರಾಣಿಯರ ಈ ಪಾತಿವ್ರತ್ಯಭಾವವು ಶ್ಲಾಘ್ಯವೇ ಸರಿ. ಹಿಂದೂ ಸ್ತ್ರೀಯರ ಘನತೆಯನ್ನು ಹೆಚ್ಚಿಸ ತಕ್ಕುದೇ ಸರಿ.

ಶಿವಪ್ಪನಾಯಕನ ಅನಂತರ ಚಿಕ್ಕವೆಂಕಟಪ್ಪನಾಯಕನು ರಾಜ್ಯಕ್ಕೆ ಅರಸನಾದನು. ಈತನಿಗೆ ಕ್ರಿ.ಶ. ೧೬೬೧ ರಲ್ಲಿ ಬಿದನೂರು ಅರಮನೆಯಲ್ಲಿ ಪಟ್ಟವಾಯಿತು. ಇವನ ಕಾಲದಲ್ಲಿ ರಾಜ್ಯದಲ್ಲಿ ಒಳಜಗಳ ಪ್ರಾರಂಭವಾ ಯಿತು. ಶಿವಪ್ಪನಾಯಕನ ಮಗ ಭದ್ರಪ್ಪನಾಯಕನು ತನಗೆ ರಾಜ್ಯವಾಗ ಲಿಲ್ಲವೆಂದು ಅಸಮಾಧಾನ ಪಟ್ಟಿದ್ದನು. ಅದರ ಪರಿಣಾಮವಾಗಿ ರಾಜ್ಯದಲ್ಲಿ ಕೋಲಾಹಲವಾಗಿ ಅಡಗಿಸುವುದೇ ಕಷ್ಟವಾಯಿತು. ಕ್ರಿ. ಶ. ೧೬೬೨ ರಲ್ಲಿ ಚಿಕ್ಕವೆಂಕಟಪ್ಪನಾಯಕನು ಮರಣ ಹೊಂದಿದನು. ಸಮಸ್ಯೆ ಪರಿಹಾರವಾ ಯಿತು. ಒಳದೇಶದ ಗಲಭೆತಾನಾಗಿ ನಿಂತಿತು.

ಅನಂತರ ವಿಖ್ಯಾತನಾದ ಶಿವಪ್ಪನಾಯಕನ ಮಗ ಭದ್ರಪ್ಪನಾಯಕ ನಿಗೆ ಬಿದನೂರು ಅರಮನೆಯಲ್ಲಿ ಪಟ್ಟವಾಯಿತು. ಇವನು ತಂದೆಯಂತೆಯೇ ಶೂರನಾಗಿದ್ದನು. ಇವನ ಕಾಲದಲ್ಲಿ ಹೊನ್ನವಳ್ಳಿ, ಚಿಕ್ಕನಾಯಕನಳ್ಳಿ, ಕಂದುಗೆರೆ, ಬೂದಿಹಾಳು ಈ ಊರುಗಳು ಕೆಳದಿಗೆ ಸೇರಿದವು.

ಕೆಳದಿಯ ನೆರೆಯ ಪಾಳೆಯಗಾರರಾದ ಸ್ವಾದಿಯ ರಾಜರು ದುರ್ಬುದ್ಧಿ ಯಿಂದ ಬಿಜಾಪುರದ ನವಾಬರನ್ನು ಎತ್ತಿಕಟ್ಟಿ ಕೆಳದಿಯ ರಾಜ್ಯದ ಮೇಲೆ ಸೈನ್ಯವನ್ನು ಹೊರಡಿಸುವಂತೆ ಮಾಡಿದರು. ಪ್ರಚಂಡವಾದ ತುರುಷ್ಕರ ಸೈನ್ಯಕ್ಕೆ ಕೆಳದಿ ಸೈನ್ಯ ಸೋತುಹೋಯಿತು. ಆಗ ಬಿಜಾಪುರದ ದಂಡನಾ ಯಕನು ಬಿದನೂರನ್ನು ಕೊಳ್ಳೆಹೊಡೆದು ಅರಮನೆಯಲ್ಲಿ ನೆಲಸಿದನು. ಭದ್ರಪ್ಪನಾಯಕನು ದೂರದೃಷ್ಟಿಯಿಂದ ಭುವನಗಿರಿಗೆ ಹೋಗಿ ಪ್ರಾಣವನ್ನು ಉಳಿಸಿಕೊಂಡನು. ಅನಂತರ ಬಿಜಾಪುರದವರ ಕೂಡೆ ಸಂಧಾನಮಾಡಿ ಕೊಂಡು ಅವರನ್ನು ಹಿಂದಿರುಗಿಸಿದನು. ಇವನು ಭಾರತದ ಅನೇಕ ತೀರ್ಥ ಕ್ಷೇತ್ರಗಳನ್ನು ಸಂಚರಿಸಿದನು. ಶಿವರಾಜಪುರ, ವೆಂಕಟಪುರ - ಎಂಬ ಅಗ್ರ ಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನಮಾಡಿದನು. ಮಠಮಾನ್ಯಗಳನ್ನು ಕಟ್ಟಿಸಿಕೊಟ್ಟು ಜಂಗಮರನ್ನು ರಕ್ಷಿಸಿದನು. ಕೊಲ್ಲೂರು ಮೂಕಾಂಬಿಕೆ ದೇವಾಲಯ, ಶೃಂಗೇರಿಯ ಶಾರದಾಪೀಠ, ಮುಳಬಾಗಿಲು ಕೃಷ್ಣಾನಂದ ಸ್ವಾಮಿಗಳ ಮಠ ಇವಕ್ಕೆ ಬೇಕಾದ ದತ್ತಿಗಳನ್ನು ಕೊಟ್ಟನು. ಇವನು ಕ್ರಿ. ಶ. ೧೬೬೪ರಲ್ಲಿ ಶಿವೈಕ್ಯನಾದನು. ಇವನೊಡನೆಯೇ ಇವನ ಇಬ್ಬರು ಹೆಂಡತಿಯರೂ ಜೀವಂತ ಸಮಾಧಿಯಾದರು. ಇವನ ರಾಜ್ಯದಲ್ಲಿ ಬಿಜಾ ಪುರದ ಕೂಡೆ ನಡೆದ ಯುದ್ಧದ ಸೋಲಿನ ಪ್ರಸಂಗವನ್ನು ಬಿಟ್ಟರೆ ಉಳಿದುದೆಲ್ಲಾ ಮಹತ್ವವಾದುವೆಂದೇ ಹೇಳಬಹುದು.

ಕೆಳದಿಯ ರಾಣಿಯರು ಪತಿಯ ಮರಣಾನಂತರ ಜೀವಿಸಬಾರದೆಂದು ಸಂಕಲ್ಪಿಸಿ ಪತಿ ಸಮಾಧಿಯಲ್ಲಿಯೇ ತಾವೂ ಸಮಾಧಿಯಾಗುತ್ತಿದ್ದುದು ಗಮ ನಾರ್ಹವಾಗಿದೆ. ಇದು ರಾಜಪುತ್ರ ಸ್ತ್ರೀಯರ 'ಜೋಹರ್' ಪದ್ಧತಿಯನ್ನು ನೆನಪಿಗೆ ತರುತ್ತದೆ. ಕೆಳದಿಯ ರಾಜ್ಯದ ಗೌರವ ಹಾಗೂ ಪ್ರತಿಷ್ಠೆಗಳನ್ನು ಈ ಸಾಧ್ವಿಯರ ಬಲಿದಾನವು ಹೆಚ್ಚಿಸಿದೆ ಎನ್ನಬಹುದು.

೫. ರಾಣಿ ಚೆನ್ನಮ್ಮಾಜಿ

ಲೋಕದಲ್ಲಿ ಯಾವುದೂ ಒಂದೇ ಸಮವಾಗಿ ಇರುವಂತೆ ತೋರುವುದಿಲ್ಲ. ಭೂಮಿಯನ್ನು ಸುತ್ತುಗಟ್ಟಿದ ಹಾಗೂ ಆಗಸದ ಮೋಡಗಳಿಗೆ ಆಧಾರವಾದ ಸಾಗರವು ಒಮ್ಮೆ ಉಬ್ಬುತ್ತದೆ, ಇನ್ನೊಮ್ಮೆ ತಗ್ಗುತ್ತದೆ. ಜಗತ್ತಿಗೆ ಆಹ್ಲಾದಕಾರಿಯಾದ ಚಂದ್ರನು, ಪರಮೇಶ್ವರನ ಆಭರಣವೆನಿಸಿದ್ದರೂ ಅವನಿಗೆ ಅಭ್ಯುದಯ ಮತ್ತು ಕ್ಷೀಣತೆಗಳು ಬಿಟ್ಟುದಿಲ್ಲ. ಹಿಮಾಲಯವನ್ನೇ ಮಾತೃ ಸ್ಥಾನವನ್ನಾಗಿ ಉಳ್ಳ, ಗಂಗಾ, ಸಿಂಧು, ಬ್ರಹ್ಮಪುತ್ರ, ಯಮುನಾದಿ ನದಿಗಳು ಕೂಡ ಒಮ್ಮೆ ಏರುತ್ತವೆ! ಇನ್ನೊಮ್ಮೆ ಇಳಿಯುತ್ತವೆ. ಈ ಮಾತು ವ್ಯಕ್ತಿಗೂ, ಸಮಾಜಕ್ಕೂ ಅನ್ವಯಿಸುವಂತೆಯೇ ರಾಜ್ಯ ಸಾಮ್ರಾಜ್ಯಗಳಿಗೂ ಅನ್ವಯಿಸುತ್ತದೆ. ಹೀಗಾಗುವುದು ನಿಸರ್ಗದ ನಿಯಮವೆಂದೇ ತೋರುತ್ತದೆ. ಸಾರ್ವಭೌಮ ಪದವಿಗೆ ಅರ್ಹನೆನಿಸಿದ ಶಿವಪ್ಪನಾಯಕನ ಕಾಲದಲ್ಲಿ ಕೆಳದಿಯ ರಾಜ್ಯವು ಅಭ್ಯುದಯದ ಪರಮಾವಧಿಯನ್ನು ಮುಟ್ಟಿತು. ಅನಂತರ ಕೆಲವು ಕಾಲ ಅದು ಇಳಿಮುಖವೂ ಆಯಿತು. ಅವನ ಅನಂತರ ಬಂದ ಚಿಕ್ಕ ವೆಂಕಟಪ್ಪನಾಯಕ ಮತ್ತು ಇಮ್ಮಡಿ ಭದ್ರಪ್ಪನಾಯಕರ ಕಾಲದಲ್ಲಿ ರಾಜ್ಯದಲ್ಲಿ ಪಿತೂರಿ, ಪರರಾಜರುಗಳ ದಂಡಯಾತ್ರೆ–ಇವುಗಳ ಫಲವಾಗಿ ಕೆಳದಿಯ ರಾಜ್ಯಲಕ್ಷ್ಮಿಯು ಕಾಂತಿಹೀನಳಾದಳು. ಅವಳು ಮತ್ತೆ ಸರ್ವಲಕ್ಷಣ ಸಂಪನ್ನೆಯೆನಿಸಿ ಕಂಗೊಳಿಸಲು ರಾಣಿ ಚನ್ನಮ್ಮಾಜಿಯು ರಾಜ್ಯಸೂತ್ರಗಳನ್ನು ಕೈಕೊಳ್ಳುವವರೆಗೆ ನಿರೀಕ್ಷಿಸಬೇಕಾಯಿತು. ಹಿರಿಯ ಸೋಮಶೇಖರರಾಯನು ಶತ್ರುಗಳ ಕುತಂತ್ರಕ್ಕೆ ಒಳಗಾಗಿ ಆನೆಯ ಮದೋದಕವನ್ನು ಕುಡಿದು ಬುದ್ಧಿಭ್ರಮಣೆಯನ್ನು ಹೊಂದಿದನು; ಚೆನ್ನಮ್ಮಾಜಿಗೆ ಇತ್ತ ಸಂಸಾರ, ಅತ್ತ ರಾಜ್ಯಭಾರ ಎರಡರಲ್ಲೂ ತೊಂದರೆಗಳು ಬರತೊಡಗಿದವು. ರಾಜದ್ರೋಹಿಗಳು ಕೆಲವರು ಕುತ್ಸಿಕ ಶಿವಪ್ಪನಾಯಕನೆಂಬ ರಾಜಬಂಧುವನ್ನು ಮುಂದುಮಾಡಿ ರಾಜ್ಯದಲ್ಲಿ ಗಲಭೆಯನ್ನು ಉಂಟುಮಾಡಿದರು.

ಅಂತಹ ಸಂದರ್ಭಗಳಲ್ಲಿ ರಾಣಿ ಚೆನ್ನಮ್ಮಾಜಿಯು ತೋರಿಸಿದ ಧೈರ್ಯ, ಸಾಹಸ, ಪ್ರತಿಭೆಗಳು ಅಸದೃಶವಾದವು.

ಬಿಜಾಪುರದ ದಂಡು ಬಿದನೂರನ್ನು ಮುತ್ತಿ ಸೋಮಶೇಖರ ರಾಜನನ್ನು ಕ್ರಿ. ಶ. ೧೬೭೧ರಲ್ಲಿ ಯುದ್ಧದಲ್ಲಿ ಕೊಂದುಬಿಟ್ಟಿತು. ಅದು ರಾಣಿಯ ಜೀವನದ ಮೇಲೆ ದೊಡ್ಡ ಆಘಾತವನ್ನು ಉಂಟುಮಾಡಿತು. ಇಂತಹ ವಿಪತ್ಕಾಲದಲ್ಲೂ ಧೈರ್ಯಶಾಲಿನಿಯೂ, ಚತುರಮತಿಯೂ ಆದ ಚೆನ್ನಮ್ಮಾಜಿಯು ತನ್ನ ಕರ್ತವ್ಯವನ್ನು ನೆನೆಸಿಕೊಂಡು ಮನೆತನದ ಮತ್ತು ರಾಜ್ಯದ ಗೌರವವನ್ನು ಉಳಿಸುವ ದೃಷ್ಟಿಯಿಂದ ತನ್ನ ಪತಿ ವಿಯೋಗದ ದುಃಖವನ್ನು ಮರೆತು ರಾಜ್ಯದ ಸಂರಕ್ಷಣೆಗೆ ತೊಡಗಿದಳು. ಆಗ ಬಿದನೂರಿನಲ್ಲಿ ರಾಜದ್ರೋಹಿಗಳ ತಂಡ ಹೆಚ್ಚಾಗಿದ್ದುದರಿಂದ ತನ್ನ ಆತ್ಮಸಂರಕ್ಷಣಾರ್ಥವಾಗಿ ಬಿದನೂರನ್ನು ಬಿಟ್ಟು ಭುವನಗಿರಿಯಲ್ಲಿ ಕೆಲವು ಕಾಲ ನೆಲಸಿದಳು. ಸುದೀರ್ಘವಾಗಿ ಆಲೋಚನೆಮಾಡಿ ರಾಜ್ಯದ ವಿಚಾರ ವಾಗಿ ಹೆಚ್ಚಿನ ಅನುಭವ ಉಳ್ಳವರಾಗಿದ್ದ ಕಾಸರಗೋಡು ತಿಮ್ಮಪ್ಪನಾಯಕ ಸುಬ್ಬುನೀಸ ಕೃಷ್ಣಪ್ಪಯ್ಯ–ಇವರಿಬ್ಬರನ್ನು ಕರೆಸಿ ರಾಜ್ಯದ ಪ್ರಕೃತಸ್ಥಿತಿ ಯನ್ನು ಕೂಲಂಕಷವಾಗಿ ಚರ್ಚಿಸಿದಳು. ರಾಜ್ಯದ ಸಂರಕ್ಷಣೆಗಾಗಿ ಎಲ್ಲರ ಸಹಾಯವನ್ನೂ ಬಯಸಿದಳು. ರಾಣಿಯ ಮಾತು ಆ ದೇಶ ಭಕ್ತರಿಗೆ ಸಮಂಜಸವೆನಿಸಿತು. ಕುಕ್ಷಿತ ಶಿವಪ್ಪನಾಯಕನ್ನು ಮುಂದಿಟ್ಟು ಕೊಂಡು ಕೆಲವರು ಮಾಡುವ ಚಳುವಳಿ ದೇಶದ್ರೋಹವೆಂದು ಅವರಿಗೆ ಮನವರಿಕೆಯಾಯಿತು. ಆಗ ಎಲ್ಲರೂ ಕೂಡಿ ಕುತ್ಸಿತ ಶಿವಪ್ಪನಾಯಕನನ್ನು ಸೆರೆ ಹಿಡಿದು ಚೆನ್ನಮ್ಮಾಜಿಯನ್ನೇ ರಾಜ್ಯದ ರಾಣಿಯನ್ನಾಗಿ ಮಾಡಬೇಕೆಂದು ತೀರ್ಮಾನಿಸಿದರು. ಕ್ರಿ.ಶ. ೧೬೭೨ರಲ್ಲಿ ಬಿದನೂರು ಅರಮನೆಯಲ್ಲಿ ರಾಣಿಗೆ ಕೆಳದಿ ರಾಜ್ಯದ ಪಟ್ಟಾಭಿಷೇಕವಾಯಿತು. ಕೆಳದಿಯ ರಾಜ್ಯಕ್ಕೆ ಕಳೆ ಯೇರಿತು. ರಾಜ್ಯಲಕ್ಷ್ಮಿಯು ನವಯೌವ್ವನದಿಂದ ಶೋಭಿಸಿದಳು.

ರಾಣಿ ಚೆನ್ನಮ್ಮಾಜಿಯು ರಾಜ್ಯದ ಸೂತ್ರಗಳನ್ನು ವಹಿಸಿಕೊಂಡ ಕಾಲ ಭಾರತದಲ್ಲಿಯೇ ಅತಿ ಮಹತ್ವದಕಾಲವೆನ್ನಬಹುದು. ಆಗ ದಿಲ್ಲಿಯಲ್ಲಿ ಔರಂಗಜೇಬನು ರಾಜ್ಯಭಾರ ಮಾಡುತ್ತಿದ್ದನು. ಆತನು

ಮಹತ್ವಾಕಾಂಕ್ಷೆಯಿಂದ ದಕ್ಷಿಣ ಭಾರತವನ್ನು ಜಯಿಸುವ ಹೆಗ್ಗುರಿಯುಳ್ಳವನಾಗಿ ಔರಂಗಾಬಾದಿನಲ್ಲಿ ವಸತಿ ಮಾಡಿ ತನ್ನ ಸೈನ್ಯವನ್ನು ದಕ್ಷಿಣ ಭಾರತವನ್ನು ಜಯಿಸುವ ಹೆಚ್ಚಿನ ಆಸೆಯಿಂದ ಕೂಡಿದ್ದನು. ಆಗ ಮಹಾರಾಷ್ಟ್ರರು ವೀರರಾದ ಛತ್ರಪತಿ ಶಿವಾಜಿಮಹಾರಾಜರ ನೇತೃತ್ವದಲ್ಲಿ ಒಂದು ರಾಜ್ಯವನ್ನು ಕಟ್ಟಿದರು. ಹಿಂದೂ ಧರ್ಮ, ಹಿಂದೂ ಸಂಸ್ಕೃತಿಗಳ ಸಂರಕ್ಷಕರಾದ ಮಹಾನುಭಾವ ಶಿವಾಜಿಯು ಆಗತಾನೇ ಕಾಲಗತಿಯನ್ನು ಹೊಂದಿದನು. ಆಗ ಶಿವಾಜಿಯ ಮಗ ಸಾಂಬಾಜಿಯು ಪುಣೆಯಲ್ಲಿ ಅರಸನಾಗಿದ್ದನು. ಅವನನ್ನು ಔರಂಗಜೇಬಬಾದಶಹನು ಮೋಸದಿಂದ ದಿಲ್ಲಿಗೆ ಕರೆಯಿಸಿ ಸಾಂಬಾಜಿಯನ್ನು ಸೆರೆಯಿಟ್ಟು ಕಡೆಗೆ ಕೊಲ್ಲಿಸಿದನು. ಆಗ ಶಿವಾಜಿಯ ಎರಡನೇ ಮಗನಾದ ರಾಜಾರಾಮನು ದೇವರ ಕೃಪೆಯಿಂದಲೋ ಎಂಬಂತೆ ಕೆಳದಿಯ ರಾಜ್ಯದ ಆಶ್ರಯವನ್ನು ಪಡೆದು ಸಂರಕ್ಷಣೆಯನ್ನು ಪಡೆದನು. ಇದು ಭಾರತ ಚರಿತ್ರೆಯಲ್ಲೇ ಅತಿಮಹತ್ವದ್ದೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ.

ಹಿರಿಯ ಸೋಮಶೇಖರನಾಯಕನು ಚಿಕ್ಕವಯಸ್ಸಿನಲ್ಲೇ ಅಪಮೃತ್ಯುವಿಗೆ ಈಡಾದುದರಿಂದ ಚೆನ್ನಮ್ಮಾಜಿಯು ಸಂತಾನ ಹೀನಳಾದಳು. ಇಂತಹ ಪ್ರಸಂಗದಲ್ಲಿ ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಒದಗಿಸಿಕೊಳ್ಳುವುದು ತನ್ನ ಮತ್ತು ರಾಜ್ಯದ ಹಿತದೃಷ್ಟಿಯಿಂದ ಅಗತ್ಯವೆಂದು ಭಾವಿಸಿ, ರಾಜಬಂಧುವಾಗಿಯೂ, ತನಗೆ ಮಗನ ಹಾವೆಯುಳ್ಳವನಾಗಿಯೂ ಇದ್ದ ಬಸವಪ್ಪನಾಯಕನನ್ನು ಮಂತ್ರಿಗಳು, ದಂಡನಾಯಕರು, ಪ್ರಜಾಮುಖಂಡರು ಇವರುಗಳ ಸಮ್ಮತಿಯನ್ನು ಪಡೆದು ತನ್ನ ದತ್ತಕಪುತ್ರನೆಂದು ಸ್ವೀಕರಿಸಿ ಅವನನ್ನು "ಕೆಳದಿನೃಪಾಲ ಬಸವಪ್ಪನಾಯಕ" ಎಂದು ನಾಮಕರಣ ಮಾಡಿದಳು. ಆ ದತ್ತಕಪುತ್ರನನ್ನು ಮುಂದುಮಾಡಿಕೊಂಡು ರಾಜಕಾರ್ಯಗಳನ್ನು ನಡೆಸುತ್ತಾ ಬಂದಳು. ಆಕೆಯ ಈ ಧರ್ಮಬದ್ಧ ಕಾರ್ಯವು ಪ್ರಜೆಗಳಿಗೂ, ನೆರೆಹೊರೆಯ ಪಾಳೆಯಗಾರರಿಗೂ, ಸಮ್ಮತವೆನಿಸಿತು. ರಾಜ್ಯಕ್ಕೆ ಯೋಗ್ಯ ಉತ್ತರಾಧಿಕಾರಿಯು ನಿಯಾಮಕನಾದುದರಿಂದ ರಾಜದ್ವೇಷಿಗಳ ಹಾವಳಿಯು ಕಡಮೆಯಾಗಲು ಕಾರಣವಾಯಿತು.

ಅರಮನೆಯ ವ್ಯವಸ್ಥೆಯು ಅಚ್ಚುಕಟ್ಟಾಯಿತು. ಚೆನ್ನಮ್ಮಾಜಿಯು ರಾಜಕಾರ್ಯಗಳನ್ನು ಅಮೋಘವಾಗಿ ಮುಂದುವರಿಸಲು ಇದು ಹೆಚ್ಚು ಸಹಾಯವಾಯಿತು. ರಾಜ್ಯಭಾರಕ್ಕೆ ಯುವರಾಜನು ಬೆಂಬಲವಾಗಿ ನಿಂತನು.

ಈ ಕಾಲದಲ್ಲಿ ಮೈಸೂರಿನಲ್ಲಿ ಸಮರ್ಥರಾದ ಚಿಕ್ಕದೇವರಾಜ ಒಡೆಯರು ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ದರ್ಪದಿಂದ ರಾಜ್ಯಭಾರ ಮಾಡುತ್ತಿದ್ದರು. ಪ್ರಸಂಗ ಬಂದಾಗ ಕೆಳದಿಯ ಸೈನ್ಯ ಮೈಸೂರು ರಾಜ್ಯದ ಮೇಲೆ ಬೀಳುತ್ತಿದ್ದಿತು. ಬೆಳಗಾದರೆ ಕೆಳದಿ ಮತ್ತು ಮೈಸೂರು ಸೈನ್ಯಗಳು ತುಮುಲ ಯುದ್ಧವನ್ನು ನಡೆಸುತ್ತಿದ್ದವು. ಅತ್ತ ಪಶ್ಚಿಮದ ಕಡೆ ಗೋವೆ, ಕಾರವಾರ, ಹೊನ್ನಾವರ, ಮಂಗಳೂರು-ಮೊದಲಾದ ಕಡೆ ವ್ಯಾಪಾರದ ಕೋಠಿಗಳನ್ನು ಕಟ್ಟಿಕೊಂಡು ಸಮಯ ಬಂದರೆ ಇಲ್ಲಿನ ರಾಜರುಗಳ ವ್ಯವಹಾರದಲ್ಲಿ ಕೈಹಾಕಿಕೊಂಡು, ಪೋರ್ಚುಗೀಸರು, ಇಂಗ್ಲೀಷರು, ಫ್ರೆಂಚರು, ಡಚ್ಚರು ನಮ್ಮರಾಜ್ಯಗಳಿಗೆ ತೊಂದರೆಯನ್ನು ಕೊಡುತ್ತಿದ್ದರು. ಅತ್ತ ದಕ್ಷಿಣ, ಇತ್ತ ಪಶ್ಚಿಮದ ಕಡೆ ಈರೀತಿ ತೊಂದರೆಯಾದರೆ, ಉತ್ತರದ ಕಡೆ ಬಿಜಾಪುರದ ಮುಸಲ್ಮಾನರ ದಂಡು ಮೇಲಿಂದಮೇಲೆ ಬಂದು ಕೆಳದಿಯ ರಾಜ್ಯದಮೇಲೆ ಬೀಳುತ್ತಿದ್ದಿತು. ಹೀಗೆ ಮೂರು ಕಡೆಯೂ ತನ್ನ ರಾಜ್ಯವನ್ನು ರಕ್ಷಿಸುವ ಹೊಣೆ ಚೆನ್ನಮ್ಮಾಜಿಯ ಮೇಲೆ ಬಿದ್ದಿತು. ಇದನ್ನೆಲ್ಲಾ ಆಕೆ ಸಮರ್ಥರಾದ ದಂಡನಾಯಕರ ಸಹಾಯದಿಂದ ನಿಗ್ರಹಿಸಿ ರಾಜ್ಯವನ್ನು ಸಂರಕ್ಷಿಸುತ್ತಿದ್ದಳು.

ರಾಣಿ ಚನ್ನಮ್ಮಾಜಿಯಲ್ಲಿ ಪರಾಕ್ರಮ, ಸಾಹಸಗಳ ಜತೆಗೆ ಭೂತದಯೆ ಮತ್ತು ನ್ಯಾಯನಿಷ್ಠೆ ಇವು ಅಧಿಕವಾಗಿದ್ದವು. ಕೆಳದಿಯ ಸೈನ್ಯಕ್ಕೆ ಸೋತು ಹೋಗಿದ್ದ ಸ್ವಾದಿಯ ಸದಾಶಿವನಾಯಕನು ರಾಣಿಯನ್ನು ಬಂದು ದೈನ್ಯದಿಂದ ಕೇಳಿಕೊಳ್ಳಲು ಅವಳು ಸ್ವಾದಿಯ ರಾಜ್ಯವನ್ನು ಉದಾರವಾಗಿ ಅವನಿಗೆ ಬಿಟ್ಟುಕೊಟ್ಟಳು. ಗೋಲುಖಂಡದ ನವಾಬನಲ್ಲಿದ್ದು ಕಾರಣಾಂತರದಿಂದ ಅಸಮಾಧಾನಗೊಂಡು, ತನ್ನ ರಾಜ್ಯಕ್ಕೆ ಬಂದ ಪೆದ್ದೂರುಲಿಂಗಪ್ಪನೆಂಬ ಸರದಾರನಿಗೆ ಆಶ್ರಯಕೊಟ್ಟು ಸಂರಕ್ಷಿಸಿದಳು. ತನಗೆ ಸಮವಿಲ್ಲವೆಂದು

ಹಂಕರಿಸಿ ಮೆರೆಯುತ್ತಿದ್ದ ಜರಿಮಲೆಯ ಪಾಳೆಯಗಾರನನ್ನು ತನ್ನ ಲವಾದ ಸೈನ್ಯವನ್ನು ಕಳುಹಿಸಿ ಅವನನ್ನು ಹಿಡಿತರಿಸಿ ಅವನಿಗೆ ುದ್ಧಿವಾದವನ್ನು ಹೇಳಿಕಳುಹಿಸಿದಳು. ಅವನು ಕೆಳದಿಗೆ ವಿಧೇಯ ಾಗಿರುವಂತೆ ಒಪ್ಪಿಕೊಂಡನು. ಇದೆಲ್ಲವೂ ರಾಣಿಚೆನ್ನಮ್ಮಾಜಿಯ ುದಾರಗುಣ ಮತ್ತು ರಾಜನೀತಿವೈಶಾಲ್ಯಕ್ಕೆ ಒಳ್ಳೆಯ ನಿದರ್ಶನವೆಂದು ಾವು ಹೇಳಬಹುದು. ಒಟ್ಟಿನಲ್ಲಿ ಚೆನ್ನಮ್ಮಾಜಿಯು ತಮ್ಮ ಹಿರಿಯರಾದ ವಪ್ಪನಾಯಕರ ದಿವ್ಯಮಾರ್ಗದಲ್ಲಿ ನಡೆಯುತ್ತಿದ್ದಳು. ಅದು ಕಾರಣವೇ ಅವಳ ಕೀರ್ತಿಯು ಹೆಚ್ಚಿತು. ದಿಕ್ಕುದಿಕ್ಕುಗಳಲ್ಲಿ ಕೆಳದಿಯ ಪ್ರಭಾವವು ಅಧಿಕವಾಯಿತು. ಕೆಳದಿಯ ಪ್ರಜೆಗಳು ಸುಖಸಂತೋಷದಿಂದ ನಲಿದರು. ಬಿದನೂರು ಕರ್ಣಾಟಕದಲ್ಲಿ ಒಂದು ಐಶ್ವರ್ಯ ಮತ್ತು ಅಧಿಕಾರದ ಕೇಂದ್ರ ಎನಿಸಿತು. ಮಲೆನಾಡಿನ ಮುಖ್ಯ ಬೆಳೆ ಮೆಣಸು, ಯಾಲಕ್ಕಿ, ಕಬ್ಬು, ಭತ್ತ, ಅಡಕೆ ಇವುಗಳ ವ್ಯಾಪಾರ ಭಾರತದಲ್ಲಿಯೂ, ಯೂರೋಪಿನಲ್ಲಿಯೂ ಹೆಚ್ಚಿತು. ಆಂಗ್ಲೇಯರೇ ಮೊದಲಾದವರಿಗೆ ಈ ದೇಶದ ಸಂಪತ್ತಿನ ಮೇಲೆ ಕಣ್ಣು ಬಿದ್ದಿತು.

೬. ರಾಜಸಭೆಯಲ್ಲಿ ಮಂತ್ರಾಲೋಚನೆ

ಒಂದು ದಿನ ಸುಪ್ರಭಾತ. ಮೂಡಣ ದಿಕ್ಕಿನಲ್ಲಿ ಸೂರ್ಯನು ಆಗ ತಾನೇ ಪೃಥ್ವಿಯನ್ನು ಇಣಕಿ ನೋಡುತ್ತಿದಾನೆ. ಇರುಳೆಲ್ಲಾ ಜನರನು ಬಾಧಿಸಿದ ರಾತ್ರಿಯು ದಿಕ್ಕುಗೆಟ್ಟು ಓಡಿಹೋಗಿದೆ. ಪಕ್ಷಿಗಳು ಕಿಲಕಿಲ ಧ್ವನಿಯನ್ನು ಮಾಡಿಕೊಂಡು ತಮ್ಮ ಆಹಾರ ಸಂಗ್ರಹಣಕ್ಕಾಗಿ ಹೊರ ಹೊರಟಿವೆ. ರಾತ್ರಿಯೆಲ್ಲಾ ಕೊಳಗಳಲ್ಲಿ ಕಾಂತಿಹೀನವಾಗಿದ್ದ ತಾವರೆಗಳು ಸೂರ್ಯೋದಯದಿಂದ ಹರ್ಷಗೊಂಡು ವಿಕಾಸವಾಗಿವೆ. ತರುಗಿಡಗಳ ಎಲೆಗಳು ಸೂರ್ಯ ಕರಸ್ಪರ್ಶದಿಂದ ಕಾಂತಿಗೊಂಡಿವೆ. ಜನರು ತಮ್ಮ ತಮ್ಮ ಕಾರ್ಯಗಳಿಗೆ ಸಿದ್ಧರಾಗಿ ಹೋಗುತ್ತಿದ್ದಾರೆ. ರೈತರು ಹೊಲಗಳಿಗೆ, ವರ್ತಕರು ಅಂಗಡಿಗಳಿಗೆ, ಕೆಲಸಗಾರರು ತಮ್ಮ ಕಾರ್ಯಾಲಯಗಳಿಗೆ ಉತ್ಸಾಹದಿಂದ ಹೋಗುತ್ತಿದ್ದಾರೆ. ಭಾವುಕಜನರು ಸ್ನಾನಮಡಿಗಳಿಂದ ಶುಚಿರ್ಭೂತರಾಗಿ ಬಿದನೂರಿನ ರಾಜ್ಯದೇವತೆಯಾದ ಶ್ರೀನೀಲಕಂಠೇಶ್ವರ ದೇವಾಲಯಕ್ಕೆ ಭಕ್ತಿಯಿಂದ ಹೋಗಿ ಬರುತ್ತಿದ್ದಾರೆ. ಮಂಗಳವಾದ್ಯ ಗಳಿಂದಲೂ, ಘಂಟಾನಾದಗಳಿಂದಲೂ, ವೇದಘೋಷಗಳಿಂದಲೂ ಶ್ರೀಸ್ವಾಮಿಯ ಅರ್ಚನೆಯು ವೈಭವದಿಂದ ಸಾಗುತ್ತಿದೆ. ಹೀಗೆ ಎಲ್ಲೆಡೆ ಗಳಲ್ಲಿಯೂ ಸುಪ್ರಭಾತವು ಆಹ್ಲಾದಕರವಾಗಿ ಕಂಗೊಳಿಸುತ್ತಿದೆ.

ಶ್ರೀ ನೀಲಕಂಠೇಶ್ವರ ದೇವಾಲಯಕ್ಕೆ ಎದುರಾಗಿಯೇ ಒಂದು ಎತ್ತರ ವಾದ ಗುಡ್ಡದಮೇಲೆ ಬಿದನೂರಿನ ರಾಜ್ಯದ ಅರಮನೆ. ಅರಮನೆಯ ಸುತ್ತಲೂ ಸುಭದ್ರವಾದ ಕೋಟೆ. ಆ ಅರಮನೆಯ ಓಲಗಶಾಲೆಯಲ್ಲಿ ರಾಜ ಸಭೆ ನೆರೆದಿದೆ. ಮಂತ್ರಿಗಳು, ದಂಡನಾಯಕರು, ಕವಿಗಳು, ಪಂಡಿತರು, ರಾಯಭಾರಿಗಳು, ದುಭಾಷಿಗಳು, ಕಲಾವಿದರು, ತರವರಿದು ತಮ್ಮ ತಮ್ಮ ಆಸನಗಳಲ್ಲಿ ಮಂಡಿಸಿದ್ದಾರೆ. ರಾಣಿ ಚೆನ್ನಮ್ಮಾಜಿಯು ಕೆಳದಿಯ ಸಿಂಹಪೀಠ ದಲ್ಲಿ ಠೀವಿಯಿಂದ ಮಂಡಿಸಿದ್ದಾಳೆ. ವಿಶಾಲವಾದ ಅವಳ ಹಣೆಯಲ್ಲಿ ಶಿವಭಕ್ತಿ ಸೂಚಕವಾದ ವಿಭೂತಿಯು ಕಂಗೊಳಿಸುತ್ತಿದೆ. ನೀಳವಾದ ಅವಳ ಮೂಗು

ಅವಳು ಭಾಗ್ಯಶಾಲಿನಿ ಎಂಬುದಕ್ಕೆ ನಿದರ್ಶನವಾಗಿದೆ. ವಿಶಾಲವಾದ ಅವಳ ಕಿವಿಗಳು ಆಕೆ ಕೀರ್ತಿಶಾಲಿನಿ ಎಂಬುದನ್ನು ಸೂಚಿಸುತ್ತಿವೆ. ಅವಳ ಹೊಳೆಯುವ ಕೆನ್ನೆಗಳು ಕನ್ನಡಿಗಳನ್ನು ನಾಚಿಸುತ್ತಿವೆ. ತೊಂಡೆಹಣ್ಣಿನಂತಹ ಅವಳ ತುಟಿಗಳು, ದಾಳಿಂಬೆಬೀಜದಂತಹ ಆಕೆಯ ಹಲ್ಲುಗಳು ಅವಳ ಮುಖಸೌಂದರ್ಯವನ್ನು ಹೆಚ್ಚಿಸುತ್ತಿವೆ. ಅವಳ ವಿಶಾಲ ನೇತ್ರಗಳು ಆಕೆ ಮಹಾರಾಣಿ ಪದವಿಗೆ ಅರ್ಹಳೆಂಬುದನ್ನು ಸೂಚಿಸುತ್ತಿವೆ. ಅವಳ ವಕ್ರವಾದ ಹುಬ್ಬುಗಳು ಕೃಷ್ಣಸರ್ಪಗಳ ಗಮನವನ್ನು ಸ್ಪರ್ಧಿಸುತ್ತಿವೆ. ತಕ್ಕಷ್ಟು ನಿಲುವು, ಅದಕ್ಕೆ ತಕ್ಕ ಮೈಕಟ್ಟು, ಚಿನ್ನದ ಬಣ್ಣದ ಕಾಂತಿಯಿಂದ ಅವಳು ಕಂಗೊಳಿಸುತ್ತಿದ್ದಾಳೆ. ಸೊಂಟದಲ್ಲಿ ಕಟ್ಟಿದ ಕತ್ತಿಯು ಅವರ ವೀರ ಗುಣಕ್ಕೆ ಸಾಕ್ಷಿಯಾಗಿದೆ. ಆಕೆಯು ಥಟ್ಟನೆ ನೋಡಿದರೆ ಶಿವನ ರಾಣಿಯಾದ ಪಾರ್ವತಿಯೋ, ಮಹಿಷಾಸುರ ಮರ್ದಿನಿಯಾದ ಚಾಮುಂಡಿಯೋ ಎಂಬಂತೆ ಕಂಗೊಳಿಸುತ್ತಿದ್ದಾಳೆ. ಇಂತಹ ಮಹಾರಾಣಿಯು ಸಭಿಕರನ್ನು ಕುರಿತು ಏನು ಹೇಳುವಳೋ ಎಂದು ಸಭ್ಯರು ಕುತೂಹಲದಿಂದ ಅನಿಮಿಷ ನೇತ್ರರಾಗಿ ಅವಳ ಕಡೆಗೆ ನೋಡುತ್ತಿದ್ದರು. ರಾಣಿಯ ಮುಖಮುದ್ರೆಯು ಗಂಭೀರವಾದ ವಿಷಯವೊಂದನ್ನು ಕುರಿತು ಆಲೋಚಿಸುತ್ತಿದ್ದಂತೆ ಭಾಸವಾಯಿತು. ಪ್ರಾಯೇಣ ಮಂತ್ರಿ ದಂಡನಾಯಕರೂ ಅದಾವುದೋ ಮಹತ್ವದ ರಾಜಕೀಯವನ್ನು ತಲೆಗೆ ಹಚ್ಚಿಕೊಂಡಂತೆ ಕಾಣುತ್ತಿದ್ದಿತು. ಈ ಸನ್ನಿವೇಶವನ್ನು ಸಭಿಕರು ಕಣ್ಣಾರಕಂಡು ಮುಗ್ಧರಾಗಿದ್ದುದು ನ್ಯಾಯವೆಂದೇ ತೋರುತ್ತದೆ.

ಹೀಗೆ ಗಂಭೀರವಾದ ರಾಜಸಭೆಯಲ್ಲಿ ರಾಣಿಗೂ ಮಂತ್ರಿದಂಡನಾಯಕರಿಗೂ ಈ ಮುಂದೆ ಹೇಳುವಂತೆ ಸಂಭಾಷಣೆಯು ನಡೆಯಿತು.

ರಾಣಿ—ಮಂತ್ರಿಮುಖ್ಯರೆ, ಹಿಂದೂಧರ್ಮದ ಉದ್ಧಾರಕರೂ, ಹಿತಚಿಂತಕರೂ, ಗೋಬ್ರಾಹ್ಮಣ ಮತ್ತು ಹಿಂದೂಸ್ತ್ರೀಯರ ಸಂರಕ್ಷಕರೂ ಆದ ಛತ್ರಪತಿ ಶಿವಾಜಿ ಮಹಾರಾಜರ ದ್ವಿತೀಯ ಪುತ್ರರು ರಾಜಾರಾಮರು ನಮ್ಮ ಸಹಾಯವನ್ನು ಯಾಚಿಸಿ ಪತ್ರಬರೆದಿರುವ ಸಂಗತಿಯನ್ನು ಈಗ ಪುರಪ್ರಮುಖರಿಗೂ, ದೇಶಪ್ರಮುಖರಿಗೂ ತಿಳಿಯಪಡಿಸುವೆನು. ದೇಶದ ಆಗು

ಹೋಗುಗಳಿಗೆ ಸಂಬಂಧಿಸಿದ, ಈ ಮಹದ್ವಿಷಯಗಳಲ್ಲಿ ಪ್ರಜಾಮುಖಂಡರ ಅಭಿಪ್ರಾಯವನ್ನು ಪಡೆಯುವುದು ಅಗತ್ಯ. ಇದು ರಾಜ ಧರ್ಮಕ್ಕೂ ರಾಜ್ಯದ ಕ್ಷೇಮಚಿಂತನೆಗೂ ಸಂಬಂಧಪಡುವ ಪ್ರಶ್ನೆ. ಕಾರಣ ಈ ಸಭೆಯಲ್ಲಿ ಈ ವಿಷಯವಾಗಿ ಆಲೋಚನೆ ನಡೆಯುವುದು ಅಗತ್ಯವಾಗಿದೆ.

ಮಂತ್ರಿ ಸುಬ್ಬುನೀಸ—ತಾಯಿ, ತಾವು ಅಪ್ಪಣೆಕೊಡಿಸುವ ವಿಷಯ ಅತ್ಯಂತ ಗಹನವಾದುದು. ಇಂದು ರಾಜಾರಾಮನು ಔರಂಗಜೇಬನ ಶತ್ರುವೆನಿಸಿದ್ದಾನೆ. ಅವನಿಗೆ ಆಶ್ರಯವನ್ನು ಕೊಡುವುದರಿಂದ ನಾವು ದಿಲ್ಲಿಯ ಬಾದಶಹನಿಗೆ ಯುದ್ಧಕ್ಕೆ ಆಹ್ವಾನವಿತ್ತಂತೆ ಆಗುತ್ತದೆ. ನಾವು ಅಪಾರವಾದ ಮೊಗಲರ ಸೈನ್ಯದೊಡನೆ ಯುದ್ಧಮಾಡಬೇಕಾಗುತ್ತದೆ. ಈ ವಿಷಯವಾಗಿ ಪ್ರಜಾಮುಖಂಡರ ಅಭಿಪ್ರಾಯ ಕೊಡಬೇಕಾಗುತ್ತದೆ. ಮೇಲಾಗಿ ಮಂತ್ರಿಬೊಮ್ಮಯ್ಯ, ದಂಡನಾಯಕ ಬಸವಯ್ಯ ಇವರ ಅಭಿಪ್ರಾಯವು ಕೂಡ ಈ ವಿಷಯದಲ್ಲಿ ಬಹಳ ಮುಖ್ಯವಾದುದಾಗಿದೆ.

ರಾಣಿ—ಮಂತ್ರಿ ಬೊಮ್ಮಯ್ಯನವರೂ, ದಂಡನಾಯಕ ಬಸವಯ್ಯನವರೂ ಈ ಮಹತ್ವದ ವಿಷಯದಲ್ಲಿ ತಮ್ಮಗಳ ಅಭಿಮತವೇನೆಂಬುದನ್ನು ಈ ರಾಜಸಭೆಗೆ ತಿಳಿಸಲಿ (ಎಂದು ಅವರ ಕಡೆ ಮುಖ ಮಾಡಿದಳು)

ಮಂತ್ರಿ ಬೊಮ್ಮಯ್ಯ—(ಥಟ್ಟನೆದ್ದು ಮಹಾರಾಣಿಗೆ ಕೈಮುಗಿದು) ಅಮ್ಮಾ, ರಾಜ್ಯದ ಮಾತೆಯಾದ ತಾವು ನಿರೂಪಿಸುವ ಈ ವಿಷಯದಲ್ಲಿ ನಾವು ತಕ್ಕಷ್ಟು ಆಲೋಚನೆಮಾಡಿದ್ದೇವೆ. ದಂಡನಾಯಕ ಬಸವಯ್ಯನವರಲ್ಲೂ ಆಪ್ತಾಲೋಚನೆ ನಡಿಸಿದ್ದೇವೆ. ರಾಜನೀತಿ ವಿಶಾರದರಾದ ರಾಯಭಾರಿಗಳಲ್ಲೂ ಆಲೋಚಿಸಿದ್ದೇವೆ. ಈ ಪ್ರಶ್ನೆ ಕೆಳದಿಯ ರಾಜರ ಮನೆತನಕ್ಕೆ ಅಪೂರ್ವವಾದ ಧರ್ಮಸಂಕಟವನ್ನು ಮುಂದಿರಿಸಿದೆ. ರಾಜಾರಾಮನಿಗೆ ಆಶ್ರಯ ಕೊಡದಿದ್ದರೆ ನಾವು ರಾಜಧರ್ಮವನ್ನು ಕೈಬಿಟ್ಟಂತಾಗುತ್ತದೆ. ಹಾಗೂ ಹಿಂದೂ ಧರ್ಮವನ್ನು ಅವಮಾನಗೊಳಿಸದಂತಾಗುತ್ತದೆ. ಅತನಿಗೆ ಆಶ್ರಯವಿತ್ತರೆ ಬಲಶಾಲಿಗಳಾದ ಮೊಗಲರೊಡನೆ ಯುದ್ಧಮಾಡಬೇಕಾಗುತ್ತದೆ. ಪರಿಸ್ಥಿತಿ ಚಿತ್ರವನ್ನು ಮುಂದಿಟ್ಟಿದ್ದೇನೆ. ಏನಾದರೂ ರಾಜಾರಾಮನಿಗೆ ಆಶ್ರಯಕೊಡುವುದು ಅಗತ್ಯವೆಂದು ತೋರುತ್ತದೆ. ಈ ಬಗೆಗೆ ದಂಡ

ನಾಯಕರ ಮತ್ತು ಪ್ರಜಾಮುಖಂಡರ ಅಭಿಪ್ರಾಯವನ್ನು ತಿಳಿಯುವುದು ಅಗತ್ಯ.

ರಾಣಿ—(ದಂಡನಾಯಕ ಬಸವಯ್ಯನವರ ಕಡೆಗೆ ತಿರುಗಿ) ಸೈನ್ಯಾಧಿಪತಿಗಳೆ, ಕೆಳದಿ ರಾಜ್ಯದ ಕೀರ್ತಿಗೌರವಗಳನ್ನು ಪ್ರಶ್ನಿಸುವ ಈ ಅಪೂರ್ವ ಸಮಯದಲ್ಲಿ ತಮ್ಮ ಸಲಹೆ ನನಗೆ ಬೇಕಾಗಿದೆ. ಈಗ ನಾವು ಕೈಕೊಳ್ಳಬೇಕಾದ ಕಾರ್ಯದಲ್ಲಿ ತಮ್ಮ ಅಮೌಲ್ಯವಾನ ಸಲಹೆಯನ್ನು ನಿರೂಪಿಸಿರಿ.

ದಂಡನಾಯಕ ಬಸವಯ್ಯ—(ಎದ್ದುನಿಂತು ಮಹಾರಾಣಿಗೆ ಕೈಮುಗಿದು) ಅಮ್ಮಾ, ತಾವು ಅಪ್ಪಣೆಕೊಡಿಸಿರುವ ವಿಷಯವಾಗಿ ನಾನು ಕೂಡ ಕೂಲಂಕಷವಾಗಿ ವಿಚಾರ ಮಾಡಿದ್ದೇನೆ. ಮಂತ್ರಿಗಳಲ್ಲಿ ಆಪ್ತಾಲೋಚನೆ ನಡೆಸಿದ್ದೇನೆ. ಮುಂದಿನ ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ. ಕೆಳದಿಯ ರಾಜಮನೆತನವು ವೀರಧೀರರಿಂದ, ಧರ್ಮನಿಷ್ಠರಿಂದ ಪರಿಶೋಭಿಸಲ್ಪಟ್ಟಿದೆ. ನಮ್ಮ ರಾಜ್ಯಸಂಸ್ಥಾಪಕರಾದ ಚೌಡಪ್ಪನಾಯಕರು ಕಾರಣಪುರುಷರು. ಅನಂತರ ಈ ರಾಜ್ಯಸಿಂಹಾಸನವನ್ನು ಅಲಂಕರಿಸಿದ ಸದಾಶಿವನಾಯಕರು, ವೆಂಕಟಪ್ಪನಾಯಕರು ಮೊದಲಾದವರೆಲ್ಲರೂ ಮಹಾಪರಾಕ್ರಮಿಗಳು. ಚಕ್ರವರ್ತಿ ಸದೃಶರಾದ ಶಿವಪ್ಪನಾಯಕರು ನಮ್ಮ ರಾಜ್ಯದ ಕೀರ್ತಿಯನ್ನು ಬಹಳವಾಗಿ ಹೆಚ್ಚಿಸಿದ್ದಾರೆ. ಅವರ ಪರಾಕ್ರಮ, ಧರ್ಮ ಶ್ರದ್ಧೆಗಳೂ, ದೊಡ್ಡ ಸಂಕಣ್ಣನಾಯಕರ ಅತುಲ ಧೈರ್ಯ ಸಾಹಸಗಳೂ ಇಂದು ನಾಡಿನಲ್ಲಿ ಮನೆಯಮಾತಾಗಿವೆ. ತಮ್ಮವಲ್ಲಭರಾದ ಹಿರಿಯ ಸೋಮಶೇಖರ ರಾಯರು ಆಳಿದಷ್ಟು ಕಾಲ ಧರ್ಮದಿಂದಲೂ, ದರ್ಪದಿಂದಲೂ ರಾಜ್ಯಭಾರ ಮಾಡಿದ್ದಾರೆ. ಇಂತಹ ರಾಜಪರಂಪರೆಯಲ್ಲಿ ಬಂದಿರುವ ತಾವು ಕೆಳದಿಯ ರಾಜ್ಯಸಿಂಹಾಸನವನ್ನು ಇಂದು ಅಲಂಕರಿಸಿರುವಿರಿ. ರಾಜ್ಯವನ್ನು ಕಾಪಾಡುವಂತೆಯೇ ರಾಜ್ಯದ ಪರಂಪರಾಗತವಾದ ಕೀರ್ತಿಗೌರವಗಳನ್ನು ಕಾಪಾಡುವುದು ಕೂಡ ರಾಜಧರ್ಮವೆನಿಸಿದೆ. ನಾವು ಮೇಲಾಗಿ ಇತಿಹಾಸ ಪ್ರಸಿದ್ಧವಾದ ವಿಖ್ಯಾತ ವಿಜಯನಗರದ ರಾಜಪರಂಪರೆಗೆ ಸೇರಿದವರು. ಈ ವಿಷಯವನ್ನು ಪೂಜ್ಯರೂ, ಪಟ್ಟಾಭಿಷಕ್ತ ರಾಣಿಯವರೂ ಆದ ತಾವು ದೀರ್ಘವಾಗಿ ಆಲೋಚಿಸಿ ತೀರ್ಮಾನಕ್ಕೆ ಬರಬೇಕು.

ತಮ್ಮ ಅಪ್ಪಣೆಯಂತೆ ನಡೆಯುವವರು ನಾವು (ಎಂದು ರಾಣಿಗೆ ಕೈಮುಗಿದು ಪೀಠವನ್ನು ಅಲಂಕರಿಸುವನು).

ರಾಣಿ—ಈ ಮಹತ್ವದ ಸಂದರ್ಭದಲ್ಲಿ ಪುರ ಪ್ರಮುಖರೂ ರಾಜ್ಯ ಪ್ರಮುಖರೂ ನಮಗೆ ಯೋಗ್ಯವಾದ ಸಲಹೆಯನ್ನು ಮಾಡಬೇಕೆಂದು ಕೇಳ ಬಯಸುತ್ತೇವೆ. ಮುಂದಿನ ಸುಖದುಃಖಗಳು ರಾಜಪ್ರಜೆಗಳಿಬ್ಬರಿಗೂ ಸಮಾನವಾಗಿ ಹಂಚಿಗೆಯಾಗುತ್ತವೆ (ಎಂದು ಹೇಳಿ ಸಭೆಯ ಕಡೆಗೆ ಗಮನ ವೀಯುವಳು)

ಪ್ರಜಾಮುಖಂಡರು—(ಒಕ್ಕೊರಳಿನಿಂದ) ರಾಜ್ಯದ ಗೌರವವನ್ನು ಕಾಪಾಡುವ ವಿಷಯದಲ್ಲಿ, ರಾಜಾರಾಮನನ್ನು ಸಂರಕ್ಷಿಸುವ ವಿಷಯದಲ್ಲಿ, ಪೂಜ್ಯರಾಣಿಯವರ ಅಭಿಪ್ರಾಯವೇ ನಮ್ಮ ಅಭಿಪ್ರಾಯ. ಈ ಸಂದರ್ಭ ದಲ್ಲಿ ಅಧಿಕೃತವಾಗಿ ಮಾತನಾಡಲು ಶಕ್ತರು ಮಂತ್ರಿದಂಡನಾಯಕರು. ನಾವೆಲ್ಲರೂ ರಾಣಿಯ ಅಪ್ಪಣೆಯಂತೆ ನಡೆಯುತಕ್ಕವರು (ಎಂದು ಹೇಳಿ ಚೆನ್ನಮ್ಮಾಜಿಗೆ ಜಯವಾಗಲಿ, ಕೆಳದಿಯ ರಾಜ್ಯಕ್ಕೆ ಜಯವಾಗಲಿ ಎಂದು ಉದ್ಘೋಷಿಸುವರು.)

ರಾಣಿ—ಮಂತ್ರಿದಂಡನಾಯಕರೆ, ಪ್ರಜಾಮುಖಂಡರೆ, ಸಂದಿಗ್ಧ ವಾದ ಈ ಸಮಯದಲ್ಲಿ ತಾವು ನನಗೆ ಒಳ್ಳೆಯ ಸಲಹೆಯನ್ನಿತ್ತು ಮಾರ್ಗ ದರ್ಶನ ಮಾಡಿರುವಿರಿ. ಸತ್ಯದ ಬೆಳಕು ಇಂದು ನಮ್ಮ ಕಣ್ಣು ಮುಂದೆ ನಿಚ್ಚಳವಾಗಿ ಕಂಗೊಳಿಸುತ್ತಿದೆ. ಕೆಳದಿಯ ರಾಜರ ಉಜ್ವಲಧರ್ಮವು ನನ್ನ ಹೃದಯದಲ್ಲಿ ದಿವ್ಯಸ್ಫೂರ್ತಿಯನ್ನು ಕೊಡುತ್ತಿದೆ. ಪ್ರಜೆಗಳಾದ ತಮ್ಮಗಳ ಬೆಂಬಲ, ಮಂತ್ರಿದಂಡನಾಯಕರ ಸಮಯೋಚಿತ ಸಲಹೆ ಈ ಎಲ್ಲವೂ ನನ್ನ ಧೈರ್ಯವನ್ನು ಹೆಚ್ಚಿಸಿದೆ.

ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ರಾಜನಾಗಲಿ, ರಾಜ್ಯ ವಾಗಲಿ ಗಳಿಸುವ, ಉಳಿಸುವ ಕೀರ್ತಿಗೌರವಗಳೇ ಶಾಶ್ವತವಾದವು. ಮರೆಹೊಕ್ಕವರನ್ನು ಕಾಯುವುದು, ಯಾಚಿಸಿದವರ ಇಷ್ಟಾರ್ಥವನ್ನು ಕೊಡುವುದು, ಎದುರಿಸಿದವರನ್ನು ಇರಿಯುವುದು. ಇವು ರಾಜಧರ್ಮ ಗಳೆಂದು ಶಾಸ್ತ್ರಗಳಲ್ಲಿ ಹೇಳಿದೆ. ನಮ್ಮ ಹಿರಿಯರಾದ ಕೆಳದಿಯ ವೀರ

ಧೀರನಾಯಕರ ಪರಂಪರೆಯಲ್ಲಿ ಸಿಂಹಾಸನವನ್ನು ಹತ್ತಿದ ನಾನು ಈ ರಾಜಧರ್ಮವನ್ನು ಪಾಲಿಸಬೇಕಾದುದು ಅಗತ್ಯ ಮತ್ತು ಅನಿವಾರ್ಯ. ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ಧರ್ಮ ರಕ್ಷಣೆಗಾಗಿ, ಹಿಂದೂ ಸ್ತ್ರೀಯರ ಗೌರವಕ್ಕಾಗಿ, ಗೋ ಬ್ರಾಹ್ಮಣ ಸಂರಕ್ಷಣೆಗಾಗಿ, ಸಾಧುಸಂತರ ಪಾಲನೆಗಾಗಿ, ಅಪಾರವಾಗಿ ಶ್ರಮಿಸಿದ್ದಾರೆ. ಹಿಂದೂ ಧರ್ಮ ರಾಜ್ಯವನ್ನು ಮಹಾರಾಷ್ಟ್ರದಲ್ಲಿ ಸ್ಥಾಪಿಸಿದ್ದಾರೆ. ಅಂತಹವರ ಸುಪುತ್ರನನ್ನು ಕಷ್ಟಕಾಲದಲ್ಲಿ ಸಂರಕ್ಷಿಸುವುದು ವಿಜಯನಗರದ ಪರಂಪರೆಗೆ ಸೇರಿದ ನಮಗೆ ಅಗತ್ಯವಾದ ಕಾರ್ಯವೇ ಸರಿ. ಆದುದರಿಂದ ತಮ್ಮೆಲ್ಲರ ಬೆಂಬಲದಿಂದ ನಾನು ಇಂದು ರಾಜಾರಾಮರಿಗೆ ಅಭಯಪ್ರದಾನ ಮಾಡುತ್ತೇನೆ. ಕೆಳದಿಯ ರಾಮೇಶ್ವರನು, ಬಿದನೂರಿನ ನೀಲಕಂಠೇಶ್ವರನು, ಇಕ್ಕೇರಿಯ ಅಘೋರೇಶ್ವರನು ನಮ್ಮನ್ನೂ ನಮ್ಮ ರಾಜ್ಯವನ್ನೂ ಕಾಪಾಡಲಿ.

ದಂಡನಾಯಕ ಬಸವಯ್ಯ–(ಎದ್ದು ನಿಂತು ಖಡ್ಗಪಾಣಿಗಾಗಿ ಮಹಾರಾಣಿಗೆ ತಲೆಬಾಗಿ ಖಡ್ಗವನ್ನು ಸಿಂಹಾಸನದ ಮುಂದೆ ಝಳಪಿಸಿ)ಅಮ್ಮಾ ನಾನಿಂದು ತಮ್ಮ ಸನ್ನಿಧಾನದಲ್ಲಿ ಪ್ರತಿಜ್ಞೆ ಮಾಡುತ್ತೇನೆ. ದಕ್ಷಿಣ ಭಾರತವನ್ನು ಸೂರೆಗೊಳ್ಳಲು ಹಿಂದೂರಾಜ್ಯಗಳನ್ನು ಕಬಳಿಸಲು ಹುಲಿಯಂತೆ ಬಾಯ್ತೆರೆದುಕೊಂಡು ಬಾದಶಹ ಔರಂಗಜೇಬನು ವಿಪುಲವಾದ ಸೈನ್ಯದೊಡನೆ ಔರಂಗಾಬಾದಿನಲ್ಲಿ ಇಂದು ಬೀಡುಬಿಟ್ಟಿದ್ದಾನೆ. ರಾಜಾರಾಮನು ಅವನ ಪ್ರತಾಪಕ್ಕೆ ಹೆದರಿ ಈಗಾಗಲೇ ಕೆಳದಿಯ ರಾಜ್ಯದ ಎಲ್ಲೆಗೆ ತಲೆಮರೆಸಿಕೊಂಡು ಬಂದಿದ್ದಾನೆ. ಆತನನ್ನು ಜೋಪಾನವಾಗಿ, ಬರಮಾಡಿ ತಮ್ಮ ಪಾದ ಸನ್ನಿಧಿಗೆ ಒಪ್ಪಿಸುವಂತೆ ಚಾಣಾಕ್ಷರಾದ ಗೂಢಚಾರರನ್ನು ನಾನಲ್ಲಿಗೆ ಕಳುಹಿಸಿದ್ದೇನೆ. ಇಂದು ನಾಳೆ ರಾಜಾರಾಮನು ನಮ್ಮ ಬಿದನೂರಿಗೆ ಬರುತ್ತಾನೆ. ಔರಂಗಜೇಬನ ಪ್ರಚಂಡ ಸೈನ್ಯವನ್ನು ಎದುರಿಸುವ ಹೊಣೆಗಾರಿಕೆ ನನಗೆ ಬಿಡಿ. ಆದರೆ, ರಾಜಾರಾಮನನ್ನು ಬಹುಕಾಲ ನಮ್ಮ ರಾಜ್ಯದಲ್ಲಿ ಸಿಲ್ಲಿಸಿಕೊಳ್ಳುವುದು ಅಪಾಯ. ಆತನಿಗೆ ಅಭಯಪ್ರದಾನ ಮಾಡಿ, ಪ್ರಾಣಸಂರಕ್ಷಣೆಮಾಡಿ ಶತ್ರುಗಳ ಕೈಗೆ ಸಿಕ್ಕದಂತೆ ಆತನ ಬಂಧುಗಳಿರುವ ತಂಜಾವೂರಿಗೆ ಕಳುಹಿಸತಕ್ಕುದು ಒಳ್ಳೆಯದಾರಿ. ಇದ

ರಿಂದ ನಮ್ಮ ಗೌರವ ಮತ್ತು ಆವನ ಪ್ರಾಣ ಎರಡೂ ಉಳಿಯುತ್ತವೆ. ಇತಿಹಾಸದಲ್ಲಿ ತಮಗೆ ಉನ್ನತಕೀರ್ತಿ ಪ್ರಾಪ್ತವಾಗುತ್ತದೆ. ನಾನೀಗಲೇ ಉತ್ತರದಗಡಿಗಳಲ್ಲಿ ಮೊಗಲರ ಸೈನ್ಯವನ್ನು ತಡೆದು ನಿಲ್ಲಿಸಲು ನಮ್ಮ ಸೈನ್ಯವನ್ನು ಸಜ್ಜುಗೊಳಿಸುತ್ತೇನೆ. ರಾಜ್ಯದಲ್ಲೆಲ್ಲಾ ಇದು ವಿಶೇಷ ಸಂದರ್ಭವೆಂಬುದನ್ನು ನಾವು ಡಂಗೂರ ಸಾರಿ ತಿಳಿಸಬೇಕು. ಧರ್ಮವು ನಮ್ಮ ಕಡೆಗೆ ಇದೆ. ಜಯವು ನಮಗೆ ಸಿದ್ಧಾಂತ. ಜೈ ಭವನೇಶ್ವರಿ, ಜೈ ರಾಮೇಶ್ವರ (ಎಂದು ಉದ್ಘೋಷಿಸುವನು)

ರಾಣಿ– ದಂಡನಾಯಕರ ಈ ಗರ್ಜನೆಯು ಅವರ ಪರಾಕ್ರಮಕ್ಕೂ, ಕೆಳದಿಯ ರಾಜ ಗೌರವಕ್ಕೂ ಅರ್ಹವಾಗಿದೆ. ಅವರ ಅಭಿಪ್ರಾಯಕ್ಕೆ ನಮ್ಮ ಸಂಪೂರ್ಣವಾದ ಒಪ್ಪಿಗೆಯಿದೆ. ಇಂದಿನ ಸಭೆ ಈಗ ಮುಗಿಯಲಿ (ಎಂದು ಸಿಂಹಾಸನವನ್ನು ಬಿಟ್ಟು ಏಳುವಳು)

ರಾಣಿಚೆನ್ನಮ್ಮಾಜಿಗೆ ಜಯವಾಗಲಿ, ಬಿದನೂರು ರಾಜ್ಯಕ್ಕೆ ಜಯವಾಗಲಿ-ಎಂಬ ಘೋಷಣೆಯೊಡನೆ ಸಭಿಕರು ತಮ್ಮ ತಮ್ಮ ಮನೆಗಳಿಗೆ ತೆರಳುವರು. ಅಂದಿನ ರಾತ್ರಿ ಊರಿನಲ್ಲೆಲ್ಲಾ ಈ ರಾಜಸಭೆಯ ಸುದ್ದಿಯೇ ಸುದ್ದಿ, ಚೆನ್ನಮ್ಮರಾಣಿಯ ಗುಣಗಾನವೇ ಗಾನ, ಮಂತ್ರಿದಂಡನಾಯಕರ ವೀರವಾಣಿಗಳೇ ವಾಣಿ–ಹೀಗಾಗಿ ಬಿದನೂರಿನಲ್ಲಿ ಈ ರಾಜಸಭೆಯ ಸಂದೇಶವು ರಾಜ್ಯದ ಪ್ರಜೆಗಳ ಧೈರ್ಯಸ್ಥೈರ್ಯಗಳನ್ನು ಹೆಚ್ಚಿಸಿತು. ಪ್ರಜೆಗಳ ದೇಶಾಭಿಮಾನವನ್ನು ಉಕ್ಕೇರಿಸಿತು.

೭. ಮಹಾರಾಣಿಯ ಶುಭಸ್ವಪ್ನ

ಲೋಕಬಾಂಧವನು ಅಸ್ತಂಗತನಾದಮೇಲೆ ಅಂಧಕಾರವು ವಿಶ್ವವನ್ನು ಆವರಿಸುವುದು ಸಹಜವಾಗಿಯೇ ಇದೆ. ಬೆಳಕಿಲ್ಲದ ಕಡೆ ಕತ್ತಲೆಯಲ್ಲದೆ ಇನ್ನೇನು ತಾನೇ ಇದ್ದೀತು? ವಿಶ್ವವು ಅಂದಿನ ರಾತ್ರಿ ಪ್ರಶಾಂತವಾದ ಸಂದೇಶವನ್ನು ಸಾರುತ್ತಿದೆ. ನಕ್ಷತ್ರಗಳು ವಿಶ್ವದ ಚಂಚಲವೃತ್ತಿಯನ್ನು ನೋಡಿ ಗಹಗಹಿಸಿ ನಗುತ್ತಿವೆಯೋ ಎಂಬಂತೆ ಆಕಾಶದಲ್ಲಿ ಹಸನ್ಮುಖದಿಂದ ಮಿಣುಗುತ್ತಿವೆ. ನೀಲವರ್ಣದ ಆಕಾಶದಲ್ಲಿ ಆಗತಾನೇ ಚಂದ್ರಮನು ಕಾಣಿಸಿಕೊಂಡಿದ್ದಾನೆ. ಬೆಳುದಿಂಗಳು ಮೆಲ್ಲ ಮೆಲ್ಲನೆ ಬಂದು ಆವರಿಸಿದ್ದ ಕತ್ತಲೆಯನ್ನು ಹಿಮ್ಮೆಟ್ಟಿಸುತ್ತಿದೆ ಶೈತ್ಯ, ಸೌರಭ್ಯ, ಮಾಂದ್ಯ ಎಂಬ ಗುಣತ್ರಯಗಳಿಂದ ಕೂಡಿದ ಗಾಳಿಯು ಮೆಲ್ಲಮೆಲ್ಲನೆ ಬೀಸುತ್ತಿದೆ. ಅಂದು ಬಿದನೂರು ರಾಜಧಾನಿಯಲ್ಲಿಯೂ ಈ ಪ್ರಶಾಂತವಾದ ಪರಿಸ್ಥಿತಿಯೇ ಕಾಣಬರುತ್ತಿದೆ.

ಊರಿನ ಮಧ್ಯದಲ್ಲಿ ಎತ್ತರವಾದ ಮೊರಡಿಯ ಮೇಲೆ ಸುಭದ್ರವಾದ ಕೋಟೆಯಿಂದ ರಕ್ಷಿಸಲ್ಪಟ್ಟಿರುವ ಆ ಅರಮನೆಯಲ್ಲಿ ಹೊಳೆಯುವ ದೀಪಗಳು ಕಾಣಬರುತ್ತಿಲ್ಲ. ಸಜ್ಜೆ ಮನೆಯ ಕಿರು ದೀಪಗಳ ಪ್ರಕಾಶ ಮಾತ್ರ ಬೆಳುದಿಂಗಳಲ್ಲಿ ಕಾಣಬರುತ್ತಿದೆ. ರಾಣಿಚೆನ್ನಮ್ಮಾಜಿಯು ಅಂದು ಸ್ನಾನ ಶಿವಾರ್ಚನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಹಂಸತೂಲಿಕಾತಲ್ಪದಲ್ಲಿ ಮಲಗಿದ್ದಾಳೆ. ಮಲಗುವಾಗ ಕೆಳದಿಯ ರಾಮೇಶ್ವರ, ಇಕ್ಕೇರಿಯ ಅಘೋರೇಶ್ವರ, ಬಿದನೂರು ನೀಲಕಠೇಶ್ವರ ಎಂಬ ಮನೆದೇವತೆಗಳ ಹೆಸರನ್ನು ಸ್ಮರಿಸಿಕೊಂಡು ಮಲಗಿದ್ದಾಳೆ. ಅಂದಿನ ವಾತಾವರಣವು ಸುಖಮಯವಾಗಿ ಇದ್ದುದರಿಂದ ಆಕೆಗೆ ಸುಖನಿದ್ರೆ ಸಹಜವಾಗಿ ಬರಬೇಕಾಗಿದ್ದಿತು. ಆದರೆ ರಾಜ್ಯದ ಭಾರವನ್ನು ಹೊತ್ತಿರುವ, ಮರೆಹೊಕ್ಕ ರಾಜಾರಾಮನನ್ನು ಸಂರಕ್ಷಿಸಲು ಸಂಕಲ್ಪಿಸಿರುವ ಪರಿಣಾಮವಾಗಿ ದಿಲ್ಲಿಯ ಚಕ್ರವರ್ತಿ ಔರಂಗಜೇಬನ ಮಹಾಸೈನ್ಯದೊಡನೆ ಸೆಣಸಬೇಕಾಗಿರುವ ಪ್ರಸಂಗಗಳು ಅವಳ ಹೃದಯಪಥದ ಮೇಲೆ ಚಲನಚಿತ್ರದಂತೆ ಒಂದಾದ

ನೋಡಿಕೊಂಡು ಬರುತ್ತಿವೆ. ಇದರ ಫಲವಾಗಿ ರಾಣಿಗೆ ಬಹಳಹೊತ್ತು ನಿದ್ದೆ ಹತ್ತಲಿಲ್ಲ. ಮುಂದಿನ ದುರಂತಗಳಲ್ಲಿ ಪಾರಾಗುವುದು ಹೇಗೆ ಎಂದು ಯೋಚಿಸುತ್ತಿದ್ದಾಳೆ. ಅವಳ ತಲೆಯು ಚಿಂತೆಯಿಂದ ಕಾದುಹೋಗಿದೆ. ಕರ್ತವ್ಯನಿಷ್ಠೆಯ ಮುಂದೆ ಸುಖಸಂಪತ್ತುಗಳು ಕಃ ಪದಾರ್ಥವೆಂದು ಆ ವೀರರಾಣಿ ಭಾವಿಸಿದ್ದಾಳೆ. ಆ ದ್ದ ರಿಂ ದ ಲೇ ಹಂಸತೂಲಿಕಾತಲ್ಪದಲ್ಲಿ ಮಲಗಿದ್ದರೂ ಅವಳು ಅಂದು ಶಿವರಾತ್ರಿಯ ಜಾಗರಣೆಯನ್ನು ಅನು ಭವಿಸುತ್ತಿದಾಳೆ. ಕರ್ತವ್ಯನಿಷ್ಠರಿಗೆ ಸುಖನಿದ್ರೆಯೆಲ್ಲಿ ?

ಪ್ರಕೃತಿಯು ಅಪಾರವಾದ ಶಕ್ತಿಸಂಪತ್ತಿನಿಂದ ಕೂಡಿದುದು. ಅಂದಿನ ರಾತ್ರಿ ಬೆಳುದಿಂಗಳು ಕಪ್ರುಕ್ರಮವಾಗಿ ಪಸರಿಸುತ್ತಿದೆ. ರಾತ್ರಿಯ ಶೋಭೆ ಯನ್ನು ಹೆಚ್ಚಿಸಿದೆ. ಮಂದಮಾರುತವು ಎಂತಹ ದಣಿವನ್ನಾದರೂ ಆರಿಸಲು ಸಂಕಲ್ಪಮಾಡಿ ಮೆಲ್ಲಮೆಲ್ಲನೆ ಬೀಸುತ್ತಿದೆ. ಮೇಲಾಗಿ ಪ್ರಾಣಿಸಹಜವಾದ ನಿದ್ರೆಯು ರಾಣಿಯನ್ನು ಆವರಿಸುತ್ತದೆ. ಅದರಲ್ಲಿ ಸುಸ್ವಪ್ನ ಕಾಣುತ್ತಾಳೆ.

“ರಾಣಿಯು ಭುವನಗಿರಿದುರ್ಗದಲ್ಲಿ ತಂಗಿದ್ದಂತೆ, ಪತಿ ಸೋಮಶೇಖರ ಭೂಪಾಲನು ಅವಳ ಪಕ್ಕದಲ್ಲಿ ಕುಳಿತಿದ್ದಂತೆ, ಕೆಳದಿಯ ಕೀರ್ತಿವಂತ ನಾಯಕರು ಚೌಡಪ್ಪ, ಭದ್ರಪ್ಪ, ಸದಾಶಿವ, ವೆಂಕಟಪ್ಪ, ಸಂಕಣ್ಣ, ಶಿವಪ್ಪ ಮೊದಲಾದ ನಾಯಕ ಶ್ರೇಷ್ಠರ ಭಾವಚಿತ್ರಗಳು ಭುವನಗಿರಿ ಅರಮನೆಯಲ್ಲಿ ಕಂಗೊಳಿಸಿದಂತೆ ಜಟಾಮುಕುಟ ರಾಜಿತರಾಗಿ ಕಾವಿಕಾಷಾಯಾಂಬರ ವಿಭೂಷಿತರಾದ ಜಂಗಮಶ್ರೇಷ್ಠರೊಬ್ಬರು ಬಂದು ಈ ರಾಜದಂಪತಿಗಳನ್ನು ಆಶೀರ್ವದಿಸಿದಂತೆ ರಾಷ್ಟ್ರಮಾತೆಯಾದ ಭುವನೇಶ್ವರಿಯು ಪ್ರತ್ಯಕ್ಷಳಾಗಿ ಬಂದು ರಾಣಿಯ ಹಣೆಗೆ ಕುಂಕುಮವಿಟ್ಟು ಆಶೀರ್ವದಿಸಿದಂತೆ ಭಾಸವಾ ಯಿತು. ಅಲ್ಲಿಂದ ಮುಂದೆ ರಾಣಿಯು ಸೋಮಶೇಖರ ರಾಜನೊಡನೆ ಕುಲದೇವತೆಯಾದ ಅಘೋರೇಶ್ವರನ ಸಂದರ್ಶನಕ್ಕೆ ಹೋದಂತೆ ಮಧ್ಯದಲ್ಲಿ ಸಿಕ್ಕಿದ ವರದಾನದಿಯನ್ನು ರಾಜದಂಪತಿಗಳು ನಾವೆಯ ಸಹಾಯವಿಲ್ಲದೆ, ಸರಳವಾಗಿ ನೆಲದಮೇಲೆ ನಡೆದು ದಾಟಿದಂತೆ ಭಾಸವಾಗುತ್ತದೆ. ಇವೆಲ್ಲವೂ ಆದಮೇಲೆ ರಾಜ ರಾಣಿಯರು ಕೆಳದಿಯ ರಾಮೇಶ್ವರ ಮತ್ತು ವೀರಭದ್ರದೇವರ .ದೇವಾಲಯಗಳಿಗೆ ಹೋಗಿ ಭಕ್ತಿಪೂಜೆಯನ್ನು ಸಲ್ಲಿಸಿ

ದಂತೆ ಅಲ್ಲಿ ಆ ಕುಲದೇವತೆಯು ಪ್ರಸನ್ನಳಾಗಿ ವರವನ್ನು ಕೊಟ್ಟಂತೆ ಭಾಸವಾಗುತ್ತದೆ. ಅಲ್ಲದೆ, ರಾಣಿಯು ದೇವಾಲಯಕ್ಕೆ ಹೋಗಿ ಬರುವಾಗ ಆನೆಗಳೂ, ಕುದುರೆಗಳೂ ರಾಣಿಯನ್ನು ಸ್ವಾಗತಿಸಿದಂತೆ ಭಾಸವಾಗುತ್ತದೆ. ಹೀಗೆ ಸುಖಸ್ವಪ್ನವನ್ನು ಕಂಡ ರಾಣಿ ಚೆನ್ನಮ್ಮಾಜಿಯು ಬೆಳಗಿನ ಜಾವದ ಮಂಗಳವಾದ್ಯಗಳಂತೆ ಕೇಳಿಬರುತ್ತಿರುವ ಕೋಳಿಗಳ ಕೊಕ್ಕೋ ಎಂಬ ಕೂಗನ್ನು ಆಲಿಸಿ ಎಚ್ಚರವಾಗುತ್ತಾಳೆ. ಕುಲದೇವತೆಯ ನಾಮಸ್ಮರಣೆಯೊಡನೆ ಮಂಚದ ಮೇಲೆ ಎದ್ದು ಕುಳಿತುಕೊಳ್ಳುತ್ತಾಳೆ. ತಾನು ಕಂಡ ಶುಭಸ್ವಪ್ನವನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾಳೆ. ಇದರಲ್ಲಿ ಏನೋ ಒಂದು ಶುಭೋದಯವಿರಬೇಕೆಂದು ಭಾವಿಸುತ್ತಾಳೆ.

ತನ್ನ ಕುಲಧರ್ಮಕ್ಕೆ ಅನುಗುಣವಾಗಿ ಬೆಳಗಿನ ಪೂಜಾದಿ ಕರ್ಮಗಳನ್ನು ಮುಗಿಸಿಕೊಂಡು ಶ್ರೀ ನೀಲಕಂಠೇಶ್ವರನ ದೇವಾಲಯಕ್ಕೆ ಹೋಗಿ ಸ್ವಾಮಿಯ ಸಂದರ್ಶನವನ್ನು ಪಡೆದು ಅರ್ಚಕರಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಅರಮನೆಗೆ ಬಂದು ಅತಿ ಕುತೂಹಲದಿಂದ ಅರಮನೆಯ ಜೋಯಿಸರನ್ನು ಬರಮಾಡುತ್ತಾಳೆ. ಅದರ ಮುಂದೆ ತಾನು ಕಂಡ ಸ್ವಪ್ನವೃತ್ತಾಂತವನ್ನು ವಿವರವಾಗಿ ನಿರೂಪಿಸುತ್ತಾಳೆ. ಇದನ್ನೆಲ್ಲಾ ಕೇಳಿದ ಜ್ಯೋತಿಷ್ಕರು "ಅಮ್ಮಾ, ಇದು ನಿಮಗೆ ಶುಭ ಸೂಚನೆ, ವಿಜಯ ಸೂಚನೆ. ರಾಜ್ಯಕ್ಕೆ ಮಂಗಳದಾಯಕ. ಈ ಸ್ವಪ್ನದ ಫಲವು ಕೆಳದಿಯ ರಾಜ್ಯಕ್ಕೆ ಅತ್ಯಂತ ಉತ್ತಮವಾದ ಫಲವನ್ನು ಕೊಡುತ್ತದೆ. ತಮ್ಮ ಕೀರ್ತಿ ಚರಿತ್ರೆಯಲ್ಲಿ ನಿಲ್ಲುವ ಶ್ರೇಷ್ಠ ಘಟನಾವಳಿಯನ್ನು ಕೊಡುತ್ತದೆ. ಇದರಿಂದ ನಿಮ್ಮ ಆಳ್ವಿಕೆಯು ಆ ಚಂದ್ರಾರ್ಕವೆನಿಸುತ್ತದೆ. ಇಂದಿನ ಸ್ವಪ್ನವೃತ್ತಾಂತದಂತೆ ನಿಮಗೆ ದೇವರ ಗುರುಗಳ ಹಿರಿಯರ ಆಶೀರ್ವಾದ ಇದೆಯೆಂಬುದು ಸಿದ್ಧವಾಗುತ್ತದೆ. ತಾವು ಹಿಡಿದ ಕಾರ್ಯದಲ್ಲಿ ದೈವದಬಲವಿದೆ, ವಿಜಯವಿದೆ ಎಂಬುದು ಕಂಡು ಬರುತ್ತದೆ. ಇದು ಭಾಗ್ಯಶಾಲಿಗಳಿಗೆ ಮಾತ್ರ ಬೀಳುವ ಸ್ವಪ್ನ. ಮೇಲಾಗಿ ಇದು ಬೆಳಗಿನ ಜಾವದ ಸ್ವಪ್ನವಾದುದರಿಂದ ನಿಮಗೆ ಪೂರ್ಣವಾದ ಫಲವನ್ನು ಕೊಡುತ್ತದೆ. ದೇವರು ನಿಮಗೆ ಮಂಗಳವನ್ನು ಉಂಟು ಮಾಡಲಿ" ಎಂದು ತಲೆಬಾಗಿ ರಾಣಿಯ ಮುಂದೆ ನಿಲ್ಲುತ್ತಾರೆ. ಜೋಯಿ

ಸರ ಶುಭಸಂದೇಶವನ್ನು ಕೇಳಿ ರಾಣಿಯು ಸ್ಫೂರ್ತಿಗೊಳ್ಳುತ್ತಾಳೆ. ಧರ್ಮದ ಬಲ ತನಗೆ ಉಂಟೆಂದು ನಂಬಿಕೊಳ್ಳುತ್ತಾಳೆ. ಮರೆಹೊಕ್ಕ ರಾಜಾರಾಮ ರನ್ನು ಸಂರಕ್ಷಿಸಲು, ತಾನು ಮಾಡಿದ ಸತ್ಸಂಕಲ್ಪಕ್ಕೆ ಕಡೆಯಲ್ಲಿ ವಿಜಯ ಪ್ರಾಪ್ತಿಯಾಗುವುದೆಂದು ಆಶಿಸುತ್ತಾಳೆ. ಜೋಯಿಸರಿಗೆ ಯಥೋಚಿತ ಸಂಭಾವನೆಯನ್ನು ಕೊಟ್ಟು ಸಂತೋಷದಿಂದ ಅವರನ್ನು ಮನೆಗೆ ಕಳುಹಿಸಿ ಕೊಡುತ್ತಾಳೆ.

ರಾಣಿ ಚೆನ್ನಮ್ಮಾಜಿಯು 'ಸ್ವಪ್ನ ವೃತ್ತಾಂತ ಭವಿಷ್ಯ ಕಥನದಿಂದ' ಹರ್ಷಿತಳಾಗಿ ಅರಮನೆಯ ಮಂತ್ರಾಲೋಚನಾ ಮಂದಿರಕ್ಕೆ ಬರುತ್ತಾಳೆ. ಅಲ್ಲಿ ಮುಂದಿನ ಆಗುಹೋಗುಗಳನ್ನು ಆಲೋಚಿಸುತ್ತಾ ಕುಳಿತಿರುತ್ತಾಳೆ. ಅಷ್ಟು ಹೊತ್ತಿಗೆ ಕೆಳದಿಯ ರಾಜ್ಯದ ಗೂಢಚಾರದಿಂದ ಸಂರಕ್ಷಿಸಲ್ಪಟ್ಟವ ನಾಗಿ, ದಂಡನಾಯಕ ಬಸವಯ್ಯ ನಿರೂಪದಂತೆ, ಛತ್ರಪತಿ ಶಿವಾಜಿಯ ಎರ ಡನೆಯ ಮಗನಾದ ರಾಜಾರಾಮನು ಭಯಕಂಪಿತನಾಗಿ ಬಂದು ರಾಣಿ ಚೆನ್ನಮ್ಮಾಜಿಗೆ ತಲೆಬಾಗಿ ಕೈಮುಗಿದು ವಂದಿಸುತ್ತಾನೆ.

ರಾಣಿ—ರಾಜಭಟರೆ, ಈ ಮಹಾಪುರುಷನಾರು? ಈತನ ಮುಖ ಮುದ್ರೆಯನ್ನು ನೋಡಿದರೆ, ರಾಜಲಕ್ಷಣಗಳಿಂದ ಪರಿಶೋಭಿತನಾಗಿರುವನು. ಈತನ ದೇಹವು ಕಂಪಿಸುತ್ತಿರುವುದು. ತರುಣ ವಯಸ್ಕನಾದರೂ ಕಂದಿದ ಮುಖಮುದ್ರೆಯುಳ್ಳವನಾಗಿರುವನು. ಈತನ ಈ ಪರಿಸ್ಥಿತಿಗೆ ಕಾರಣವೇನು?

ರಾಜಭಟರು—ಅಮ್ಮಾ, ಈತನೇ ಛತ್ರಪತಿ ಶಿವಾಜಿ ಮಹಾರಾಜರ ದ್ವಿತೀಯ ಪುತ್ರನಾದ ರಾಜಾರಾಮನು. ಈತನ ಅಣ್ಣನಾದ ಸಾಂಬಾಜಿ ಯನ್ನು ಔರಂಗಜೇಬನು ಮೋಸದಿಂದ ಹಿಡಿತರಿಸಿ ದಿಲ್ಲಿಯಲ್ಲಿ ಕೊಲ್ಲಿಸಿದನು. ಈತನು ಅದು ಹೇಗೋ ತಲೆಯನ್ನು ತಪ್ಪಿಸಿಕೊಂಡು ಪ್ರಾಣರಕ್ಷಣೆಗಾಗಿ ತಮ್ಮಲ್ಲಿಗೆ ಬಂದಿರುವನು. ಔರಂಗಜೇಬನು ಈತನನ್ನು ಹುಡುಕಲು ಸೈನ್ಯ ವನ್ನು ಕಳಿಸಿರುವನು. ದಂಡನಾಯಕ ಬಸವಯ್ಯನವರ ಅಪ್ಪಣೆಯಂತೆ ಈತನನ್ನು ತಮ್ಮ ಸನ್ನಿಧಾನಕ್ಕೆ ಅತಿಜಾಗರೂಕತೆಯಿಂದ ತಂದಿರುವೆವು. ಮುಂದಿನ ವಿವರಗಳಿಗೆ ಅಪ್ಪಣೆಯಾಗಬೇಕು. (ಎಂದು ಕೈಮುಗಿದು ತಲೆ ಬಾಗಿ ನಿಲ್ಲುವರು).

ರಾಣಿ—ಛತ್ರಪತಿಯ ಸುಪುತ್ರರಾದ ರಾಜಾರಾಮರೆ, ಕೆಳದಿಯ ಸಿಂಹಾಸನವನ್ನು ಮರೆಹೊಕ್ಕ ನೀವು ಅಂಜಬೇಕಾಗಿಲ್ಲ. ನಿಮ್ಮನ್ನು ಸಂರಕ್ಷಿಸುವ ಭಾರ ನಮ್ಮದು. ಶಿವನತಲೆಯಲ್ಲಿರುವ ಸರ್ಪವು, ವಿಷ್ಣುವಿನ ವಾಹನವಾದ ಗರುಡನು ಮುಂದೆ ಬಂದರೂ ಹೆದರುವುದಿಲ್ಲ ಎಂಬುದನ್ನು ನೀವು ಕೇಳಿರುವಿರಷ್ಟೆ. ಅಂತೆಯೇ ಶಿವಭಕ್ತರಾದ ಕೆಳದಿಯ ರಾಜರ ಸಂರಕ್ಷಣೆಗೆ ಒಳಪಟ್ಟ ಜನ ಎಂದಿಗೂ, ಎಂತಹ ಶತ್ರುವಿಗಾದರೂ ಹೆದರಬೇಕಾಗಿಲ್ಲ. ನೀವು ಮಾರ್ಗಾಯಾಸದಿಂದ ಬಹಳವಾಗಿ ಶ್ರಮಿಸಿದ್ದೀರಿ. ಪ್ರಬಲ ಶತ್ರುವಿಗಾಗಿ ಬಹಳವಾಗಿ ಭಯಪಟ್ಟಿದ್ದೀರಿ. ಈಗ ನೀವು ಸಮಾಧಾನಗೊಳ್ಳಿರಿ, ಅರಮನೆಯ ದಾಸೋಹದಲ್ಲಿ ಹೋಗಿ ಸುಖವಾಗಿ ಭೋಜನ ಮಾಡಿ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳಿ. ಇಂದಿನ ಸಂಜೆಯ ರಾಜಸಭೆಯಲ್ಲಿ ಮಂತ್ರಿ ದಂಡನಾಯಕರನ್ನು ಬರಮಾಡಿಕೊಂಡು ತಮ್ಮ ಸಂರಕ್ಷಣೆಯ ಬಗ್ಗೆ ಮುಂದಿನ ಏರ್ಪಾಡನ್ನು ನಡೆಯಿಸುತ್ತೇನೆ.

ರಾಜಾರಾಮ— ಅಮ್ಮಾ, ನಿಮ್ಮ ನಿರ್ಮಲವಾದ ಕೀರ್ತಿಯನ್ನು ನಾನು ಬಹಳವಾಗಿ ಕೇಳಿದ್ದೇನೆ. ಕೆಳದಿಯ ರಾಜರ ಧೀರವೀರ ಪರಾಕ್ರಮಗಳನ್ನು ಮೇಲಿಂದಮೇಲೆ ಕೇಳಿದ್ದೇನೆ. ವಿಜಯನಗರದ ಪರಂಪರೆಗೆ ಸೇರಿದ ನಿಮಗೆ ಇಂತಹ ಉದಾತ್ತವರ್ತನೆಯು ಸಹಜವಾದುದೇ ಸರಿ. ಅತ್ಯಂತ ಸಂಕಟದಲ್ಲಿ ಸಿಕ್ಕಿಕೊಂಡಿರುವ ನನಗೆ, ಪ್ರಬಲವಾದ ಶತ್ರುವಿಗೆ ಹೆದರಿ ಬಂದಿರುವ ನನಗೆ ಇಂದು ತಾವು ಕೊಟ್ಟ ಆಶ್ರಯವು ಶ್ಲಾಘ್ಯವಾದುದೇ ಸರಿ. ನಿಮ್ಮ ಸಂದರ್ಶನದಿಂದ ನಾನು ಮತ್ತೆ ನನ್ನ ಹೆತ್ತ ತಾಯಿಯನ್ನು ಕಂಡಂತಾಯಿತು. ತೇಜಃಪುಂಜವಾದ ತಮ್ಮ ವ್ಯಕ್ತಿತ್ವವು ನನ್ನ ಕಣ್ಣಿಗೆ ತುಳಜಾಪುರದ ಭವಾನಿಯಂತೆ, ಕೊಲ್ಲಾಪುರದ ಲಕ್ಷ್ಮಿಯಂತೆ ಕಂಗೊಳಿಸುತ್ತಿದೆ. ನಿಮ್ಮ ಉಪಕಾರಕ್ಕೆ ನಾನು ಕೃತಜ್ಞನಾಗಿದ್ದೇನೆ. ನಾನೂ, ನನ್ನ ವಂಶಜರೂ ನಿಮ್ಮ ಸಿಂಹಾಸನಕ್ಕೆ ಸದಾಕೃತಜ್ಞರಾಗಿರುತ್ತೇವೆ. ನನ್ನನ್ನು ಸರ್ವವಿಧದಿಂದಲೂ ಕಾಪಾಡುವ ಭಾರ ತಮ್ಮದಾಗಿದೆ. (ಎಂದು ಹೇಳಿ ಕೈಮುಗಿದು ನಿಲ್ಲುವನು) ರಾಣಿಯು ಮತ್ತೆ ಮತ್ತೆ ರಾಜಾರಾಮನಿಗೆ ಧೈರ್ಯವನ್ನು ಹೇಳಿ ರಾಜಾರಾಮನನ್ನು ಅರಮನೆಯ ದಾಸೋಹ

ದಲ್ಲಿ ಊಟಉಪಚಾರಗಳನ್ನು ಮುಗಿಸಿಕೊಂಡು ವಿಶ್ರಾಂತಿ ಪಡೆಯಲು ಹೇಳುವಳು. ರಾಜದೂತರು ರಾಜಾರಾಮನನ್ನು ಅತಿಥಿಗೃಹಕ್ಕೆ ಕರತರುವರು. ಅಲ್ಲಿ ರಾಜೋಚಿತ ಉಪಚಾರವು ಅವನಿಗೆ ಆಗುವುದು. ರಾಜಾರಾಮನು ಧೈರ್ಯವನ್ನು ತಂದುಕೊಂಡು ಅರಮನೆಯ ಅತಿಥಿ ಗೃಹದಲ್ಲಿ ವಿಶ್ರಾಂತಿಯನ್ನು ಪಡೆಯುವನು. ಭಗವಂತನ ಕೃಪೆಗೆ ಅಚ್ಚರಿಪಡುವನು.

ಅಂದಿನ ಸಂಜೆ ಬಿದನೂರಿನ ಅರಮನೆಯಲ್ಲಿ ರಾಣಿಯು ಸನ್ನಿಧಾನದಲ್ಲಿ ಗುಪ್ತಾಲೋಚನಾಸಭೆ ನಡೆಯಿತು. ಆಶ್ರಯಕ್ಕೆ ಬಂದ ರಾಜಾರಾಮನನ್ನು ಸಂರಕ್ಷಿಸುವುದು, ಔರಂಗಜೇಬನ ಸೈನ್ಯಕ್ಕೆ ಎದುರಾಗುವುದು ಎಂಬ ಎರಡು ವಿಷಯಗಳು ಕೂಲಂಕಷವಾಗಿ ಚರ್ಚಿಸಲ್ಪಟ್ಟವು. ಆಶ್ರಿತ ರಕ್ಷಣೆಯೊಡನೆ ಆತ್ಮಸಂರಕ್ಷಣೆಯು ಆಗತ್ಯವೆಂದೂ ಶತ್ರುವು ಪ್ರಬಲನಾಗಿರುವುದರಿಂದ ಆಶ್ರಿತನನ್ನು ಹೆಚ್ಚುಕಾಲ ಇಲ್ಲಿ ಇರಿಸಿಕೊಳ್ಳುವುದು ಉಭಯರಿಗೂ ಅಪಾಯವೆಂದೂ ಸಭೆಯಲ್ಲಿ ತೀರ್ಮಾನವಾಯಿತು. ಅಂದಿನ ಸಭೆಯಲ್ಲಿ ಮಂತ್ರಿಸುಬ್ಬನೀಸ, ಮಂತ್ರಿಬೊಮ್ಮಯ್ಯ, ದಂಡನಾಯಕ ಬಸವಯ್ಯ ಮೊದಲಾದವರೂ ರಾಜ್ಯಪ್ರಮುಖರೂ ಸೇರಿದ್ದರು. ರಾಜಾರಾಮನನ್ನು ಆಲೋಚನಾ ಸಭೆಗೆ ಬರಮಾಡಿ ಆತನ ಹಿತದೃಷ್ಟಿಯಿಂದಲೇ ಅವನು ವೇಷಾಂತರದಿಂದ ಕೆಳದಿರಾಜ್ಯಕ್ಕೆ ಸೇರಿದ ಕಳಸ, ಖಾಂಡ್ಯ ಮೊದಲಾದ ಪ್ರಾಂತಗಳ ಮಾರ್ಗವಾಗಿ ತಂಜಾವೂರಿಗೆ ಹೋಗಿ ಅಲ್ಲಿ ಆತನ ಬಂಧುಗಳನ್ನು ಕೂಡಿಕೊಂಡು ಆತ್ಮರಕ್ಷಣೆಮಾಡಿಕೊಳ್ಳುವುದು ಅಗತ್ಯವೆಂದು ನಿರೂಪಿಸಲಾಯಿತು. ರಾಜಾರಾಮನು ಅದಕ್ಕೆ ಸಂತೋಷದಿಂದ ಒಪ್ಪಿದನು. ಅರಮನೆಯಲ್ಲಿ ಅವನ ಮರಾಠಿ ಪೋಷಾಕುಗಳನ್ನು ತೆಗೆಸಿ ಕನ್ನಡ ಜನರ ಉಡುಪುಗಳನ್ನು ಕೊಡಿಸಲಾಯಿತು. ಅವನ ಉಡುಪುಗಳನ್ನೂ ಆಯುಧಗಳನ್ನೂ ದೂರದ ರಾಜಕೀಯ ದೃಷ್ಟಿಯಿಂದ ಭದ್ರವಾಗಿ ಕಾದಿರಿಸಲಾಯಿತು. ಮರುದಿನ ಅರುಣೋದಯಕ್ಕೆ ಮೊದಲೇ ಆತನ ಪ್ರಾಣರಕ್ಷಣೆಗೆ ಬೇಕಾದ ಬೆಂಗಾವಲನ್ನು ಕೊಟ್ಟು ಆಹಾರ ವ್ಯವಸ್ಥೆಮಾಡಿ ಕಳಸ ಖಾಂಡ್ಯಗಳ ಮಾರ್ಗವಾಗಿ ಪ್ರಯಾಣ ಬೆಳಸುವಂತೆ ಮಾಡಲಾಯಿತು. ರಾಜಾರಾಮನು ಕೊಂಚ ಧೈರ್ಯವನ್ನು ತಂದುಕೊಂಡು ತಾನು ಧರಿಸಿದ

ನೂತನ ವೇಷದೊಡನೆ ಮಲೆನಾಡಿನ ಕಠಿಣವಾದ ಮಾರ್ಗದಲ್ಲಿ ನಡೆದು ನೀಲಗಿರಿಯನ್ನು ಸೇರಿ ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ತಲೆಬಾಗಿ ಬೆಟ್ಟವನ್ನು ಇಳಿದು ತಮಿಳುನಾಡಿಗೆ ಕಾಲಿಟ್ಟು ತಂಜಾವೂರಿಗೆ ಹೋಗಿ, ಅಲ್ಲಿ ತನ್ನ ಬಂಧುಗಳನ್ನು ಕೂಡಿಕೊಂಡು ಪ್ರಾಣಾಪಾಯದಿಂದ ಪಾರಾದನು. ಕೆಳದಿಯ ರಾಣಿಯ ಉದಾರಗುಣಗಳನ್ನೂ ಕೆಳದಿಯ ಜನರ ವೀರಧೀರ ಭಾವನೆಗಳನ್ನೂ ತನ್ನ ಬಂಧುಮಿತ್ರರಲ್ಲಿ ಪ್ರಶಂಸಿಸ ತೊಡಗಿದನು. ರಾಜಾ ರಾಮನನ್ನು ರಾಣಿ ಚೆನ್ನಮ್ಮಾಜಿ ಸಂರಕ್ಷಿಸಿದ ಕಥೆ ಸಮಗ್ರ ಭಾರತ ದಲ್ಲಿಯೂ ಹಬ್ಬಿತು. ಇದರಿಂದ ಕೆಳದಿಯ ರಾಜ್ಯದ ಕೀರ್ತಿ ದಿಗಂತ ವಿಶ್ರಾಂತವಾಯಿತು. ಈ ಮಹತ್ಕಾರ್ಯ ನಿರ್ವಹಣೆಯಿಂದ ಕೆಳದಿಯ ರಾಣಿಯು ಕೃತಾರ್ಥಳಾದಂತೆ ಭಾವಿಸಿದಳು. ಈ ಸುದ್ದಿ ಹೇಗೋ ಔರಂಗ ಜೇಬನ ಕಿವಿಗೂ ಮುಟ್ಟಿತು.

೮. ರಾಣಿಯ ದತ್ತುಪುತ್ರ ಸ್ವೀಕಾರ

ರಾಣಿ ಚೆನ್ನಮ್ಮಾಜಿಯು ದೂರದೃಷ್ಟಿಯುಳ್ಳ ರಾಜಕಾರಿಣಿ. ಅವಳು ಹತ್ತು ವರ್ಷದ ಮುಂದೆ ಏನಾಗಬಹುದೆಂಬುದನ್ನು ಮೊದಲೇ ಆಲೋಚಿಸಿದ್ದಳು. ಮುಂದೆ ಪ್ರತಿಪಕ್ಷದಿಂದ ಬರುವ ಆಕ್ಷೇಪಗಳಿಗೆ ಸಮಾಧಾನವನ್ನು ಪೂರ್ವಭಾವಿಯಾಗಿ ಯೋಚಿಸುತ್ತಿದ್ದಳು. ರಾಜ್ಯದ ತಾಯಿಯೆನಿಸಿದ ತನ್ನ ಹೊಣೆಗಾರಿಕೆ ಬಹಳ ಮಿಗಿಲಾದುದೆಂಬುದನ್ನು ಅರಿತಿದ್ದಳು. ಆದುದರಿಂದಲೇ ಅವಳ ರಾಜ್ಯಾಡಳಿತವು ಶುಕ್ಲಪಕ್ಷದ ಚಂದ್ರನಂತೆ ದಿನೇದಿನೇ ಅಭಿವೃದ್ಧಿಯನ್ನು ಹೊಂದಿತು.

ಹಿರಿಯ ಸೋಮಶೇಖರ ಭೂಪಾಲನು ಅಪಮೃತ್ಯುವಿನಿಂದ ಮರಣ ಹೊಂದಿದ ವಿಷಯವನ್ನು ಈ ಹಿಂದೆಯೇ ತಿಳಿಸಲಾಗಿದೆ. ಈಗ ರಾಣಿ ಚೆನ್ನಮ್ಮಾಜಿಯು ಪತಿರಹಿತಳಾಗಿದ್ದಾಳೆ. ಅವಳ ಜೀವನ ಧ್ಯೇಯವು ಕೆಳದಿಯ ರಾಜ್ಯದ ಭದ್ರತೆ ಮತ್ತು ಅಭ್ಯುದಯ. ಅವಳ ಮನಸ್ಸು ಇನ್ನಾವ ಕಡೆಗೂ ಚಲಿಸುತ್ತಿಲ್ಲ. ತನ್ನ ಮನೆತನದ ಪ್ರಗತಿಗಾಗಿ, ರಾಜ್ಯದ ಭವಿಷ್ಯತ್ತಿಗಾಗಿ ತಾನು ದತ್ತುಪುತ್ರನನ್ನು ಸ್ವೀಕರಿಸುವುದು ಅಗತ್ಯ ಮತ್ತು ಅನಿವಾರ್ಯವೆಂದು ಅವಳು ತೀರ್ಮಾನಕ್ಕೆ ಬಂದಳು. ಆದರೆ ರಾಣಿಯ ದತ್ತುಪುತ್ರನು ರಾಜ್ಯದ ಇಂದಿನ ಯುವರಾಜನೂ ಮುಂದಿನ ಅರಸನೂ ಆಗುವ ಕಾರಣದಿಂದ ಮಂತ್ರಿದಂಡನಾಯಕ ಮೊದಲಾದವರನ್ನೂ, ಪುರಪ್ರಮುಖ ರಾಜ್ಯಪ್ರಮುಖರನ್ನೂ ಆಲೋಚಿಸಿ ಈ ಕಾರ್ಯಕ್ಕೆಗೊಳ್ಳುವುದು ಸಾಧುವೆಂದು ಆಕೆ ಆಲೋಚಿಸಿದಳು. ಮರುದಿನ ಸೋಮವಾರ ಬೆಳಗಿನ ರಾಜಸಭೆಗೆ ಮಂತ್ರಿಗಳು, ದಂಡನಾಯಕರು, ರಾಜ್ಯಪ್ರಮುಖರು, ಆಸ್ಥಾನ ಪ್ರಮುಖರು ಎಲ್ಲರೂ ಬರಬೇಕೆಂದೂ। ರಾಜ್ಯಕ್ಕೆ ಸಂಬಂಧಿಸಿದ ಅತಿ ಮಹತ್ವದ ವಿಚಾರವೊಂದು ಆಲೋಚನಾರ್ಹವಾಗಿದೆಯೆಂದೂ ರಾಣಿ ಹೇಳಿಕಳುಹಿಸಿದಳು. ರಾಣಿಯ ಅಪ್ಪಣೆಯಂತೆ ಮರುದಿನದ ಪ್ರಾತಃಕಾಲ ರಾಜಸಭೆ ಸೇರಿತು. ಸಭೆಗೆ ಮಂತ್ರಿ ಸುಬ್ಬನೀಸರು, ಸಚಿವ ಬೊಮ್ಮರಯ್ಯನವರು,

ದಂಡನಾಯಕ ಬಸವಯ್ಯನವರು, ರಾಜಗುರುಗಳಾದ ಶಂಕರಸ್ವಾಮಿಗಳು, ಪುರೋಹಿತರಾದ ಗಂಗಾಧರಭಟ್ಟರು ಮೊದಲಾದವರೆಲ್ಲರೂ ಸೇರಿದ್ದಾರೆ. ಸಭೆಯಲ್ಲಿ ಈ ಮುಂದಿನಂತೆ ಮಾತುಕತೆಗಳು ನಡೆಯುತ್ತವೆ.

ರಾಣಿ—ಮಂತ್ರಿ ದಂಡನಾಯಕ ಮೊದಲಾದ ರಾಜ್ಯದ ಮುಖ್ಯಾಧಿಕಾರಿಗಳೆ, ರಾಜಗುರುಗಳೆ, ಮತ್ತು ಪುರೋಹಿತರೆ, ಈ ದಿನ ರಾಜ್ಯದ ಭವಿತವ್ಯಕ್ಕೆ ಸಂಬಂಧಿಸಿದ ಒಂದು ಬಹು ದೊಡ್ಡ ವಿಚಾರವನ್ನು ತಮ್ಮ ಮುಂದಿಟ್ಟು ಅದಕ್ಕೆ ತಮ್ಮಗಳ ಅನುಭವಪೂರ್ಣವಾದ ಸಲಹೆಯನ್ನು ಪಡೆಯಲು ಈ ಸಭೆಯನ್ನು ಕರೆದಿದ್ದೇನೆ. ನನ್ನ ಪೂಜ್ಯ ಪತಿವರ್ಯರಾದ ಹಿರಿಯ ಸೋಮಶೇಖರರಾಯರು ಅಕಾಲ ಮರಣಕ್ಕೆ ತುತ್ತಾದರು. ತಮ್ಮೆಲ್ಲರ ಅಪೇಕ್ಷೆಯಂತೆ ರಾಜ್ಯದ ಹೊಣೆಯನ್ನು ನಾನು ಹೊತ್ತು ಯಥಾಶಕ್ತಿಯಾಗಿ ನಡೆಸಿಕೊಂಡು ಬರುತ್ತಿದ್ದೇನೆ. ನನ್ನ ಕಾಲಾನಂತರ ರಾಜ್ಯಕ್ಕೆ ಯಾರು ಅಧಿಪತಿಗಳಾಗಬೇಕೆಂಬ ಬಗ್ಗೆ ಮುಂದಾಗಿ ಆಲೋಚಿಸಿ ದತ್ತಕ ಮಾಡ್ಡಿಕೊಳ್ಳುವುದು ಅತಿ ಅಗತ್ಯವೆಂದು ನನಗೆ ತೋರಿಬಂದಿದೆ. ಕಾರಣ ಈ ಬಗೆಗೆ ಸಿಂಹಾಸನದ ಹಿತಚಿಂತಕರಾದ ತಮ್ಮ ಸಲಹೆಯನ್ನು ಪಡೆದು ಅದರಂತೆ ಮುಂದುವರಿಯುವುದು ನನ್ನ ಕರ್ತವ್ಯವಾಗಿದೆಯಲ್ಲವೆ? ಪ್ರಾಜ್ಞರಾದ ತಾವೆಲ್ಲರೂ ಈ ಬಗ್ಗೆ ಯೋಗ್ಯ ಸಲಹೆಗಳನ್ನು ಮಂಡಿಸುವಿರೆಂದು ನಂಬಿದ್ದೇನೆ (ಎಂದು ರಾಜ ಗುರುಗಳಾದ ಶಂಕರ ಸ್ವಾಮಿಗಳ ಮುಖವನು ನೋಡುವಳು).

ಶಂಕರಸ್ವಾಮಿಗಳು — ಮಹಾರಾಣಿ, ತಾವು ಅಪ್ಪಣೆಕೊಡಿಸತಕ್ಕ ವಿಷಯ ಬಹುಮುಖ್ಯವಾದುದು. ಈ ವಿಷಯವು ರಾಜ್ಯದ ಭವಿಷ್ಯಕ್ಕೆ ಮಾತ್ರವಲ್ಲ, ತಮ್ಮ ಮತ್ತು ತಮ್ಮ ಪೂಜ್ಯ ಪತಿವರ್ಯರ ಆತ್ಮಕ್ಕೂ ಸಂಬಂಧಿಸಿದ ವಿಷಯ. ಹಿಂದೂಧರ್ಮದಲ್ಲಿ "ಅಪುತ್ರಸ್ಯಗತಿರ್ನಾಸ್ತಿ" ಎಂಬ ಶಾಸ್ತ್ರವಾಕ್ಯವು ಸರ್ವಜನಾದರಣೀಯವಾಗಿದೆ. "ಪುತ್" ಎಂಬ ನರಕದ ದೆಸೆಯಿಂದ "ತ್ರ" ಕಾಪಾಡತಕ್ಕವನು ಯಾವನೋ ಅವನು "ಪುತ್ರ"ಎನಿಸಿಕೊಳ್ಳುತ್ತಾನೆ. ಪುತ್ರರಿಲ್ಲದವರಿಗೆ ಪಿತೃಋಣವು ತೀರುವ ಬಗೆಯಾದರೂ ಹೇಗೆ? ತಮಗೂ, ತಮ್ಮ ಪೂಜ್ಯಪತಿವರ್ಯರಿಗೂ ಪರಶಿವನ ಸನ್ನಿಧಿಯು

ಸಿಗಬೇಕಾದರೆ ಪುತ್ರನ ಅಗತ್ಯವಿದೆ. ರಾಜವಂಶದ ಅಭ್ಯುದಯದ ದೃಷ್ಟಿಯಿಂದ ಕೂಡ ಇದು ಆಲೋಚನಾರ್ಹವಾಗಿದೆ. ಔರಸಪುತ್ರನು ಆಗುವುದು ಬಿಡುವುದು ಕರ್ಮಾಧೀನದ ಮಾತು. ಆದಿಲ್ಲದವರು ದತ್ತುಪುತ್ರನನ್ನು ಸ್ವೀಕರಿಸಬೇಕೆಂದು ಧರ್ಮಶಾಸ್ತ್ರಗಳು ಹೇಳಿವೆ. ವಿಧಿವಿಲಾಸದಿಂದ ತಾವಿಂದು ಪತಿರಹಿತರಾಗಿರುವುದರಿಂದ ಶಾಸ್ತ್ರೋಕ್ತವಾದ ರೀತಿಯಿಂದ ತಾವು ದತ್ತುಪುತ್ರನನ್ನು ಸ್ವೀಕರಿಸಬೇಕಾದುದು ಇಂದು ಅಗತ್ಯ. ತಮ್ಮ ಸದ್ಗತಿಗೆ ಅವನು ಕಾರಣ ಕರ್ತನಾಗುತ್ತಾನೆ. ಆದುದರಿಂದ ರಾಜ್ಯದ ಭವಿತವ್ಯ ದೃಷ್ಟಿಯಿಂದಲೇ ಅಲ್ಲ, ತಮ್ಮ ಸದ್ಗತಿಯ ದೃಷ್ಟಿಯಿಂದಲೂ ದತ್ತು ಪುತ್ರ ಸ್ವೀಕಾರವು ಅನಿವಾರ್ಯವೆಂದೇ ನಾನು ಹೇಳಬಯಸುತ್ತೇನೆ. ಈ ಬಗೆಗೆ ರಾಜಪುರೋಹಿತರ ಅಭಿಪ್ರಾಯವೂ ಅತ್ಯಂತ ಅಗತ್ಯವೆನಿಸಿದೆ. (ಎಂದು ಹೇಳಿ ತಮ್ಮ ಗದ್ದುಗೆಯಲ್ಲಿ ಕುಳಿತು ಕೊಳ್ಳುವರು).

ರಾಣಿ—ರಾಜಗುರುಗಳು ಅಪ್ಪಣೆಕೊಡಿಸಿದ ವಿಷಯವು ಶಾಸ್ತ್ರೋಕ್ತವಾಗಿದೆ. ಅವರ ಆ ಮಾತು ನನ್ನನ್ನು ಪಾರಮಾರ್ಥದ ಕಡೆಗೆ ಸೆಳೆದಿವೆ. ಈ ಬಗೆಗೆ ರಾಜಪುರೋಹಿತರ ಅಭಿಪ್ರಾಯವನ್ನೂ ನಾನು ತಿಳಿಯಬಯಸುತ್ತೇನೆ. [ಎಂದು ಪುರೋಹಿತರ ಕಡೆ ಮುಖ ಮಾಡುವಳು.]

ರಾಜ ಪುರೋಹಿತರು—ಅಮ್ಮಾ, ನಾನು ಹೇಳಬೇಕಾಗಿದ್ದ ಕೆಲವು ಸಂಗತಿಗಳನ್ನು ಶಾಸ್ತ್ರಜ್ಞರಾದ ಶಂಕರಸ್ವಾಮಿಗಳು ಹೇಳಿರುತ್ತಾರೆ. ಸಾಮಾನ್ಯ ಕುಟುಂಬಗಳಲ್ಲಿ ಮಕ್ಕಳಿಲ್ಲವಾದರೆ, ಕೆರೆ, ಬಾವಿ, ಕಟ್ಟೆ, ತೋಪು, ಮಠ, ಮಾನ್ಯ, ದೇವಾಲಯ, ವೈದ್ಯಾಲಯ ಮೊದಲಾದುವುಗಳ ನಿರ್ಮಾಣದಿಂದ ಪಿತೃಋಣವನ್ನು ಕಳೆದುಕೊಳ್ಳಬಹುದೆಂದೂ ಇಂತಹ ಲೋಕೋಪಕಾರಿ ಕಾರ್ಯಗಳನ್ನು ಸಪ್ತಸಂತಾನವೆಂದೂ ಸ್ಮೃತಿಕಾರರು ಹೇಳಿರುತ್ತಾರೆ. ಇವುಗಳ ಮುಖ್ಯತಾತ್ಪರ್ಯ ಗೃಹಸ್ಥರು ತಾವು ಪ್ರಕೃತಿಯಿಂದ ಪಡೆದ ಸಹಾಯಕ್ಕೆ ತಾವು ಮತ್ತೆ ಪ್ರಕೃತಿಗೆ ಉಪಯುಕ್ತವಾದ ಕಾರ್ಯವನ್ನು ಸಲ್ಲಿಸಿ ಪ್ರತಿಫಲವನ್ನು ಮಾಡಬೇಕೆಂಬುವೇ ಆಗಿದೆ. ಸೃಷ್ಟಿಯ ಪ್ರಗತಿಗೆ ಜನತೆಯ ಅಭ್ಯುದಯಕ್ಕೆ ಇಂತಹ ಕರ್ಮಗಳು ಅಗತ್ಯ. ಆದರೆ, ನಿಮ್ಮ ಸಂದರ್ಭವು ವಿಶೇಷಕಾರಣಗಳಿಂದ ಕೂಡಿದೆ. ನೀವು

ರಾಜ್ಯದ ಮಹಾರಾಣಿ ಕೋಟಿಗಟ್ಟಲೆ ಜನರ ಹೊಣೆಗಾರಿಕೆ ಹೊತ್ತವರು. ತಾವು ತಮ್ಮ ಮನೆತನದ ಅಭ್ಯುದಯವನ್ನೇ ಅಲ್ಲದೆ ರಾಜ್ಯದ ಹಿತಚಿಂತನೆಯನ್ನು ಬಯಸಬೇಕಾಗಿದೆ. ಆದುದರಿಂದ ತಮ್ಮ ಸಮಸ್ಯೆಯು ಸಪ್ತ ಸಂತಾನಗಳ ನಿರ್ಮಾಣದೊಂದಿಗೆ ಮುಗಿಯುವುದಿಲ್ಲ. ಮನೆಗೆ ಒಬ್ಬ ಮಗನು ಬೇಕು. ರಾಜ್ಯಕ್ಕೆ ಒಬ್ಬ ಅಧಿಪತಿಬೇಕು. ಅದನ್ನು ದೃಷ್ಟಿಯಲ್ಲಿಟ್ಟು ಕೊಂಡು ತಾವು ದತ್ತು ಸ್ವೀಕಾರಮಾಡಿಕೊಳ್ಳಲೇಬೇಕು. ಇನ್ನು ಯಾರನ್ನು ದತ್ತು ಸ್ವೀಕಾರಮಾಡಿಕೊಳ್ಳಬೇಕೆಂಬ ಪ್ರಶ್ನೆ ಮಂತ್ರಿದಂಡನಾಯಕರ ಆಪ್ತಾಲೋಚನೆಗೆ ಸೇರಿದುದು. ಶಾಸ್ತ್ರದೃಷ್ಟಿಯಿಂದ ಕೊಡುವ ಸಲಹೆ ಮಾತ್ರ ನಮಗೆ ಸೇರಿದುದು. (ಎಂದು ಹೇಳಿ ರಾಣಿಯನ್ನು ವಂದಿಸಿ ತಮ್ಮ ಆಸನವನ್ನು ಅಲಂಕರಿಸುವರು).

ರಾಣಿ—ರಾಜಗುರುಗಳೂ, ರಾಜಪುರೋಹಿತರೂ ಇಂದು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿದ್ದಾರೆ. ಧಾರ್ಮಿಕ ದೃಷ್ಟಿಯಿಂದ, ಪಾರಲೌಕಿಕ ದೃಷ್ಟಿಯಿಂದ ಅವರ ಸಲಹೆಗಳು ಅಮೋಘವಾಗಿವೆ. ಈಗ ಮಂತ್ರಿದಂಡನಾಯಕರು ನನಗೆ ಮಾರ್ಗದರ್ಶನ ಮಾಡಬೇಕೆಂದು ಬಯಸುತ್ತೇನೆ [ಎಂದು ಮಂತ್ರಿದಂಡನಾಯಕರನ್ನು ಆಕ್ಕರೆಯಿಂದ ನೋಡುವಳು.]

ಮಂತ್ರಿ ಸುಬ್ಬುನೀಸ ಕೃಷ್ಣಪ್ಪಯ್ಯ—ಮಹಾರಾಣಿಯವರೆ, ತಾವು ಸಭೆಯ ಮುಂದಿಟ್ಟಿರುವ ವಿಷಯ ಅತಿಗಹನವೂ ಅತಿಮುಖ್ಯವೂ ಆದವುಗಳು. ರಾಜ್ಯದ ಭದ್ರತೆಯ ದೃಷ್ಟಿಯಿಂದಲೂ ಮನೆತನದ ಅಭ್ಯುದಯ ದೃಷ್ಟಿಯಿಂದಲೂ ಇಂದು ದತ್ತುಪುತ್ರ ಸ್ವೀಕಾರ ತಮಗೆ ಅನಿವಾರ್ಯ. ಇಂತಹ ಪ್ರಸಂಗಗಳಲ್ಲಿ ರಾಜದ್ರೋಹಿಗಳೂ, ದೇಶದ್ರೋಹಿಗಳೂ ನಡೆಸುವ ಸಿತೂರಿಗೆ ಅವಕಾಶವಿಲ್ಲದಂತೆ ನಾವು ನೋಡಿಕೊಳ್ಳಬೇಕು. ಕಾರಣ ಸಿಂಹಾಸನಕ್ಕೆ ಅತಿ ಸಮೀಪನಾದ, ಸಕಲರಾಜಲಕ್ಷಣಗಳಿಂದ ಕೂಡಿದ ರಾಜಬಂಧುವೊಬ್ಬನನ್ನು ದತ್ತುಪುತ್ರನನ್ನಾಗಿ ತಾವು ಸ್ವೀಕರಿಸುವುದರಲ್ಲಿ ತುಂಬಾ ವಿವೇಕವಿದೆ. ಈ ಮಹತ್ಕಾರ್ಯವನ್ನು ನಾವು ಆದಷ್ಟು ಬೇಗ ನಿರ್ವಹಿಸಬೇಕಾಗಿದೆ. ಇಲ್ಲವಾದರೆ ನಮ್ಮ ಶತ್ರುಗಳ ಒಳಸಂಚಿಗೆ ನಾವು ಅವಕಾಶವನ್ನು ಕೊಟ್ಟಂತಾಗುತ್ತದೆ. ಈ ವಿಷಯದಲ್ಲಿ ಅನು

ಭಿಪಿಗಳಾದ ದಂಡನಾಯಕ ಬಸವಯ್ಯನವರ ಅಭಿಪ್ರಾಯವನ್ನು ತಿಳಿಯು ವುದು ಅಗತ್ಯವಾಗಿದೆ.

ರಾಣಿ—ದಂಡನಾಯಕರೆ, ಈ ಸಮಸ್ಯೆಯ ಪೂರ್ಣಪರಿಹಾರಕ್ಕೆ ಈಗ ತಮ್ಮ ಸಲಹೆ ನಮಗೆ ಅತಿಮುಖ್ಯವೆನಿಸಿದೆ. ನಾನು ಯಾರನ್ನು ದತ್ತು ಸ್ವೀಕಾರ ಮಾಡಬೇಕೆಂಬ ಬಗ್ಗೆ ತಾವು ಸಲಹೆ ಮಾಡಬೇಕೆಂದು ಕೋರುತ್ತೇನೆ.

ದಂಡನಾಯಕರು—ಮಹಾರಾಣಿ, ಇದುವರೆಗೆ ಸಭೆಯಲ್ಲಿ ನಡೆದ ಪ್ರಸ್ತಾಪವನ್ನು ನಾನು ಶ್ರದ್ಧೆಯಿಂದ ಲಾಲಿಸಿದ್ದೇನೆ. ಇಹಪರಗಳೆರಡರ ದೃಷ್ಟಿಯಿಂದಲೂ ತಮಗೆ ಇಂದು ದತ್ತುಸ್ವೀಕಾರ ಅನಿವಾರ್ಯವಾಗಿದೆ. ಮಂತ್ರಿಗಳು ಹೇಳಿದಂತೆ ತಾವು ಆದಷ್ಟು ಬೇಗ ದತ್ತುಪುತ್ರನನ್ನು ಸ್ವೀಕರಿಸಿ ಅವನಿಗೆ ಯುವರಾಜ ಪದವಿಯನ್ನು ಒಪ್ಪಿಸಿ ಆತನಿಗೆ ಅಗತ್ಯವಾದ ಎಲ್ಲ ರಾಜವಿದ್ಯೆಗಳನ್ನೂ ಕೊಟ್ಟು ಸಮರ್ಥನನ್ನಾಗಿ ಮಾಡುವುದು ನಮ್ಮಗಳ ಕರ್ತವ್ಯ. ನನಗೆ ತಿಳಿದಿರುವ ಮಟ್ಟಿಗೆ ಹಿರಿಯ ಶಿವಪ್ಪನಾಯಕರ ಸಮೀಪದ ಬಂಧುವೆನಿಸಿ ವಾವೆಯಲ್ಲಿ ತಮಗೂ ಮಗನೆನಿಸಿಕೊಂಡಿರುವ ಮತ್ತು ಸಕಲ ಸಲ್ಲಕ್ಷಣಗಳಿಂದ ಕೂಡಿರುವ ಬಸವಪ್ಪನಾಯಕನನ್ನು ತಾವು ದತ್ತು ಸ್ವೀಕರಿಸುವುದು ಬಹಳ ಸಾಧುವಾದುದೆಂದು ನಾನು ಸಲಹೆಮಾಡುತ್ತೇನೆ. ಈ ನೇಮಕದಿಂದ ರಾಜಬಂಧುಗಳಲ್ಲಿ ಒಮ್ಮುಖವಾಗಿ, ಮನೆತನದ ಮತ್ತು ರಾಜ್ಯದ ಭದ್ರತೆಗೆ ಕಾರಣವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಇದರ ಮೇಲೆ ಮಹಾರಾಣಿಯವರ ಚಿತ್ತ ಹೇಗಿದೆಯೋ ಹಾಗೆ ಆಗಬಹುದು. ನಾವು ಸದಾ ಸಿಂಹಾಸನದ ಸೇವೆಗೆ ಸಿದ್ಧರಾಗಿರತಕ್ಕವರು [ಎಂದು ಹೇಳಿ ತನ್ನ ಗದ್ದುಗೆಯಲ್ಲಿ ಕುಳಿತುಕೊಳ್ಳುವನು].

ಮಹಾರಾಣಿ—ರಾಜಗುರುಗಳು, ರಾಜಪುರೋಹಿತರು, ಮುಖ್ಯ ಮಂತ್ರಿಗಳು ಮತ್ತು ದಂಡನಾಯಕರು ದತ್ತು ಸ್ವೀಕಾರದ ಬಗ್ಗೆ ಮಾಡಿರುವ ಸಲಹೆಗಳನ್ನು ನಾವು ಸ್ವೀಕರಿಸಿದ್ದೇವೆ. ರಾಜಾರಾಮನಿಗೆ ನಾವು ಆಶ್ರಯ ಕೊಟ್ಟ ನಿಮಿತ್ತವಾಗಿ ಮೊಗಲಸೈನ್ಯವು ನಮ್ಮ ರಾಜ್ಯದ ಉತ್ತರದ ಗಡಿಗಳ ಮೇಲೆ ದಾಳಿಮಾಡುತ್ತಿವೆ ಎಂಬ ಸುದ್ದಿ ಎಲ್ಲೆಡೆಗಳಿಂದಲೂ ಬರುತ್ತಿವೆ.

ರಣ ನಾವು ನಮ್ಮ ಗಮನವನ್ನು ಇಂದು ರಾಜ್ಯರಕ್ಷಣೆಯ ಕಡೆಗೆ ಕೊಡ ೕಕಾಗಿದೆ. ಆದರೆ, ಸಿಂಹಾಸನದ ಭದ್ರತೆ ದೃಷ್ಟಿಯಿಂದ ಕ್ಷಿಪ್ರದಲ್ಲಿ ದತ್ತು ೕಕಾರ ಕಾರ್ಯವನ್ನು ಮುಗಿಸಬೇಕಾಗಿದೆ. ದಂಡನಾಯಕರು ನಿರೂಪಿಸಿ ಂತೆ ಪೂಜ್ಯರಾದ ಹಿರಿಯ ಶಿವಪ್ಪನಾಯಕರಿಗೆ ಮೊಮ್ಮಗನೂ, ನಮಗೆ ಗನೂ ಆಗಬೇಕಾಗಿರುವ ಬಸವಪ್ಪನಾಯಕನನ್ನು ನಾವು ದತ್ತು ಸ್ವೀಕರಿ ಲು ಸಂತೋಷವಾಗಿ ಒಪ್ಪಿಕೊಂಡಿದ್ದೇವೆ. ಈ ನಿಮ್ಮ ತೀರ್ಮಾನವು ರಪ್ರಮುಖರಿಗೂ, ರಾಜ್ಯಪ್ರಮುಖರಿಗೂ ಸಮ್ಮತವೆಂದು ಭಾವಿಸುತ್ತೇವೆ. ಂದು ಸಭೆಯ ಕಡೆಗೆ ಮುಖ ಮಾಡುವಳು)

ಮಹಾರಾಣಿಯು ನಿರೂಪಿಸಿದ ಮಾತನ್ನು ಸಭಿಕರು ಒಮ್ಮುಖದಿಂದ ಪ್ಪಿಕೊಳ್ಳುವರು. "ಆಗಬಹುದು, ತಥಾಸ್ತು." ಎಂಬ ಧ್ವನಿಯು ಎಲ್ಲೆಡೆ ಳಿಂದಲೂ ಕೇಳಿಬಂದಿತು. ಸಭೆಯಲ್ಲಿ ಕೆಳದಿಯ ರಾಣಿಗೆ ಜಯವಾಗಲಿ, ಸವಪ್ಪನಾಯಕರಿಗೆ ಜಯವಾಗಲಿ, ದತ್ತುಸ್ವೀಕಾರ ಬಹುಬೇಗನಡೆ ಯಲಿ–ಎಂಬ ಘೋಷಣೆಗಳಾಗುತ್ತವೆ. (ರಾಣಿಯು ಸಭೆಯ ಅಭಿಪ್ರಾಯ ನ್ನು ವಾತ್ಸಲ್ಯದಿಂದ ಅಂಗೀಕರಿಸುತ್ತಾಳೆ.)

ಸಭೆಯು ತೀರ್ಮಾನದಂತೆ ಒಂದು ಶುಭಯೋಗ ಶುಭತಿಥಿಯಲ್ಲಿ ಸವಪ್ಪನಾಯಕನನ್ನು ರಾಣಿ ಚೆನ್ನಮ್ಮಾಜಿ ದತ್ತು ಪುತ್ರನನ್ನಾಗಿ ಸ್ವೀಕರಿಸಿ ಳು. ಈ ಸಮಾರಂಭವು ಅರಮನೆಯಲ್ಲಿ ಯಥೋಚಿತವಾಗಿ ನಡೆಯಿತು. ಸುದ್ದಿ ರಾಜ್ಯದಲ್ಲಿ ಎಲ್ಲೆಲ್ಲೂ ಸಾರಲ್ಪಟ್ಟು ಪ್ರಜೆಗಳಿಗೆ ಆನಂದವನ್ನು ಧಿಕಗೊಳಿಸಿತು. ರಾಣಿ ಚೆನ್ನಮ್ಮಾಜಿಯು ತನ್ನ ಜೀವನದ ಅತಿ ಮುಖ್ಯ ಾದ ಒಂದು ಕರ್ತವ್ಯವನ್ನು ನಿರ್ವಹಿಸಿದನೆಂದು ಸಮಾಧಾನಗೊಂಡಳು. ಾಜ್ಯದ ಶತ್ರುಗಳು ರಾಣಿಯ ಈ ಪ್ರಸಂಗೋಚಿತ ಜ್ಞಾನಕ್ಕೂ, ರಾಜನೀತಿ ಪುಣ್ಯತೆಗೂ ತಲೆದೂಗಿದರು. ಯುವರಾಜ ಬಸವಪ್ಪನಾಯಕನು ಎಲ್ಲರ ಮೆಚ್ಚುಗೆಗೂ ಪಾತ್ರನಾದನು. ಅಷ್ಟೇ ಅಲ್ಲ, ಕೆಳದಿಯ ರಾಜಮನೆತನಕ್ಕೆ ಲಂಕಾರ ಪ್ರಾಯನೆನಿಸಿದನು. ರಾಣಿಯ ಈ ವಿವೇಕಪೂರ್ಣವಾದ ಾರ್ಯವು ಶಿವನಸಭೆಯಲ್ಲಿ ಕಂಗೊಳಿಸುತ್ತಿದ್ದ ಕೆಳದಿಯ ಆ ಪುಣ್ಯಾತ್ಮ

ರಾದ ರಾಜರಿಗೆ ಆನಂದವನ್ನುಂಟುಮಾಡಿತು. ರಾಜ್ಯದ ಭದ್ರತೆಗೂ ಇದು ಬಹುಮಟ್ಟಿಗೆ ಕಾರಣವಾಯಿತು.

ಪ್ರಾಚೀನಕಾಲದಿಂದಲೂ ಭಾರತವು ರಾಜಪ್ರಭುತ್ವಕ್ಕೆ ಹೊಂದಿಕೊಂಡು ಬಂದಿದೆ. ಆದರೆ ೧೯೪೭ರಿಂದೀಚೆಗೆ ನಮ್ಮ ಭಾರತದೇಶದಲ್ಲಿ ಪ್ರಜಾಪ್ರಭುತ್ವವು ಉದಯಗೊಂಡಿದೆ. ಸುಮಾರು ಎರಡು ಸಾವಿರವರ್ಷಗಳಿಂದ ನಮ್ಮ ಕನ್ನಡ ನಾಡಿನಲ್ಲಿ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ, ವಿಜಯನಗರ, ಮೈಸೂರು, ಕೆಳದಿ ಮೊದಲಾದ ರಾಜ್ಯ ಸಾಮ್ರಾಜ್ಯಗಳು ಆಳಿಬಾಳಿವೆ. ಇವೆಲ್ಲವುಗಳೂ ರಾಜಪ್ರಭುತ್ವಗಳೇ ಎನಿಸಿವೆ. ಆದರೆ ನಮ್ಮ ನಾಡಿನ ರಾಜರು ರಾಜನೀತಿಯನ್ನು ಅರಿತವರಾಗಿ 'ಜಗದೊಳಗರಸಂಗಂ ಪ್ರಜೆಯೆ ದೈವಂ, ಎಂಬ ತತ್ವವನ್ನು ಅರಿತವರಾಗಿಯೇ ರಾಜ್ಯಭಾರಮಾಡಿದ್ದಾರೆ. ಇದಕ್ಕೆ ರಾಣಿ ಚೆನ್ನಮ್ಮಾಜಿ ನಿದರ್ಶನವೆನಿಸಿದ್ದಾಳೆ.

೯. ಮೊಗಲಾಯರೊಡನೆ ಯುದ್ಧ

ಔರಂಗಾಬಾದಿನಲ್ಲಿ ದಕ್ಷಿಣದ ಹಿಂದೂ ರಾಜ್ಯಗಳನ್ನು ಕಬಳಿಸುವ
ಲುವಾಗಿ ಹತ್ತು ಲಕ್ಷ ಜನರ ಪರಿವಾರದಿಂದ ಕೂಡಿದ ಮಹಾ ಸೈನ್ಯದೊಂದಿಗೆ
ಲ್ಲಿಯ ಬಾದಶಹ ಔರಂಗಜೇಬನು ವಸತಿ ಮಾಡಿದ್ದಾನೆ. ಶಿವಾಜಿಯ ಮಗ
ಂಬಾಜಿಯನ್ನು ಮೋಸದಿಂದ ಕೊಂದು ತೃಪ್ತನಾಗದೆ ರಾಜಾರಾಮನನ್ನು
ಲ್ಲಿದ್ದರೂ ಹುಡುಕಿ ತಂದು ತನಗೆ ಒಪ್ಪಿಸಬೇಕೆಂದು ಅಪಾರ ಸೈನ್ಯವನ್ನು
ಳುಹಿಸಿದ್ದಾನೆ. ಆ ಸೈನಿಕರು ಅತ್ಯಂತ ಚಾಣಾಕ್ಷತನದಿಂದ ಮಹಾರಾಷ್ಟ್ರ,
ಂಧ್ರ, ಕರ್ಣಾಟಕ ರಾಜ್ಯಗಳಲ್ಲಿ ದ್ವಿತೀಯ ಪುತ್ರ ಆ ರಾಜಾರಾಮನು ಎಲ್ಲಿ
ಡಗಿರಬಹುದೆಂದು ಕುತೂಹಲದಿಂದ ಹುಡುಕುತ್ತಿದ್ದಾರೆ. ಅದು ಹೇಗೋ
ೂಢಚಾರರ ಮುಖದಿಂದ ರಾಜಾರಾಮನು ಕೆಳದಿಯ ರಾಣಿ ಚೆನ್ನಮ್ಮಾಜಿಯ
ರೆ ಹೊಕ್ಕಿರುವನೆಂದೂ, ಈಗ ಅವನು ಬಿದನೂರು ಅರಮನೆಯಲ್ಲಿ ರಕ್ಷಿಸಲ್ಪ
ಟ್ಟಿರುವನೆಂದೂ ಮೊಗಲ್ ಸರದಾರರಿಗೆ ಸುದ್ದಿ ಬರುತ್ತದೆ. ಆಗ ಸರದಾರ
ಾದ ರಣಮಸ್ತಖಾನ್, ಅಬ್ದುಲ್ಲಾಖಾನ್ ಇವರು ಕೆಳದಿಯ ರಾಣಿಗೆ ಒಂದು
ೀರಪತ್ರವನ್ನು ಬರೆದು ತಮ್ಮ ಶತ್ರುವಾದ ರಾಜಾರಾಮನು ನಿಮ್ಮ ಆಶ್ರಯದಲ್ಲಿ
ುವನೆಂದು ನಮಗೆ ಖಚಿತವಾಗಿ ತಿಳಿದು ಬಂದಿದೆ. ನೀವು ಕೂಡಲೇ ಶತ್ರು
ನ್ನು ಬಿಟ್ಟು ಕೊಡಬೇಕು. ಇಲ್ಲವಾದರೆ ನಿಮ್ಮನ್ನು ಬಾದಶಹನ ಶತ್ರುವೆಂದು
ಾವಿಸಿ ನಿಮ್ಮ ರಾಜ್ಯದ ಮೇಲೆ ನಾವು ಧಾಳಿ ಮಾಡಬೇಕಾಗುತ್ತದೆ.
ೂಡಲೇ ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ, ಎಂಬರ್ಥದ ಪತ್ರವನ್ನು
ರೆದು ಕುದುರೆಯ ಸವಾರರೊಡನೆ ಬಿದನೂರಿಗೆ ಕಳುಹಿಸಿಕೊಟ್ಟರು. ಮೊಗಲ್
ಪಾಯಿಗಳು ಆ ಪತ್ರವನ್ನು ಬಹು ಬೇಗನೆ ತಂದು ಬಿದನೂರಿನ ಅರಮನೆಗೆ
ುಟ್ಟಿಸುವರು. ಈ ಸುದ್ದಿ ರಾಣಿಗೆ ತಿಳಿಯಿತು. ಚೆನ್ನಮ್ಮಾಜಿ ಕೂಡಲೇ
ಮಂತ್ರಿ, ದಂಡನಾಯಕ—ಮೊದಲಾದವರನ್ನು ಬರಮಾಡಿಕೊಂಡು ಆಪ್ತಾಲೋ
ಚನೆ ನಡೆಸುವಳು. ಆಗ ಅವರಲ್ಲಿ ಈ ಮುಂದೆ ಹೇಳುವಂತೆ ಸಂಭಾಷಣೆ
ನಡೆಯುತ್ತದೆ—

ರಾಣಿ:– ಮಂತ್ರಿಗಳೇ, ದಂಡನಾಯಕರೆ, ನಾವು ನಿರೀಕ್ಷಿಸಿದ ಕಷ್ಟದ ಕಾಲ ಸನ್ನಿಹಿತವಾಯಿತು. ಈಗ ನಾವು ಹೇಗೆ ನಡೆಯಬೇಕೆಂಬ ಬಗ್ಗೆ ರಾಜಕಾರಿಣಿಗಳಾದ ನೀವು ಸಲಹೆ ಮಾಡಬೇಕು. ನಮ್ಮ ರಾಜ್ಯದ ಅಳಿವು ಉಳಿವುಗಳು ನೀವು ಹೇಳುವ ಆಪ್ತಾಲೋಚನೆಯನ್ನು ಅವಲಂಬಿಸಿರುತ್ತದೆಂದು ನಾನು ನಂಬಿದ್ದೇನೆ (ಎಂದು ದಂಡನಾಯಕರ ಮುಖವನ್ನು ನೋಡುವಳು.)

ದಂಡನಾಯಕ ಬಸವಯ್ಯ:– ಅಮ್ಮಾ, ರಾಜಾರಾಮನು ನಮ್ಮ ರಾಜ್ಯದ ಎಲ್ಲೆಗೆ ಕಾಲಿಟ್ಟ ಕೂಡಲೇ ಮೊಗಲರು ನಮ್ಮ ಮೇಲೆ ಧಾಳಿ ಮಾಡು ವರೆಂಬುದನ್ನು ನಾನು ಊಹಿಸಿದ್ದೆ. ನಮ್ಮ ರಾಜ್ಯದ ಉತ್ತರ ಭಾಗದ ಗಡಿಯನ್ನು ನಾನು ಸುಭದ್ರಗೊಳಿಸಿದ್ದೇನೆ. ಕೋಟೆ ಕೊತ್ತಲುಗಳನ್ನು ಯುದ್ಧಕ್ಕೆ ಸಜ್ಜುಗೊಳಿಸಿದ್ದೇನೆ. ಮೊಗಲರು ಬಲವಾದ ಸೈನ್ಯದೊಡನೆ ನಮ್ಮ ಮೇಲೆ ಬೀಳುವುದು ಖಂಡಿತ. ಆದರೆ, ಅವರು ಬೈಲುಸೀಮೆಯಲ್ಲಿ ಸರಳವಾಗಿ ಮುಂದು ನುಗ್ಗುವಂತೆ ದುರ್ಗಮವಾದ ಈ ಮಲೆನಾಡಿನಲ್ಲಿ ನುಗ್ಗುವುದು ಕಷ್ಟ ಸಾಧ್ಯ. ಅವರಿಗೆ ಮಲೆನಾಡು ಅಪರಿಚಿತವಾದುದು. ಭುವನೇಶ್ವರಿಯ ಕೃಪೆಯಿಂದ ಪ್ರಕೃತಿಯು ನಮಗೆ ಅನುಕೂಲವಾಗಿದೆ. ಮಳೆಗಾಲವು ಸನ್ನಿಹಿತವಾಗಿದೆ. ಧಾರಾಕಾರವಾಗಿ ಬರುವ ಈ ಮಳೆಗಾಲದ ಮಳೆಯನ್ನು ಸಹಿಸಿಕೊಂಡು ಮೊಗಲರ ಸೈನ್ಯ ನಮ್ಮ ಕೂಡೆ ಬಹುಮಟ್ಟಿಗೆ ಯುದ್ಧ ಮಾಡಲು ಸಾಧ್ಯವಾ ಗಲಾರದು, ಅಲ್ಲದೆ ಧರ್ಮ ಮತ್ತು ದೈವದ ಬಲ ನಮ್ಮ ಕಡೆಗಿದೆ. ಕೆಳದಿಯ ಸೈನಿಕರು ಕೆಚ್ಚೆದೆಯ ಕಟ್ಟಾಳುಗಳು. ಸಾವಿರಾರು ವರ್ಷಗಳಿಂದ ನಮ್ಮ ಕನ್ನಡ ಜನರು ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಯುದ್ಧದಲ್ಲಿ ಪಳಗಿದ್ದಾರೆ. ಅದರಲ್ಲಿ ಮಲೆನಾಡಿನ ಜನ ಪ್ರಾಣದ ಹಂಗು ತೊರೆದು ಯುದ್ಧ ಮಾಡ ತಕ್ಕವರು. ಈ ಎಲ್ಲ ಕಾರಣಗಳಿಂದ ಈ ಯುದ್ಧದಲ್ಲಿ ಜಯ ನಮಗೆ ಖಂಡಿತ ಎಂದು ನಾನು ನಂಬಿದ್ದೇನೆ. ಮುಂದಿನ ಕಾರ್ಯಕ್ರಮಗಳಿಗಾಗಿ ಮಹಾ ರಾಣಿಯವರ ಅಪ್ಪಣೆಯನ್ನು ಕಾಯುತ್ತಿದ್ದೇನೆ.

ಮಂತ್ರಿ ಸುಬ್ಬುನೀಸರು:– ಮಹಾರಾಣಿಯವರೆ, ದಂಡನಾಯಕರು ತಮ್ಮ ಸಹಜಗುಣಕ್ಕೆ ಅನುಸಾರವಾಗಿ ಹಾಗೂ ಪ್ರಕೃತೋಚಿತವಾಗಿ ತಮ್ಮ

ವೀರವಾಣಿಯನ್ನು ನುಡಿದಿದ್ದಾರೆ. ಅವರ ಅಭಿಪ್ರಾಯಗಳು ತುಂಬು ಆಲೋಚನೆಯಿಂದ ಕೂಡಿವೆ. ಆದರೆ ಈಗ ನಾವು ಗಮನಿಸಬೇಕಾದ ಅಂಶಗಳು ಬಹಳ ಇವೆ. ಮೊಗಲಾಯರು ಇಂದು ಪ್ರಬಲರೆನಿಸಿದ್ದಾರೆ. ಔರಂಗಜೇಬನು ಮಹಾ ಪರಾಕ್ರಮಿಯೂ ಮೇಲಾಗಿ ಧರ್ಮಾಂಧನೂ ಆಗಿದ್ದಾನೆ. ಉತ್ತರ ಭಾರತವನ್ನೆಲ್ಲಾ ಹಸ್ತಗತ ಮಾಡಿಕೊಂಡು ಬಾದಶಹನು ಇಂದು ದಕ್ಷಿಣ ಭಾರತದ ಕಡೆಗೆ ತನ್ನ ದೃಷ್ಟಿಯನ್ನು ಪಸರಿಸಿದ್ದಾನೆ. ಬಹುಮಟ್ಟಿಗೆ ಜಯಶಾಲಿಯೂ ಆಗಿದ್ದಾನೆ. ಔರಂಗಾಬಾದು ದಕ್ಷಿಣದ ರಾಜಧಾನಿಯಾಗಿದೆ. ಮೊಗಲರನ್ನು ಖಡಾ ಖಡಿಯಾಗಿ ಪ್ರತಿಭಟಿಸಿರುವ ಪ್ರಭಲವಾದ ರಾಜ್ಯವು ದಕ್ಷಿಣದಲ್ಲಿ ಈಗ ಕಾಣಬರುವುದಿಲ್ಲ. ಮೈಸೂರಿನವರು ಮತ್ತು ನಾವು ಒಮ್ಮುಖವಾಗಿ ಔರಂಗಜೇಬನನ್ನು ಎದುರಿಸುವುದರಲ್ಲಿ ಲಾಭವಿದೆ. ಆದರೆ, ಅವರು ಮೊಗಲರ ಕೃಪಾದೃಷ್ಟಿಯನ್ನು ಪಡೆಯುವುದರಲ್ಲಿ ಕೃತಾರ್ಥರೆಂದು ಭಾವಿಸುವಂತಿದೆ. ಕಾರಣ! ನಾವು ಏಕಾಂಗಿಗಳಾಗಿ ಮೊಗಲರನ್ನು ಎದುರಿಸಬೇಕಾಗಿದೆ.

ಧರ್ಮಾಂಧನಾದ ಔರಂಗಜೇಬನು ಇತ್ತೀಚಿನ ದಿನಗಳಲ್ಲಿ ಸ್ವಾರ್ಥಿಯಾಗಿ ಅಹಮ್ಮದ್ ನಗರ, ಗೋಲ್ಕಂಡ ಮತ್ತು ಬೀಜಾಪುರದಲ್ಲಿದ್ದ ಮುಸಲ್ಮಾನರ ನಗರಗಳನ್ನೇ ನಾಶಮಾಡಿದ್ದಾನೆ, ಇದು ಅವನ ಅಧಿಕಾರ ಲೋಭಕ್ಕೆ ಸ್ಪಷ್ಟವಾದ ನಿದರ್ಶನವೆನಿಸಿದೆ. ಇದರಿಂದ ದಖನ್ನಿನ ಮುಸಲ್ಮಾನರು ಔರಂಗಜೇಬನಿಗೆ ವಿರೋಧಿಗಳಾಗಿದ್ದಾರೆ. ಶಿವಾಜಿ ಮಹಾರಾಜರ ಮಗ ಸಾಂಬಾಜಿಯನ್ನು ದಿಲ್ಲಿಗೆ ಕರೆಸಿ ಮೋಸದಿಂದ ಕೊಂದುದೂ, ಸಾಂಬಾಜಿಯ ಮಗ ಸಾಹುವನ್ನು ದಿಲ್ಲಿಯಲ್ಲಿ ಸೆರೆಯಲ್ಲಿಟ್ಟಿದುದೂ, ದ್ವಿತೀಯ ಪುತ್ರ ರಾಜಾರಾಮನನ್ನು ಬೆನ್ನಟ್ಟಿದುದೂ ಇದೆಲ್ಲವೂ ಮಹಾರಾಷ್ಟ್ರರನ್ನು ಕೆರಳಿಸಿದೆ. ಅವರು ಔರಂಗಜೇಬನ ಪ್ರಬಲ ಶತ್ರುಗಳೆನಿಸಿದ್ದಾರೆ. ಕರ್ಣಾಟಕದ ವೀರರಾಣಿಯಾದ ತಮ್ಮಂತೆಯೇ ಮಹಾರಾಷ್ಟ್ರದ ವಿಖ್ಯಾತ ಸ್ತ್ರೀ ತಾರಾಬಾಯಿಯವರು ಔರಂಗಜೇಬನ ಸೈನ್ಯವನ್ನು ಸಿಕ್ಕಿದ ಸ್ಥಳಗಳಲ್ಲಿ ಮುಖಭಂಗಮಾಡುತ್ತಾ ಮೊಗಲರ ದರ್ಪವನ್ನು ಪುಡಿಪುಡಿಮಾಡುತ್ತಿದ್ದಾರೆ. ಔರಂಗಜೇಬನ ಮಕ್ಕಳು ಅಧಿಕಾರ ಲಾಲಸೆಯಿಂದ ತಂದೆಯನ್ನೇ ದ್ವೇಶಿಸುತ್ತಿದ್ದಾರೆ. ಮೇಲಾಗಿ

ಬಾದಶಹನಿಗೆ ಈಗ ತುಂಬಾ ವಯಸ್ಸಾಗಿದೆ. ಮೊಗಲರ ಸೈನಿಕರು ಬಹುಕಾಲ ಸ್ವದೇಶವನ್ನು ಬಿಟ್ಟು ದಕ್ಷಿಣದಲ್ಲಿ ಸಂಚರಿಸಿ ಯುದ್ಧದಿಂದ ಬೇಸರ ಹೊಂದಿದ್ದಾರೆ. ಇವೆಲ್ಲ ಕಾರಣಗಳಿಂದ ಮೊಗಲರ ಬಲ ಇಂದು ಕಡಮೆಯಾಗುತ್ತದೆ. ಕೆಳದಿಯ ಸೈನ್ಯ ಇಂದು ತಕ್ಕಷ್ಟು ಬಲಶಾಲಿಯಾಗಿದೆ. ದಂಡನಾಯಕರು ಹೇಳಿದಂತೆ ಧರ್ಮ ಮತ್ತು ದೈವದ ಬಲ ನಮ್ಮ ಕಡೆಗಿದೆ. (ಯತೋಧರ್ಮಸ್ತತೋಜಯಃ) ಎಂಬ ಮಾತು ಲೋಕಪ್ರಸಿದ್ಧವಾಗಿದೆ. ಇಂದು ನಾವು ಮೊಗಲರನ್ನು ಬಲವಾಗಿ ಎದುರಿಸುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. ಕೆಳದಿಯ ರಾಜ್ಯಾಭಿಮಾನದೇವತೆ ಶ್ರೀ ಮೂಕಾಂಬಿಕೆಯು ನಮ್ಮನ್ನು ಅನುಗ್ರಹಿಸಬೇಕು. ಈ ವಿಷಯವಾಗಿ ನನ್ನ ಸಹಕಾರಿಗಳಾದ ಮಂತ್ರಿ ಬೊಮ್ಮಯ್ಯನವರು ನಮಗೆ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತೇನೆ.

ಮಂತ್ರಿ ಬೊಮ್ಮಯ್ಯ :– ಮಹಾರಾಣಿಯವರೆ, ದಂಡನಾಯಕರ ಮತ್ತು ಮಂತ್ರಿ ಸುಬ್ಬುನೀಸರ ಮಾತುಗಳನ್ನು ನಾನು ಕುತೂಹಲದಿಂದ ಲಾಲಿಸಿದ್ದೇನೆ. ಇಂತಹ ಮಹತ್ವದ ಸಂದರ್ಭದಲ್ಲಿ ನಾವು ರಾಜನೀತಿಶಾಸ್ತ್ರವನ್ನು ಗಮನಿಸಬೇಕು. ಶತ್ರುವನ್ನು ಗೆಲ್ಲಲು ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳನ್ನು ಅರ್ಥಶಾಸ್ತ್ರದಲ್ಲಿ ಮಹರ್ಷಿ ಚಾಣಕ್ಯನು ಹೇಳಿದ್ದಾನೆ. ಮೊದಲು ಸಾಮ, ದಾನ ಭೇದಗಳನ್ನು ಅನುಕ್ರಮವಾಗಿ ಪ್ರಯೋಗಿಸಿ ಅದು ವಿಫಲವಾದಾಗ ದಂಡ ನೀತಿಯನ್ನು ಪ್ರಯೋಗಿಸುವುದು ವಿವೇಕಿಗಳ ಲಕ್ಷಣ. ನಮ್ಮ ಶತ್ರುಗಳಾದ ಮೊಗಲರು ಅತ್ಯಂತ ಬಲಶಾಲಿಗಳು. ಕಾರಣ: ಅವರನ್ನು ಸಾಮದಾನಗಳಿಂದ ಗೆಲ್ಲಲು ನಾವು ಪ್ರಯತ್ನಿಸಬೇಕು. ಮೊಗಲರ ವೀರರು ಸ್ವಾಮಿಭಕ್ತರಾದುದರಿಂದ ಅವರಲ್ಲಿ ನಮ್ಮ ಭೇದೋಪಾಯವು ನಡೆಯಲಾರದು. ಭೇದೋಪಾಯವು ಜಯಿಸಬೇಕಾದರೆ ಶತ್ರುಪಕ್ಷದಲ್ಲಿ ಒಡತನವಿರಬೇಕು. ಅಥವಾ ಸ್ವಾಮಿದ್ರೋಹಿಗಳು ಇರಬೇಕು. ಪ್ರಕೃತ ಮೊಗಲಾಯರು ಐಶ್ವರ್ಯದ ಪರಮಾವಧಿಯಲ್ಲಿ ಮುಳುಗಿರುವರು, ಮೊಗಲ್ ದಂಡನಾಯಕರು ಅತ್ಯಂತ ಸ್ವಾಮಿ ಭಕ್ತರಾಗಿರುವರು. ಕಾರಣ: ನಮ್ಮ ಭೇದೋಪಾಯವು ಅಲ್ಲಿ ಫಲಿಸಲಾರದು. ದಂಡೋಪಾಯವಂತೂ ನಮ್ಮ ಕಟ್ಟಕಡೆಯ ಸಾಧನವೇ ಆಗಿದೆ.

ಪ್ರ ಕೃ ತ ನಾವು ಮೊದಲಲ್ಲಿ ಸಾಮೋಪಾಯವನ್ನು ಮುಂದಿಡೋಣ. ಅದರ ಪರಿಣಾಮವನ್ನು ಗಮನಿಸಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸೋಣ. ರಾಜಾರಾಮನು ಬಿದನೂರನ್ನು ಬಿಟ್ಟು ಹೋಗುವಾಗ ಅವನು ಧರಿಸಿದ್ದ ಪೋಷಾಕನ್ನೂ, ಅವನು ಹತ್ತಿ ಬಂದ ಕುದುರೆಯನ್ನೂ ನಾವು ದೂರದೃಷ್ಟಿಯಿಂದ ಇಟ್ಟುಕೊಂಡಿರುವುದು ಸರಿಯಷ್ಟೆ. ಅದರ ಉಪಯೋಗ ಈಗ ಬಹಳವಿದೆ. ಔರಂಗಜೇಬ ಬಾದಶಹಸಿಗೆ ನಾವು ನಡೆದ ಪ್ರಸಂಗವನ್ನು ಸಂಗ್ರಹವಾಗಿ ತಿಳಿಸಿ ರಾಜಾರಾಮನ ವಸ್ತ್ರಾಭರಣಗಳನ್ನೂ, ಕುದುರೆಯನ್ನೂ ನಮ್ಮ ರಾಯಭಾರಿಗಳಿಂದ ಕಳುಹಿಸಿಕೊಡೋಣ. ಇದರಿಂದ ಬಾದಶಹನು ತೃಪ್ತನಾದರೆ ನಮ್ಮ ಪುಣ್ಯ. ಇಲ್ಲವಾದರೆ ಮುಂಪೆ ಯುದ್ಧವು ನಮಗೆ ಅನಿವಾರ್ಯವಾಗುತ್ತದೆ. ರಾಜ್ಯ ಸಾಮ್ರಾಜ್ಯಗಳ ಚರಿತ್ರೆಯಲ್ಲಿ ಶಕ್ತಿಗಿಂತ ಯುಕ್ತಿಯೂ, ಸಂಖ್ಯೆಗಿಂತ ವ್ಯವಸ್ಥೆಯೂ ಬಲಶಾಲಿಯೆಂಬುದನ್ನು ನಾವು ಕಂಡುಕೇಳಿದ್ದೇವೆ. ಇದರಿಂದ ನಮ್ಮ ಬುದ್ಧಿಬಲದ ಪರೀಕ್ಷೆಯೂ ಆಗುತ್ತದೆ. ಬಾದಶಹನ ಮುಂದಣ ಪರಿಣಾಮವೇನೆಂಬುದು ತಿಳಿದುಬರುತ್ತದೆ. ಈ ಕಾರ್ಯವನ್ನು ಸಾಧಿಸಲು ಪ್ರತಿಭಾಶಾಲಿಗಳಾದ ರಾಯಭಾರಿಗಳು ನಮ್ಮ ಆಸ್ಥಾನದಲ್ಲಿದ್ದಾರೆ. ಅವರಿಗೆ ಉರ್ದು. ಪಾರಶಿ ಭಾಷೆಗಳೂ ಬರುತ್ತದೆ. ಅವರ ಸೇವೆಯನ್ನು ಈಗ ರಾಜ್ಯಕ್ಕೆ ದೊರಕಿಸೋಣ. ಈ ನನ್ನ ಬಿನ್ನಹವನ್ನು ಮಹಾರಾಣಿಯವರು ಪರಿಶೀಲಿಸಬೇಕು.

ಮಹಾರಾಣಿ :— ಮೇಧಾವಿಗಳಾದ ಮಂತ್ರಿಗಳೇ, ಪರಾಕ್ರಮಶಾಲಿಗಳಾದ ದಂಡನಾಯಕರೇ, ತಾವುಗಳು ನೀಡಿದ ಇಂದಿನ ಸಲಹೆಗಾಗಿ ನಾನು ತಮಗೆ ಕೃತಜ್ಞಳಾಗಿದ್ದೇನೆ. ಮಂತ್ರಿ ಬೊಮ್ಮಯ್ಯನವರ ಸಲಹೆಯನ್ನು ಮೊದಲು ನಾವು ಕಾರ್ಯರೂಪಕ್ಕೆ ತರೋಣ. ಅದರ ಪರಿಣಾಮವನ್ನು ನೋಡಿ ಮುಂದೆ ಯುದ್ಧಕ್ಕೆ ಸಿದ್ಧರಾಗೋಣ. ಸತ್ಯಧರ್ಮಗಳಿಗಾಗಿ ಶ್ರಮಿಸುತ್ತಿರುವ ನಮಗೆ ಜಯ ಸಿದ್ಧವೆಂದು ನಂಬುಗೆಯಾಗಿದೆ.

ರಾಜಾರಾಮನ ವಸ್ತ್ರಾಭರಣಗಳನ್ನೂ, ಕುದುರೆಯನ್ನೂ ತೆಗೆದುಕೊಂಡು ನಮ್ಮ ಆಸ್ಥಾನದಿಂದ ನಂಬುಗೆಯ ರಾಯಬಾರಿಗಳೆನಿಸಿರುವ ಅಪ್ಪಾಜಿಭೌಸಲೆ,

ಸಂತಾಜಿ ಜಿನದಾಬ, ಮಾನೋಜಿಮೋರೆ, ರಾಜಾರಾವ್-ಎಂಬ ಈ ನಾಲ್ಕು ಮಂದಿ ನಮ್ಮ ಪತ್ರ ಸಮೇತ ಬಾದಶಹನಲ್ಲಿಗೆ ಹೋಗಿ ಬರಲಿ ಎಂದು ಹೇಳಿ "ದಿಲ್ಲಿಯ ಬಾದಶಹರಾದ ಔರಂಗಜೇಬರೇ, ತಾವು ತಮ್ಮ ವಜೀರರ ಮೂಲಕ ಕಳುಹಿಸಿಕೊಟ್ಟ ನಿರೂಪ ನಮಗೆ ಮುಟ್ಟಿದೆ. ಛತ್ರಪತಿ ಶಿವಾಜಿ ಮಹಾರಾಜರ ದ್ವಿತೀಯ ಪುತ್ರ ರಾಜಾರಾಮರು ಕೆಲವು ದಿನಗಳ ಹಿಂದೆ ನಮ್ಮ ರಾಜ್ಯಕ್ಕೆ ಬಂದುದೂ ನಿಜ. ನಮ್ಮ ಆಶ್ರಯವನ್ನು ಪಡೆದುದೂ ನಿಜ. ರಾಜಧರ್ಮದ ನಿಯಮದಂತೆ ನಾವು ಅವರಿಗೆ ಕೆಲವು ದಿನಗಳ ಆಶ್ರಯವನ್ನು ಕೊಟ್ಟಿದ್ದುದೂ ನಿಜ. ಆದರೆ, ಈಗ ರಾಜಾರಾಮರು ನಮ್ಮ ರಾಜ್ಯದಲ್ಲಿಲ್ಲ. ಅವರು ತೀವ್ರ ವೈರಾಗ್ಯದಿಂದ ಸನ್ಯಾಸದೀಕ್ಷೆಯನ್ನು ತೆಗೆದುಕೊಂಡು ಅವರ ವಸ್ತ್ರಾಭರಣಗಳನ್ನೆಲ್ಲಾ ಬಿದನೂರಿನಲ್ಲಿ ಬಿಟ್ಟು ದಕ್ಷಿಣ ಭಾರತದ ತೀರ್ಥ ಸಂಚಾರಕ್ಕಾಗಿ ಹೊರಟು ಹೋಗಿದ್ದಾರೆ. ಇದ್ದ ವಿಷಯವನ್ನು ತಮಗೆ ಶ್ರುತಪಡಿಸಿದ್ದೇನೆ. ದಿಲ್ಲಿಯ ಬಾದಶಹರಾದ ತಮ್ಮ ಕೂಡೆ ಗೌರವದ ಸ್ನೇಹದಿಂದಿರಬೇಕೆಂಬುದೇ ಮಲೆನಾಡಿನವರಾದ ನಮ್ಮ ಬಯಕೆ" ಇಂತು ತಮ್ಮ ನಂಬುಗೆಯ.

ರಾಣಿ:- ಚೆನ್ನಮ್ಮಾಜಿ, ಬಿದನೂರು, ಎಂಬರ್ಥದ ಪತ್ರವನ್ನು ಬರೆದು ಕಳುಹಿಸಿದಳು, ರಾಯಬಾರಿಗಳ ಸಂಗಡ ಔರಂಗಜೇಬ ಬಾದಶಹನಿಗೆ ಮನಸ್ತೃಪ್ತಿಯಾಗಲೆಂದು ಕೆಲವು ರತ್ನಾಭರಣಗಳನ್ನೂ, ಮಲೆನಾಡಿನ ಮೆಣಸು, ಯಾಲಕ್ಕಿ, ಅಪೂರ್ವ ವಸ್ತುಗಳನ್ನೂ ಕಳುಹಿಸಿದರು. ವಿವೇಕಿಗಳಾದ ಕೆಳದಿಯ ರಾಯಭಾರಿಗಳು ರಾಜ್ಯದ ಗಡಿಯಲ್ಲಿ ಬೀಡು ಬಿಟ್ಟಿದ್ದ ಮೊಗಲ್ ಸರದಾರರಾದ ರಣಮಸ್ತಾಖಾನ್, ಅಬ್ದುಲ್ಲಾಖಾನ್ ಇವರಿಗೆ ರಾಣಿಯ ಪತ್ರಾಭಿಪ್ರಾಯವನ್ನು ತಿಳಿಸಿದರು. ರಾಜಾರಾಮನ ವಸ್ತ್ರಾಭರಣಗಳನ್ನೂ ತೋರಿಸಿದರು. ಇದನ್ನೆಲ್ಲಾ ನೋಡಿದ ಮೊಗಲ ಸರದಾರರು ಈ ಬಗೆಗೆ ತೀರ್ಮಾನ ಕೊಡತಕ್ಕವರು ನಮ್ಮ ಬಾದಶಹರು. ಅವರ ಅಪ್ಪಣೆಯಂತೆ ನಡೆಯತಕ್ಕವರು ಮಾತ್ರ ನಾವು, ನೀವು ಈಗ ಔರಂಗಾಬಾದಿನಲ್ಲಿ ವಸತಿಮಾಡಿರುವ ನಮ್ಮ ಪ್ರಭುಗಳನ್ನು ಕಂಡು ಈ ವಿಷಯದಲ್ಲಿ ಅವರ ತೀರ್ಮಾನವನ್ನು

ಕೂಡಲೇ ಪಡೆಯಬೇಕು. ಬಾದಶಹರ ಅಪ್ಪಣೆ ಬರುವವರೆಗೆ ಮಾತ್ರ ನಾವು ನಿಮ್ಮ ರಾಜ್ಯದ ಮೇಲೆ ಧಾಳಿ ಮಾಡಲು ತಡೆದಿದ್ದೇವೆ ಎಂದು ಹೇಳಿ ಅವರ ಸಂಗಡ ಔರಂಗಾಬಾದಿಗೆ ತಮ್ಮ ಒಬ್ಬ ಸಹಾಯಕನನ್ನು ಕೊಟ್ಟು ಕಳುಹಿಸಿದರು. ರಾಯಭಾರಿಗಳು ಅತಿವೇಗದಿಂದ ಔರಂಗಾಬಾದಿಗೆ ನಡೆದರು.

ಈ ಕಾಲದಲ್ಲಿ ಬಾದಶಹ ಔರಂಗಜೇಬನು ಔರಂಗಾಬಾದಿನಲ್ಲಿ ದೇವೇಂದ್ರನ ಅರಮನೆಯಂತೆ ಕಂಗೊಳಿಸುವ "ರಾಣೀಕಾಮೊಹ್‌ಬರ" ಎಂಬ ದಿವ್ಯಮಂದಿರವನ್ನು ಅಮೃತಶಿಲೆಯಿಂದ ಕಟ್ಟಿಸುತ್ತಿದ್ದನು. ಇದು ಅವನ ಪ್ರಿಯ ಪತ್ನಿಯ ಸ್ಮರಣೆಗಾಗಿ ಕಟ್ಟಿಸಿದ ಗೋರಿ ಎಂಬುದನ್ನು ವಾಚಕರು ತಿಳಿದಿರಬೇಕು. ಆಗ್ರಾ ನಗರದಲ್ಲಿ ಇವನ ತಂದೆ ಷಹಜಹಾನನು ಅವನ ಪ್ರಿಯ ಪತ್ನಿಯಾದ ಮಮ್ತಾಜ್ ಬೇಗಮಳ ಸವಿನೆನಪಿಗಾಗಿ ಯಮುನಾನದಿ ತೀರದಲ್ಲಿ ಕಟ್ಟಿಸಿರುವ "ಟಾಜ್‌ಮಹಲ್" ಎಂಬ ಮಂದಿರದ ವಾರ್ತೆಯನ್ನು ಕೇಳದಿರುವವರಾರು! ತಂದೆಯ ಆ ಮಾರ್ಗವನ್ನೇ ಮಗನಿಂದ ಔರಂಗಜೇಬನು ಹಿಡಿದುದು ಸಹಜವಾಗಿಯೇ ಇದೆ. ಆದರೆ ಔರಂಗಾಬಾದಿನಲ್ಲಿರುವ ರಾಣಿಯ ಗೋರಿಯು ಆಗ್ರಾದ ಟಾಜ್‌ಮಹಲಿಗೆ ಸಮವಾಗದಿದ್ದರೂ ಅದಕ್ಕೆ ಎರಡನೆಯ ದಾಗಿ ಪರಿಶೋಭಿಸುತ್ತಿದೆ ಎಂದು ನಾವು ನೆನಪಿಡಬಹುದು. ಔರಂಗಾಬಾದಿಗೆ ಅನತಿ ದೂರದಲ್ಲಿರುವ ದೇವಗಿರಿ ಅಥವಾ ದೌಲಾತಾಬಾದಿನಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ದೆಹಲಿಯ ಕುತುಬ್‌ಮಿನಾರ್ ಹೋಲುವ ಚಾಂದ್‌ಮಿನಾರ್ ಎಂಬ ಸ್ತಂಭವನ್ನು ಕಟ್ಟಿಸಿರುವುದು ಔರಂಗಜೇಬನಿಗೆ ಸ್ಫೂರ್ತಿಯನ್ನು ಕೊಟ್ಟಿರಬಹುದು.

ಒಟ್ಟಿನಲ್ಲಿ ಬಾದಶಹನು ದಕ್ಷಿಣದ ಮುಸಲ್ಮಾನ ರಾಜ್ಯಗಳನ್ನು ಜಯಿಸಿ ವಿಜಯೋನ್ಮತನಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿದ್ದ ಹಿಂದೂ ರಾಜ್ಯಗಳನ್ನು ಕಬಳಿಸಲು ಅಂದು ಪ್ರತಿಜ್ಞೆ ಮಾಡಿದ್ದನು. ಕೆಳದಿಯ ರಾಣಿಯು ಸಾಮ್ರಾಟನಾದ ತನ್ನ ಶತ್ರು ರಾಜಾರಾಮನಿಗೆ ಆಶ್ರಯವಿತ್ತ ವಾರ್ತೆಯು ಅವನ ಕಿವಿಯಮೇಲೆ ಬಿದ್ದು ಅತ್ಯಂತ ಕೋಪಾವಿಷ್ಟನಾಗಿದ್ದನು. ಹಗಲಿರುಳೂ ರಾಜಾರಾಮನನ್ನು ಹಿಡಿದು ತರಿಸಿ ತನ್ನ ಮುಂದೆ

ಕೊಲ್ಲಿಸಬೇಕೆಂಬ ವಿಚಾರದಲ್ಲೇ ಮಗ್ನನಾಗಿದ್ದನು. ದಕ್ಷಿಣದ ಕಡೆ ದಂಡೆತ್ತಿ ಹೋದ ತನ್ನ ಸರದಾರರ ಕಡೆಗಳಿಂದ ಅತ್ತಣ ವಿಚಾರಗಳಿಗೆ ಪತ್ರ ನಿರೀಕ್ಷಣೆಯಲ್ಲಿದ್ದನು. ಇಂತಹ ಪ್ರಸಂಗದಲ್ಲಿ ಕೆಳದಿಯ ರಾಯಭಾರಿಗಳು ಔರಂಗಾಬಾದಿಗೆ ಬಾದಶಹನ ಸಂದರ್ಶನಕ್ಕೆ ಹೋಗಿದ್ದರೆಂಬುದು ಗಮನಾರ್ಹವಾಗಿದೆ.

ಕೆಳದಿಯ ರಾಯಭಾರಿಗಳು ಔರಂಗಾಬಾದನ್ನು ಸೇರಿದರು. ತಾವು ಬಾದಶಾಹನ ಸಂದರ್ಶನಾರ್ಥವಾಗಿ ಕೆಳದಿಯ ರಾಣಿಯ ಪತ್ರದೊಡನೆ ಬಂದಿರುವುದಾಗಿ ಸುದಿ ಕೊಟ್ಟರು. ಔರಂಗಜೇಬನು ಈ ಸುದ್ದಿಯಿಂದ ಕುತೂಹಲಗೊಂಡನು. ಕೆಳದಿಯ ವಕೀಲರುಗಳನ್ನು ತನ್ನ ದರ್ಬಾರಿಗೆ ಬರಮಾಡಿಕೊಂಡನು. ದುಭಾಷಿಗಳಿಂದ ರಾಣಿಯ ಪತ್ರವನ್ನು ಓದಿಸಿ ಕೇಳಿದನು. ರಾಜಾರಾಮನ ವಸ್ತ್ರಾಭರಣಗಳನ್ನೂ ಮತ್ತು ಕುದುರೆಯನ್ನೂ ಕಣ್ಣಾರ ನೋಡಿದನು. ಕೆಳದಿಯ ರಾಯಭಾರಿಗಳ ಮುಖವನ್ನು ಗಂಭೀರಭಾವದಿಂದ ಈಕ್ಷಿಸಿದನು. ಇದೆಲ್ಲವೂ ಕೆಳದಿಯ ರಾಣಿಯ ಕುತಂತ್ರವೆಂಬುದನ್ನು ಬಹುಬೇಗನೆ ಅರಿತನು. ದಿಲ್ಲಿಯ ಬಾದಶಹನಿಂದ ತನ್ನ ಅಂಜಿಕೆಯಿಲ್ಲದೆ ಕೆಳದಿಯ ರಾಜ್ಯದ ಒಬ್ಬ ಚಿಕ್ಕರಾಣಿ ತನ್ನ ಪ್ರಬಲ ಶತ್ರುವಿಗೆ ಆಶ್ರಯ ಕೊಟ್ಟದ್ದಕ್ಕಾಗಿ ಖತಿಗೊಂಡನು. ಅವನ ಮುಖ ಉಗ್ರವಾಯಿತು. ಕಣ್ಣು ಕೆಂಪಿಳಿದಿರುವುದು, ಹಲ್ಲುಗಳನ್ನು ಕಟಕಟ ಕಡಿಯತೊಡಗಿದನು. ಮೀಸೆಗಳನ್ನು ತೀಡಿದನು. ಗಡ್ಡದ ಕೂದಲನ್ನು ಎಳೆದುಕೊಂಡನು. ಕೂಡಲೇ ತನ್ನ ಮಗನೂ, ಪರಾಕ್ರಮಶಾಲಿಯೂ ಆದ ಅನಂತಾರನನ್ನು ಕರೆದು ಮಗನೇ ನೀನು ಅಪಾರ ಸೈನ್ಯದೊಡನೆ ಕೂಡಲೇ ಕೆಳದಿಯ ರಾಜ್ಯದ ಮೇಲೆ ಅಭಿಯೋಗ ಮಾಡತಕ್ಕದ್ದು. ನಿನ್ನ ಸಹಾಯಕ್ಕಾಗಿ ಈಗಾಗಲೇ ಆ ರಾಜ್ಯದ ಗಡಿಯಲ್ಲಿ ವೀರರಾದ ರಣಮಸ್ತಾಖಾನ್, ಅಬ್ದುಲ್ಲಾಖಾನ್ ಎಂಬ ವೀರ ಸರದಾರರು ಅಲ್ಲಿ ಸೈನ್ಯದೊಡನೆ ಸಿದ್ಧರಾಗಿದ್ದಾರೆ. ನೀವೆಲ್ಲರೂ ಆ ಮಲೆನಾಡಿನ ರಾಣಿಯ ರಾಜ್ಯದ ಮೇಲೆ ಬಿದ್ದು ಆ ರಾಜ್ಯವನ್ನು ಜಯಿಸಿ ಮೊಗಲ ಸಾಮ್ರಾಜ್ಯಕ್ಕೆ ಸೇರಿಸತಕ್ಕದ್ದು. ಅಲ್ಲದೆ ಆ ಕೆಳದಿಯ ರಾಣಿ ಚೆನ್ನಮ್ಮಾಜಿಯನ್ನು ಜೀವಸಮೇತ ಹಿಡಿದು ತಂದು ನನಗೆ ಒಪ್ಪಿಸತಕ್ಕದ್ದು" ಎಂದು ಕಟ್ಟಪ್ಪಣೆ ಮಾಡಿದನು. ಕೆಳದಿಯ ರಾಯಬಾರಿಗಳನ್ನು ಕೋಪದ ಮಾತು

ಗಳಿಂದ ಗದರಿಸಿ ಬಂದದ್ದಾರಿಗೆ ಸಂಕವಿಲ್ಲವೆಂಬಂತೆ ಹೋಗಬೇಕೆಂದು ಹೇಳಿದನು. ದಿಲ್ಲಿಯ ಬಾದಶಹನ ಈ ಔದ್ಧತ್ಯವನ್ನು ಕಂಡು ರಾಯಭಾರಿಗಳು ಬೆರಗಾದರು. ರಾಜತ್ವದ ಹಾಗೂ ಮನುಷ್ಯತ್ವದ ಸಲ್ಲಕ್ಷಣಗಳನ್ನು ಕಿಂಚಿತ್ತು ಪಡೆಯದಿದ್ದ ಆ ದಿಲ್ಲಿಯ ಬಾದಶಹನನ್ನು ಪ್ರತ್ಯಕ್ಷವಾಗಿ ಕಂಡು ಅವರು ಬಹಳವಾಗಿ ಬೇಸರಗೊಂಡರು. ತಮ್ಮನ್ನು ಪ್ರಾಣಸಹಿತ ಹಿಂದಿರುಗುವಂತೆ ಮಾಡಿದುದೇ ಕೇವಲ ಪುಣ್ಯವೆಂದು ಭಾವಿಸಿದರು, ಔರಂಗಾಬಾದಿನಿಂದ ಸುಮಾರು ಆರುನೂರು ಮೈಲಿ ದೂರವಿರುವ ಬಿದನೂರಿಗೆ ಅತಿ ವೇಗದಿಂದ ಧಾವಿಸಿ ಬಂದರು. ಬಾದಶಹನ ಆಗ್ರಹದ ಅಪ್ಪಣೆಯನ್ನು ಬಿದನೂರು ರಾಣಿಗೆ ಅರಿಕೆ ಮಾಡಿದರು. ಎಲ್ಲ ಪ್ರಕಾರದಿಂದಲೂ ದಂಡೋಪಾಯವು ನಮಗೆ ಇಂದು ಅನಿವಾರ್ಯವೆಂದು ಜಿನ್ನಯಿಸಿದರು.

ರಾಣಿ ಚೆನ್ನಮ್ಮಾಜಿಯು ಭವಿತವ್ಯವನ್ನು ಚಿಂತಿಸಿದಳು. ರಾಜಧಾನಿಗೆ ಗಂಡಾಂತರ ಒದಗಬಹುದೆಂದು ತರ್ಕಿಸಿದಳು. ಅಂತಹ ಕಷ್ಟಕಾಲ ಬಂದರೆ ಮಲೆನಾಡಿನ ದುರ್ಗಮ ಪ್ರದೇಶದಲ್ಲಿರುವ ಭುವನಗಿರಿದುರ್ಗವನ್ನು ತನ್ನ ಆತ್ಮ ರಕ್ಷಣೆಗಾಗಿ ಸಜ್ಜುಗೊಳಿಸಿದಳು. ರಾಜ್ಯದ ಗಡಿಗಳಲ್ಲಿ ರಾಜಧಾನಿಯ ಬಳಿಯಲ್ಲಿ ಸೈನ್ಯವು ಸದಾಸಿದ್ಧವಾಗಿರಬೇಕೆಂದೂ, ಎಲ್ಲ ಪ್ರಕಾರದಿಂದಲೂ ಶತ್ರುಗಳನ್ನು ಸದೆಬಡಿಯಬೇಕೆಂದೂ ಶತ್ರುಗಳಿಗೆ ಆಹಾರ, ನೀರು ಮೊದಲಾದವು ಸಿಕ್ಕದಂತೆ ಎಚ್ಚರಿಕೆಯಿಂದ ಇರಬೇಕೆಂದೂ ನಿರೂಪವಿತ್ತಳು. ಮಂತ್ರಿಗಳು, ದಂಡ ನಾಯಕರು ರಾಜ್ಯರಕ್ಷಣೆಯ ಕಾರ್ಯದಲ್ಲಿ ತೊಡಗಿದರು. ಒಂದು ವೇಳೆ ರಾಜಧಾನಿಗೆ ಗಂಡಾಂತರ ಬಂದರೆ ತಾವೆಲ್ಲರೂ ಭುವನಗಿರಿ ದುರ್ಗದಲ್ಲಿ ಒಟ್ಟು ಸೇರಬೇಕೆಂದೂ ಅಲ್ಲಿಂದ ಶತ್ರುಗಳ ಮೇಲೆ ಉಗ್ರವಾಗಿ ಬೀಳಬೇಕೆಂದೂ ಹಂಚಿಕೆಯನ್ನು ಮಾಡಿಕೊಂಡರು. ಜೈಭುವನೇಶ್ವರಿ, ಜೈಮೂಕಾಂಬಿಕಾ ಎಂದು ಎಲ್ಲರೂ ಜಯಘೋಷ ಮಾಡಿದರು. ರಕ್ಷಣಾ ಕಾರ್ಯದಲ್ಲಿ ತೊಡಗಿದರು.

ಔರಂಗಜೇಬನ ಮಗನಾದ 'ಅಸಂತಾರು ಮೊಗಲ ಸರದಾರರಾದ ರಣಮಸ್ತುಖಾನ್, ಅಬ್ದುಲ್ಲಾಖಾನ್ ಇವರ ನೇತೃತ್ವದಲ್ಲಿ ಒಂದು ಲಕ್ಷ ಕುದುರೆಯ ಸೈನ್ಯ, ಅದರ ಎರಡರಷ್ಟು ಪದಾತಿ ಸೈನ್ಯ ಕೆಳದಿಯ ರಾಜ್ಯದ

ಮೇಲೆ ಕ್ರಿ. ಶ. ೧೬೯೦ ರಲ್ಲಿ ದಾಳಿಮಾಡಿತು. ಮಲೆನಾಡಿನ ಕನ್ನಡ ವೀರರು ಬಲವಾಗಿ ಮೊಗಲರನ್ನು ಪ್ರತಿಭಟಿಸಿದರು. ಆದರೂ ಶತ್ರುಸೈನ್ಯವು ಅಪಾರವಾಗಿದ್ದುದರಿಂದ ಕೆಳದಿಯ ಸೈನ್ಯವೂ ಹೆಚ್ಚು ನಷ್ಟಕಷ್ಟಗಳನ್ನು ಸೋಸಬೇಕಾಯಿತು. ಶತ್ರುಗಳು ರಾಜಧಾನಿಯ ಕಡೆಗೆ ಬರುವ ಮಾರ್ಗ ವನ್ನು ದುರ್ಗಮವಾಗಿ ಮಾಡಿದರು. ನಾಲ್ಕೂ ಕಡೆಗಳಿಂದ ಶತ್ರುಗಳನ್ನು ಮುತ್ತಿ ಕಾಡಿಸಿದರು. ಶತ್ರುಗಳು ಒಳಗೆ ಬರುವುದಕ್ಕೂ, ಬಂದ ಮೇಲೆ ಹೊರಗೆ ತಪ್ಪಿಸಿಕೊಂಡು ಹೋಗುವುದಕ್ಕೂ ಸಾಧ್ಯವಿಲ್ಲದಂತೆ ಮಾಡಿದರು. ಗಗನ ಚುಂಬಿತಳಾದ ವೃಕ್ಷಗಳಿಂದಲ್ಲೂ, ಬೆಟ್ಟಗಳಿಂದಲೂ ಕೂಡಿದ್ದ ಆ ಘೋರಾರಣ್ಯದಲ್ಲಿ ಮೊಗಲರು ಕಂಗೆಟ್ಟು ಹೋದರು. ಮಲ್ಲಯುದ್ಧದಲ್ಲಿ, ಖಡ್ಗಯುದ್ಧದಲ್ಲಿ ನಿಪುಣರಾಗಿದ್ದ ಮಲೆನಾಡಿನ ವೀರರು ತುರುಕರ ಸೈನ್ಯ ವನ್ನು ಕಬ್ಬಿನ ತೋಟದಂತೆ ಕತ್ತರಿಸ ತೊಡಗಿದರು. ಮೊಗಲರು ದಿಕ್ಕುಗಾಣ ದಂತಾದರು. ತಾವು ಇದುವರೆಗೆ ಮಾಡಿದ ಬಯಲುಸೀಮೆ ಯುದ್ಧಗಳಿಗಿಂತ ಈ ಮಲೆನಾಡಿನ ಯುದ್ಧವು ಅವರಿಗೆ ಭಯಂಕರವೆಂಬಂತೆ ಕಾಣಿಸಿತು. ಮಲೆನಾಡಿನವೀರರು ಮೊಗಲರ ಸೈನ್ಯದ ಆನೆ, ಕುದುರೆ ಫಿರಂಗಿ, ತುಫಾಕಿ ಇತ್ಯಾದಿ ಯುದ್ಧೋಪಕರಣಗಳು ಮೊದಲಾದವುಗಳನ್ನು ಕಿತ್ತುಕೊಂಡರು. ಮೇಲಾಗಿ ದೈವಬಲವು ಬಿದನೂರಿಗೆ ಲಭಿಸಿತು. ಮೊಗಲರ ಸೈನ್ಯವು ಸಂಪೂರ್ಣವಾಗಿ ಸೋತು ಹಿಂದಿರುಗಿತು. ಅಶುಭವಾರ್ತೆಯು ಔರಂಗಜೇಬ ನಿಗೆ ತಿಳಿದು ಅಲ್ಲಾನ ದಯೆ ತನ್ನ ಮೇಲೆ ಇಲ್ಲವಾಯಿತೆಂದು ತಿಳಿದು ನಿರಾಶ ನಾದನು.

ಈ ಪ್ರಸಂಗದಲ್ಲಿ ರಾಣಿ ಚೆನ್ನಮ್ಮಾಜಿಯು ಸ್ವಯಂಖಡ್ಗಪಾಣಿಯಾಗಿ ಕುದುರೆಯನ್ನು ಏರಿ ರಾಜ್ಯದ ಎಲ್ಲೆಗಳಲ್ಲೆಲ್ಲಾ ಓಡಾಡಹತ್ತಿದಳು. ಅವಳ ಧೈರ್ಯಸ್ಥೈರ್ಯಗಳು ಕೆಳದಿಯ ಸೈನಿಕರನ್ನು ಹುರಿದುಂಬಿಸಿದವು. ಅವಳ ಸಾಹಸ ಮತ್ತು ವಿವೇಕಗಳನ್ನು ಕಂಡು ಶತ್ರುಗಳು ಬೆರಗಾದರು. ಮೊಗಲರು ಸಂಪೂರ್ಣವಾಗಿ ಸೋತು ಹಿಂದಿರುಗಿದರು. ಕೆಳದಿಯ ಸೈನ್ಯವು ದಿಗ್ವಿಜಯ ವನ್ನು ಸಾಧಿಸಿತು. ಈ ವಿಜಯವು ಕೆಳದಿಯ ರಾಜ್ಯದಲ್ಲಿ ವಿಶೇಷವಾಗಿ ರಾಣಿ ಚೆನ್ನಮ್ಮಾಜಿಗೂ ಅಪಾರವಾದ ಕೀರ್ತಿ ಗೌರವಗಳನ್ನು ಸಮಗ್ರ

ಭಾರತದಲ್ಲಿ ತಂದುಕೊಟ್ಟಿತು. ಈ ವಿಜಯದ ವರ್ಷವಾದ ಕ್ರಿ. ಶ. ೧೬೯೦ ಕೆಳದಿಯ ರಾಜ್ಯಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲು ಅರ್ಹವಾಯಿತು.

ಹೀಗೆ ಸೋತು ಹೋದ ಸೈನ್ಯವು ನಿರಾಶವಾಗಿ ಕೆಳದಿಯ ರಾಜ್ಯವನ್ನು ಜಯಿಸುವ ಆಸೆಯನ್ನು ತೊರೆದು ಔರಂಗಾಬಾದಿನೆಡೆಗೆ ಹಿಂದಿರುಗಿತು. ಅತ್ತ ಮಹಾರಾಷ್ಟ್ರದಲ್ಲಿಯೂ ಮೊಗಲಾಯರ ವಿರೋಧ ಅಧಿಕವಾಯಿತು. ಇದೇ ಸಂದರ್ಭದಲ್ಲಿ ಔರಂಗಜೇಬನ ಆಯುಷ್ಯವು ಪೂರ್ಣವಾಯಿತು. ಅವನು ಔರಂಗಾಬಾದಿನಿಂದ ದೌಲತಾಬಾದಿಗೆ ಹೋಗುವ ದಾರಿಯಲ್ಲಿ ತನ್ನ ಸೈನ್ಯದ ಪರಾಭವ ಸುದ್ದಿಯನ್ನು ಕೇಳಿ ಹೋಗುತ್ತಿರುವಾಗಲೇ ಮೃತನಾದನು. ಅವನ ಸಮಾಧಿಯು ದೌಲತಾಬಾದಿಗೆ ನಾಲ್ಕು ಮೈಲಿ ದೂರದಲ್ಲಿರುವುದನ್ನು ಇಂದಿಗೂ ನಾವು ಕಾಣಬಹುದು. ಭಾರತದ ಚರಿತ್ರೆಯಲ್ಲಿ ಕ್ರಿ. ಶ. ೧೬೫೮ ರಿಂದ ೧೭೦೭ ರವರೆಗೆ ದರ್ಪದಿಂದ ರಾಜ್ಯಭಾರಮಾಡಿದ ಔರಂಗಜೇಬ ಬಾದಶಹನ ಜೀವನವು ಹೀಗೆ ನಿರಾಶೆಯಿಂದ ದುರಂತದಲ್ಲಿ ಪರ್ಯವಸಾನವಾಗುವುದೆಂಬುದನ್ನು ಯಾರು ತಾನೇ ಅರಿತಿದ್ದರು. ಕೆಳದಿಯ ರಾಜ್ಯವು ಮೊಗಲಾಯರನ್ನು ಸೋಲಿಸಿದ ಈ ದಿನಗಳಿಂದ ದಿಲ್ಲಿಯ ಮೊಗಲಾಯರ ಆಡಳಿತವು ಕಳೆಗುಂದುತ್ತಾ ಬಂದುದನ್ನು ನಾವು ಭಾರತದ ಇತಿಹಾಸದಲ್ಲಿ ಸುಲಭವಾಗಿ ತಿಳಿಯಬಹುದಾಗಿದೆ.

೧೦. ರಾಣಿಯ ಅಭ್ಯುದಯ ಮತ್ತು ತೀರ್ಥಯಾತ್ರೆ

ಕೆಳದಿಯ ರಾಣಿಯ ವಿವೇಕ ಮತ್ತು ರಾಜನೀತಿಗಳ ಫಲವಾಗಿಯೂ, ಕೆಳದಿಯ ಸೈನಿಕರ ಪರಾಕ್ರಮದ ಫಲವಾಗಿಯೂ, ಮೊಗಲಾಯರು ಸೋತು ಓಡಿಹೋಗಿ ಅವರಿಗೆ ದೊರೆತ ಕೀರ್ತಿಗೌರವಗಳ ಫಲವಾಗಿಯೂ ಮೈಸೂರಿನ ಒಡೆಯರಿಗೆ ಕೆಳದಿಯವರ ಮೇಲೆ ಅಸೂಯೆ ಉಂಟಾಯಿತು. ಕೆಳದಿಯು ಮೈಸೂರಿನ ಪ್ರತಿಸ್ಪರ್ಧಿಯಾದ ಒಂದು ಬಲವಾದ ಕನ್ನಡ ರಾಜ್ಯವೆಂಬುದನ್ನು ಮೈಸೂರಿನವರು ಮನಗಂಡರು. ಇಂದಲ್ಲ ನಾಳೆ ಬಿದನೂರಿನ ಸೈನಿಕರು ತಮ್ಮ ರಾಜ್ಯದ ಮೇಲೆ ಕೈಮಾಡಬಹುದೆಂದು ಅವರು ಆಲೋಚಿಸಿದರು. ಆಗ ತಮ್ಮ ಬಲಪ್ರದರ್ಶನವನ್ನು ಕೆಳದಿಯವರ ಮೇಲೆ ತೋರಿಸುವ ಸಲುವಾಗಿ ಪರಾಕ್ರಮಿಯಾದ ದಳವಾಯಿ ತಿಮ್ಮಪ್ಪನ ಸಂಗಡ ಬಲವಾದ ದಂಡನ್ನು ಕೊಟ್ಟು ಕೆಳದಿಯ ರಾಜ್ಯದ ಮೇಲೆ ಲಗ್ಗೆ ಮಾಡುವಂತೆ ಮೈಸೂರಿನ ಪ್ರಭುಗಳು ಅಪ್ಪಣೆ ಕೊಡಿಸಿದರು. ಆಗ ಮೈಸೂರಿನಲ್ಲಿ ಸುಪ್ರಸಿದ್ಧರಾದ ಚಿಕ್ಕದೇವರಾಜ ಒಡೆಯರವರು ರಾಜ್ಯಭಾರ ಮಾಡುತ್ತಿದ್ದರು. ಈ ಸುದ್ದಿ ರಾಣಿ ಚೆನ್ನಮ್ಮಾಜಿ ಕಿವಿಗೆ ಬಿದ್ದಿತು. ಆಕೆಯು ಕೂಡ ತನ್ನ ರಾಜ್ಯ ರಕ್ಷಣೆಗಾಗಿ ಸಿದ್ಧಳಾಗಿ ಪ್ರಬಲವಾದ ಸೈನ್ಯದೊಡನೆ ಹೊರಟಳು.

ಮೊಗಲಾಯರನ್ನು ಸೋಲಿಸಿದ ಕಾರಣ ಕೆಳದಿಯ ಸೈನಿಕರು ವಿಜಯೋನ್ಮತ್ತರಾಗಿದ್ದರು. ರಾಣಿ ಚೆನ್ನಮ್ಮಾಜಿಯು ಇಂದಲ್ಲ ನಾಳೆ ಮೈಸೂರಿನ ಒಡೆಯರು ಕೆಳದಿಯ ರಾಜ್ಯದ ಮೇಲೆ ಅಭಿಯೋಗ ನಡೆಸುವರೆಂಬುದನ್ನು ಊಹಿಸಿದ್ದಳು. ಮೊಗಲಾಯರ ಸೈನ್ಯವು ಬಿಟ್ಟು ಹೋಗಿದ್ದ ಕತ್ತಿ, ಕಠಾರಿ, ಬಂದೂಕ, ಫಿರಂಗಿ, ಆನೆ, ಕುದುರೆ ಮೊದಲಾದ ಕೆಲವು ಯುದ್ಧೋಪಕರಣಗಳು ಕೆಳದಿಯವರ ಕೈವಶವಾಗಿದ್ದುವು. ಇವೆಲ್ಲವುಗಳ ಬಲದಿಂದ ರಾಣಿಯೂ, ಮಂತ್ರಿ ಸುಬ್ಬುನೀಸರೂ, ಮಂತ್ರಿ ಬೊಮ್ಮಯ್ಯನವರೂ ರಾಜಧಾನಿಯ ರಕ್ಷಣೆಯನ್ನು ವಹಿಸಿ ದಂಡನಾಯಕ ಬಸವಯ್ಯ ಸಹಿತ ತಾನೇ ತನ್ನ ಸೈನ್ಯದ ಮುಂದಾಳುವಾಗಿ ಮೈಸೂರಿನವರ ಧಾಳಿಯನ್ನು ಅಡಗಿಸುವ ಸಲುವಾಗಿ ಹೊರಟಳು.

ರಾಣಿ ಚೆನ್ನಮ್ಮಾಜಿಯು ಬಿದನೂರಿನ ನೀಲಕಂಠೇಶ್ವರ ದೇವಾಲಯಕ್ಕೆ ಹೋಗಿ ಶ್ರದ್ಧಾಭಕ್ತಿಯಿಂದ ಪೂಜಾದಿಗಳನ್ನು ಸಲ್ಲಿಸಿದಳು. ವಿಜಯಕ್ಕೆ ಈಶ್ವರಾನುಗ್ರಹವು ಅತ್ಯಗತ್ಯವೆಂದು ಅವಳು ಭಾವಿಸಿದಳು. ಒಳ್ಳೆಯ ವ್ಯಕ್ತಿತ್ವದಿಂದಲೂ, ದೇಹಸೌಂದರ್ಯದಿಂದಲೂ ಕಂಗೊಳಿಸುತ್ತಿದ್ದ ಆ ಮಹಾ ತಾಯಿ ಅಂದು ತನ್ನ ವಿಶಾಲವಾದ ಹಣೆಯಲ್ಲಿ ತನ್ನ ನಿರ್ಮಲ ಮನಸ್ಸಿನ ದರ್ಶನವೋ ಎಂಬಂತಿರುವ ವಿಭೂತಿಯನ್ನು ಧರಿಸಿದ್ದಳು. ಅವಳ ವಿಶಾಲವಾದ ಕರ್ಣಗಳಲ್ಲಿ ವಜ್ರದ ಓಲೆಗಳು ಸೂರ್ಯಚಂದ್ರರಂತೆ ಹೊಳೆಯುತ್ತಿದ್ದುವು ಅವಳ ಕಂಠದಲ್ಲಿ ಶಿವಭಕ್ತಿ ಸೂಚಕವಾದ ಜಪಮಾಲೆಯು ಕಂಗೊಳಿಸುತ್ತಿದ್ದಿತು. ಅವಳು ಯುದ್ಧದ ಸೂಚನೆಯೋ ಎಂಬಂತೆ ಕೆಂಪುಬಣ್ಣದ ರೇಷ್ಮೆ ಸೀರೆಯನ್ನು ಉಟ್ಟಿದ್ದಳು. ಅವಳ ಸೊಂಟದಲ್ಲಿ ವಂಶ ಪಾರಂಪರ್ಯವಾಗಿ ಬಂದ ನಾಗರಮುರಿ ಕತ್ತಿಯು ದರ್ಪದಿಂದ ಜೋತಾಡುತ್ತಿದ್ದಿತು. ಅಂದು ಅವಳು ದೃಢನಿಶ್ಚಯದಿಂದ ವಿಜಯವು ತಮ್ಮ ಪಾಲಿನದು ಎಂಬ ನಿಶ್ಚಯ ಬುದ್ಧಿಯಿಂದ ಹೊರಟಿದ್ದುದರಿಂದ ಅವಳ ಮುಖದಲ್ಲಿ ದರ್ಪ ಮತ್ತು ಧೈರ್ಯದ ಚಿನ್ಹೆಯು ಕಂಡುಬರುತ್ತಿದ್ದಿತು ಅತಿ ಮಂದವೂ, ವೇಗವೂ ಅಲ್ಲದ ಗಂಭೀರವಾದ ನಡಿಗೆಯಿಂದ ಅವಳು ಅಂದು ದೇವಾಲಯಕ್ಕೆ ಆಗಮಿಸಿದಳು. ಅಂದು ನಿಜವಾಗಿಯೂ ನೋಡುವವರ ಕಣ್ಣಿಗೆ ಮಹಿಷಾಸುರ ಮರ್ಧನಕ್ಕಾಗಿ ಹೊರಟ ಶ್ರೀ ಚಾಮುಂಡಿಯಂತೆ ಕಂಗೊಳಿಸಿದಳು ಅತಿ ಭಕ್ತಿಯಿಂದ ಪರಮೇಶ್ವರನ ಸನ್ನಿಧಾನದಲ್ಲಿ ನಿಂತು ತನ್ನ ಪ್ರಾರ್ಥನೆಯನ್ನು ಸಲ್ಲಿಸಿದಳು. ಅಂದು ರಾಣಿಯ ಮುಖದಿಂದ ಹೊರಟ ಮಾತುಗಳು ಉತ್ತಮ ಸಂಸ್ಕೃತಿಯ ನಿದರ್ಶನವಾಗಿದ್ದುವು. "ಪರಮೇಶ್ವರ, ನೀನು ಭಕ್ತಿಪರಾಧೀನ, ಕೆಳದಿಯಲ್ಲಿ ರಾಮೇಶ್ವರನಾಗಿ, ಇಕ್ಕೇರಿಯಲ್ಲಿ ಅಘೋರೇಶ್ವರನಾಗಿ ಬಿದನೂರಿನ ನೀಲಕಂಠೇಶ್ವರನಾಗಿ ನಮ್ಮ ರಾಜ್ಯವನ್ನು ಅನುಗ್ರಹಿಸುತ್ತಿರುವೆ. ಜಗನ್ಮಾತೆಯೂ, ನಿನ್ನ ಅರ್ಧಾಂಗಿಯೂ ಆದ ಪಾರ್ವತೀದೇವಿಯು ಕೊಲ್ಲೂರಿನಲ್ಲಿ ಮೂಕಾಂಬಿಕೆಯೂ ಆಗಿ ನಮ್ಮ ರಾಜ್ಯವನ್ನು ಅನುಗ್ರಹಿಸುತ್ತಿರುವಳು. ನಿನ್ನ ಪ್ರೀತಿಯ ಪುತ್ರನಾದ, ದಕ್ಷಾಧ್ವರಧ್ವಂಸಿಯಾದ ವೀರಭದ್ರನು ಕೆಳದಿಯ ರಾಜ್ಯಪಾಲಕನಾಗಿ ನಿಂತು ಸದಾ ನಮ್ಮನ್ನು ಅನುಗ್ರಹಿಸುತ್ತಿರುವನು. ಕೆಳದಿಯ ರಾಜ್ಯಸ್ಥಾಪನೆ ಮತ್ತು ಅನುಗ್ರಹ ನಿನ್ನ ಕೃಪಾವಲೋಕನದಿಂದ

ಆದುದು. ನಮ್ಮ ಹಿರಿಯರನ್ನು ಕರುಣಿಸಿದ ಪ್ರಭು ನೀನು. ಇಂದು ನಮಗೆ ಮಾರ್ಗದರ್ಶನ ಮಾಡಿ ಕಾಪಾಡುತ್ತಿರುವ ಸ್ವಾಮಿ ನೀನು. ಭಾರತವನ್ನೇ ಆಕ್ರಮಿಸಿರುವ ಪ್ರಬಲ ಮೊಗಲಾಯರ ಸೈನ್ಯವನ್ನು ಓಡಿಸುವ ದಿವ್ಯಶಕ್ತಿಯನ್ನು ಕೆಳದಿಯ ಸೈನಿಕರಿಗೆ ಕೊಟ್ಟ ಮಂತ್ರಗಾರ ನೀನು. ನಾಳಿನವರಾದ ನಮ್ಮ ಸಂತಾನದವರನ್ನು ಕಾಪಾಡುವ ಪ್ರಭು ನೀನು. ರಾಜ್ಯದಲ್ಲಿ ಕಾಲಕಾಲಕ್ಕೆ ಮಳೆ ಬೆಳೆಗಳು ಬಂದು ಜನರು ಸುಭಿಕ್ಷದಿಂದ ಇರುವಂತೆ ಮಾಡಿರುವ ಪ್ರಭು ನೀನು. ಇಂದು ನಮಗೆ ಮಾರ್ಗದರ್ಶನ ಮಾಡಿ ಕಾಪಾಡುತ್ತಿರುವ ಸ್ವಾಮಿ ನೀನು. "ತೇನ ವಿನಾ ತೃಣಮಪಿ ನ ಚಲತಿ" ಎಂಬ ಆರ್ಯೋಕ್ತಿಯು ಸಹಜವಾದುದೇ ಸರಿ. ಕೆಳದಿಯ ಸಮಗ್ರ ಪ್ರಜೆಗಳ ಹೊಣೆಗಾರಿಕೆಯನ್ನು ಹೊತ್ತಿರುವ ನಾನು ಕೇವಲ ನಿನ್ನ ಕರುಣೆಯ ಶಿಶು. ನಿನ್ನ ಕೃಪೆಯಿಲ್ಲದೆ, ನಿನ್ನ ಅನುಗ್ರಹವಿಲ್ಲದೆ ನಾನು ಕ್ಷಣಕಾಲವೂ ಈ ರಾಜ್ಯದ ಹೊರೆಯನ್ನು ಹೊರಲಾರೆನು. ಸ್ವಾಮಿ ಭೃತ್ಯ ನ್ಯಾಯದಂತೆ ನನ್ನ ಜಯಾಪಜಯದ ಕೀರ್ತಿಯೆಲ್ಲವೂ ನಿನಗೆ ಸೇರಿದುದು.

ಇಂದು ನಾನು ಅಡಿಗಡಿಗೆ ರಾಜ್ಯಕ್ಕೆ ಕಿರುಕುಳವನ್ನು ಕೊಡುತ್ತಿರುವ ಮೈಸೂರಿನ ಸೈನ್ಯವನ್ನು ಹಿಮ್ಮೆಟ್ಟಿಸಲು ಹೊರಟಿರುವೆನು. ವಿನಾ ಕಾರಣ ನಮ್ಮ ಪ್ರಜೆಗಳನ್ನು ಮೇಲಿಂದ ಮೇಲೆ ಹಿಂಸಿಸುತ್ತಿರುವ ಈ ನಮ್ಮ ನೆರೆಯ ನಾಡಿನವರಿಗೆ ಬುದ್ಧಿಯನ್ನು ಕಲಿಸಿ ನಮ್ಮ ಪ್ರಜೆಗಳ ಸಂರಕ್ಷಣೆಯನ್ನು ಮಾಡುವುದು ನಮ್ಮ ಕರ್ತವ್ಯ. ಮೊಗಲಾಯರ ಮೇಲೆ ಜಯವನ್ನು ಕೊಟ್ಟ ನೀನು ಮೈಸೂರಿನವರ ಮೇಲೆ ಜಯವನ್ನು ಅನುಗ್ರಹಿಸುವೆಯೆಂದು ನಂಬಿರುತ್ತೇನೆ. ಈ ಯುದ್ಧದಲ್ಲಿಯೂ ಧರ್ಮದ ಬಲ ನಮ್ಮ ಕಡೆಗೇ ಇದೆ. ನಿನ್ನ ಅನುಗ್ರಹವು ನಮ್ಮ ಮೇಲೆಯೇ ಇದೆಯೆಂದು ನನಗೆ ಬಲವಾದ ನಂಬಿಕೆಯಿದೆ. ಭಗವಂತನಾದ ನೀನು ಭಕ್ತಪರಾಧೀನನೆಂಬ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಇಗೋ ಸಚ್ಚಿದಾನಂದರೂಪನಾದ ನಿನ್ನ ಪಾದಾರವಿಂದಗಳಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು. (ಎಂದು ಹೇಳಿ ಭಗವಂತನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುವಳು.)

ರಾಣಿಯ ಈ ಅಮೋಘವಾದ ಬಿನ್ನಹವನ್ನು ಕೇಳಿದ ದೇವಾಲಯದ ಭಕ್ತವೃಂದವು ಆಕೆಯ ದೈವಭಕ್ತಿಗೂ, ಶಾಸ್ತ್ರ ಜ್ಞಾನಕ್ಕೂ, ನಿರ್ಮಲ ಹೃದಯಕ್ಕೂ ಅಶ್ಚರ್ಯಪಟ್ಟರು. ಅವಳ ಪರಿಶುದ್ಧವಾದ ಜೀವನ, ನಿರ್ಮಲವಾದ ದೈವಭಕ್ತಿ, ಅತುಲವಾದ ಪರಾಕ್ರಮ, ಪ್ರಕಾಶಮಯವಾದ ಬುದ್ಧಿಶಕ್ತಿ ಇವುಗಳನ್ನು ಮನವರಿಕೆ ಮಾಡಿಕೊಂಡಿದ್ದ ಜನ ಆಕೆಯನ್ನು ಪಾರ್ವತಿಯ ಅವತಾರವೇ ಎಂದು ಭಾವಿಸಿದರು. ಜನರು ತಮಗುಂಟಾದ ಆನಂದೋದ್ರೇಕದಿಂದ ತಮ್ಮ ಮಹಾರಾಣಿಯನ್ನು—

ರಾಣಿಯ ಗುಣಗೀತೆ

ಜಯತು ಕೆಳದಿಯ ರಾಣಿ ಚನ್ನಮ್ಮಾಜಿ ಕ್ಷತ್ರಿಯ ಪುತ್ರಿಯೆ
ಜಯತು ಸನ್ನುತವಾಣಿ ರಾಜ್ಯದ ಮಾತೆ ಸಜ್ಜನ ಪುತ್ರಿಯೆ ||೧||
ಮಲೆಯ ರಾಜ್ಯವ ರಕ್ಷಿಸುವ ಮೂಕಾಂಬಿಕೆಯ ಪ್ರತಿರೂಪಳೆ
ಸಲೆ ದಿಗಂತ ಖ್ಯಾತಿ ಗಳಿಸಿದ ವೀರಗುಣ ಸಂಪನ್ನಳೆ ||೨||
ಹಿರಿಯ ಸೋಮಶೇಖರನ ಪತ್ನಿಯೆ ಸಕಲ ಬುಧಜನ ರಕ್ಷಯೆ|
ಶರಣಜನ ಸನ್ಮಾರ್ಗಗಾಮಿಯೆ ಶ್ರೇಷ್ಠ ಸಂಯಮ ಶಾಲಿಯೆ ||೩||
ಆ ಶಿವಾಜಿಯ ಪುತ್ರ ರಾಜಾರಾಮನಂ ಕಾಪಾಡಿದೆ|
ಈಶರಾಮೇಶ್ವರನ ಪೂಜಿಸಿ ಲೋಕ ವಿಸ್ತೃತಳೆನಿಸಿದೆ ||೪||
ದುಷ್ಟ ಮೊಗಲರ ಶಿಕ್ಷಿಸುತ್ತಲಿ ಶಿಷ್ಟರಂಪರಿಪಾಲಿಸಿ |
ಸೃಷ್ಟಿಯೊಳು ವಿಖ್ಯಾತಳೆನಿಸದೆ ಕೀರ್ತಿಗಾನವಲಾಲಿಸಿ ||೫||
ರಾಜಧರ್ಮವನರಿದು ಜನಗಳ ಧರ್ಮದಿಂದಲಿ ಪಾಲಿಸಿ|
ತೇಜಗುಣದಿಂ ಮೆರೆದು ರಾಜ್ಯದ ಕೀರ್ತಿಗೌರವ ಹೆಚ್ಚಿಸಿ ||೬||
ವಿಜಯಿಸೌ ಬಿದನೂರು ರಾಣಿಯೆ ಕೀರಕುಲಸಮವಾಣಿಯೆ|
ವಿಜಯಿಸೌ ಇಕ್ಕೇರಿರಾಣಿಯೆ ಪರಮ ಗುಣೆ ಸರ್ವಾಣಿಯೇ ||೭||
ಜಯಿಸು ಕನ್ನಡ ರಾಣಿ ಮಂಜುಳವಾಣಿ ಚೆನ್ನಮ್ಮಾಜಿಯೆ|
ಜಯಿಸು ಸದ್ಗುಣ ಶ್ರೇಣಿ ಆಯುಧಪಾಣಿ ಕೆಳದಿಯ ರಾಣಿಯೆ ||೮||

ಎಂಬಂತೆ ಆವೇಶಯುಕ್ತರಾಗಿ ರಾಣಿಯ ಗುಣಗಾನ ಮಾಡುತ್ತಾರೆ. ಪ್ರಜೆಗಳ ಈ ಭಕ್ತಿಪೂರ್ಣವಾದ ಜಯಘೋಷವನ್ನು ಕೇಳಿ ದೇವಾಲಯದಿಂದ

ಹೊರಬಿದ್ದ ರಾಣಿಯು ಜನತಾ ಜನಾರ್ಧನನಿಗೆ ಕೈಮುಗಿದು ತನ್ನ ಕೃತಜ್ಞತೆಯನ್ನು ಸೂಚಿಸಿ ಸಿದ್ಧವಾಗಿ ನಿಂತಿದ್ದ ಸೈನ್ಯದ ಮುಂದಾಳುತನವನ್ನು ವಹಿಸಿ ರಾಜ್ಯದ ಗಡಿಗೆ ಯುದ್ಧಾಭಿಮುಖವಾಗಿ ಹೊರಡುತ್ತಾಳೆ. ಆಗ ಬಿದನೂರಿನ ಜನ ಜಯಜಯಕಾರ ಮಾಡುತ್ತಾರೆ. ರಾಣಿಯ ಧೀರೋದಾತ್ತ ಗುಣಗಳನ್ನು ನೋಡಿ ಹೆಮ್ಮೆಪಡುತ್ತಾರೆ.

ಮೈಸೂರಿನ ಸೈನ್ಯವು ದಳವಾಯಿ ತಿಮ್ಮಪ್ಪನ ನೇತೃತ್ವದಲ್ಲಿ ಬಂದು ಕೆಳದಿಯ ರಾಜ್ಯದ ಗಡಿಗಳಲ್ಲಿ ಗಲಾಟೆ ಮಾಡುತ್ತಿದೆ. ಆಗ ಕೆಳದಿಯ ಸೈನಿಕರು ಬಿರುಗಾಳಿಯಂತೆ ಬಂದು ಮೈಸೂರಿನ ಸೈನಿಕರ ಮೇಲೆ ಬಿದ್ದು ತುಮುಲಯುದ್ಧವನ್ನು ನಡೆಸುತ್ತಾರೆ. ರಾಣಿಯು ತನ್ನ ಸೈನಿಕರಿಗೆ ಸ್ಫೂರ್ತಿಯನ್ನು ಕೊಡುತ್ತಾ ರಾಜ್ಯದ ಗಡಿಗಳಲ್ಲಿ ಮಿಂಚಿನಂತೆ ಓಡಾಡುತ್ತಿದ್ದಾಳೆ. ಅವಳ ಕೈಗೊಳಗಿನ ನಾಗರಮುರಿ ಖಡ್ಗವು ಆಕೆಗೆ ವಿಜಯದ ದಾರಿಯನ್ನು ತೋರುಸುತ್ತಿದೆ. ವಿಜಯೋನ್ಮತ್ತರಾದ ಕೆಳದಿಯ ಸೈನಿಕರು ವೀರಾವೇಶದಿಂದ ಮೈಸೂರಿನ ಸೈನಿಕರ ಮೇಲೆ ಬಿದ್ದು ಆನೆಗೆ ಆನೆ, ಕುದುರೆಗೆ ಕುದುರೆ, ರಥಕ್ಕೆ ರಥ, ಪದಾತಿಗೆ ಪದಾತಿ ಹೀಗೆ ಖಡಾಖಡಿಯಾಗಿ ಯುದ್ಧ ನಡೆಸುತ್ತಾರೆ. ಒಂದೆರಡು ದಿನಗಳಲ್ಲೇ ಕೆಳದಿಯ ಸೈನಿಕರ ಪರಾಕ್ರಮದಿಂದ ಮೈಸೂರಿನ ಸೈನ್ಯವು ಸೋಲುತ್ತದೆ. ಮೈಸೂರಿನ ದಳವಾಯಿ ತಿಮ್ಮಪ್ಪನು ಕೆಳದಿಯ ದಂಡನಾಯಕ ಬಸಪ್ಪನ ಖಡ್ಗಕ್ಕೆ ಆಹುತಿಯಾದನು. ತಿಮ್ಮಪ್ಪನ ಮಗನನ್ನು ಕೆಳದಿಯ ಸೈನಿಕರು ಸೆರೆಹಿಡಿದರು. ಮೈಸೂರಿನ ಸೈನ್ಯವು ಪರಾಜಯವನ್ನು ಹೊಂದಿಬಂದ ದಾರಿಗೆ ಸುಂಕವಿಲ್ಲವೆಂಬಂತೆ ಓಡಿತು. ರಾಣಿ ಚೆನ್ನಮ್ಮಾಜಿಯು ತಮಗೆ ದೊರೆತ ವಿಜಯದಿಂದ ಸ್ಫೂರ್ತಿಗೊಂಡು ಸೆರೆಸಿಕ್ಕಿದ ದಳವಾಯಿ ತಿಮ್ಮಪ್ಪನ ಮಗನನ್ನು ಊಟೋಪಚಾರಗಳಿಂದ ಸಂತೈಸಿ ಕರುಣೆಯಿಂದ ಕ್ಷಮಾಪಣೆಯನ್ನು ಕೋರಿ ಶ್ರೀರಂಗಪಟ್ಟಣಕ್ಕೆ ಹೋಗಿತಾಯಿಯ ಮುಖವನ್ನು ನೋಡುವಂತೆ ಅನುಗ್ರಹಿಸುತ್ತಾಳೆ. ಚೆನ್ನಮ್ಮಾಜಿಯ ಈ ಕ್ಷಮಾಗುಣವುಶತ್ರುಗಳತಿಂದ್ದ ಮೈಸೂರಿನ ಸೈನಿಕರಿಗೆ ಆ ಮಹಾತಾಯಿಯ ಬಗೆಗೆ ಹೆಚ್ಚು ಗೌರವವನ್ನು ಉಂಟು ಮಾಡುತ್ತದೆ.

ಅತ್ತ ನೊಗಲಾಯರ ಮೇಲೆ ಇತ್ತ ಮೈಸೂರಿನವರ ಮೇಲೆ ವಿಜಯ ಪ್ರಾಪ್ತಿಯಾದ ನಿಮಿತ್ತ ಕೆಳದಿಯ ರಾಜ್ಯವು ಕೊಂಚಕಾಲ ಶತ್ರುಗಳ ಬಾದೆಯಿಂದ ತಪ್ಪಿಸಿಕೊಂಡಿತು. ರಾಜ್ಯದಲ್ಲಿ ಶಾಂತಿಸಮಾಧಾನಗಳು ನೆಲೆಸಿದವು ಅನುಕೂಲವಾದ ಈ ಕಾಲದಲ್ಲಿ ರಾಜ್ಯದ ಪ್ರಜೆಗಳ ಕ್ಷೇಮಚಿಂತನೆಗೆ ಕಾರಣವಾದ ಕೆರೆ, ಕಟ್ಟೆ, ಬಾವಿ, ಕಾಲುವೆ ಮೊದಲಾದವುಗಳ ನಿರ್ಮಾಣ ಕಾರ್ಯದಲ್ಲಿ ತೊಡಗುವಂತೆ ರಾಣಿಯು ನಿರೂಪಕೊಡುತ್ತಾಳೆ. ರಾಜ್ಯದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಂದಿನ ಕಾಲದಲ್ಲಿ ಹೊಣೆಗಾರಿಕೆಯನ್ನು ಹೊತ್ತಿದ್ದ ಮಠಮಾನ್ಯಗಳಿಗೆ ಬೇಕಾದಷ್ಟು ದತ್ತಿಗಳನ್ನು ಕೊಟ್ಟು ಆ ಕಾರ್ಯವನ್ನು ಹುರುಪುಗೊಳಿಸುತ್ತಾಳೆ. ತನ್ನ ಪತಿಯ ಹೆಸರಿನಲ್ಲೂ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ನಿರ್ಮಿಸಿ ಕೊಡುತ್ತಾಳೆ. ಶಿವಮೊಗ್ಗಾ ಜಿಲ್ಲೆಯ ಹುಳಿಕೆರೆ ಎಂಬ ಗ್ರಾಮದಲ್ಲಿ ಪಕ್ಕದ ಗುಡ್ಡದ ಮೇಲೆ ಒಂದು ಕೋಟೆಯನ್ನು ಕಟ್ಟಿಸಿ ಅದಕ್ಕೆ ಚೆನ್ನಗಿರಿಯೆಂದು ನಾಮಕರಣ ಮಾಡುತ್ತಾಳೆ. ಜಂಗಮ ಮಠಗಳಿಗೆ ಭೂಮಿ ಕಾಣಿಗಳನ್ನು ಕೊಟ್ಟು ಅವರು ಧರ್ಮೋದ್ಧಾರ ಕಾರ್ಯದಲ್ಲಿ ನೆರವಾಗುವಂತೆ ಶಾಸನವನ್ನು ಬರೆಸಿಕೊಡುತ್ತಾಳೆ. ನಮ್ಮ ದೇಶದಲ್ಲಿ ಪ್ರಖ್ಯಾತಗಳಾದ ಹಂಪೆ, ಗೋಕರ್ಣ, ಮಹಾಕೂಟ, ಉಡುಪಿ, ಧರ್ಮಸ್ಥಳ, ಶಿವಗಂಗೆ ಮೊದಲಾದ ಪವಿತ್ರ ಕ್ಷೇತ್ರಗಳಿಗೆ ಹೋಗಿ ಅಲ್ಲಿ ವಿಧ್ಯುಕ್ತವಾಗಿ ದಾನಧರ್ಮಗಳನ್ನು ನಡೆಸುತ್ತಾಳೆ. ಹೀಗೆ ತೀರ್ಥಕ್ಷೇತ್ರಗಳ ಸಂಚಾರದಿಂದ ರಾಣಿಯ ಮನಸ್ಸಿನಲ್ಲಿ ಭಕ್ತಿ ಜ್ಞಾನವೈರಾಗ್ಯಗಳು ಕಳೆಗೊಳ್ಳುತ್ತವೆ. ಅವಳ ದೇಹವು ಸಂಸಾರದ ಜಂಬಡದಿಂದಲೂ ರಾಜ್ಯಭಾರದ ಕಷ್ಟಕಾರ್ಪಣ್ಯಗಳಿಂದಲೂ ಜರ್ಝರಿತವಾಗುತ್ತದೆ. ಪ್ರಾಜ್ಞಳಾದ ಅವಳು ತನ್ನ ಸ್ಥಿತಿಯನ್ನು ಅರಿಯುತ್ತಾಳೆ. ತನಗೆ ಮರಣವು ಸನ್ನಿಹಿತವಾಯಿತೆಂದು ಶಿವಶರಣೆಯಾದ ಅವಳಿಗೆ ಭಾಸವಾಗುತ್ತದೆ. ಅವಳು ಮಗನಾದ ಬಸವಪ್ಪ ನಾಯಕನನ್ನು ತನ್ನ ಸನ್ನಿಧಿಗೆ ಬರಮಾಡಿಕೊಂಡು ಈ ಮುಂದೆ ಹೇಳುವಂತೆ ಉಪದೇಶ ಮಾಡುತ್ತಾಳೆ. "ಯುವರಾಜ, ನನ್ನ ದೇಹವು ಪ್ರಕೃತಿ ಧರ್ಮಕ್ಕೆ ಅನುಗುಣವಾಗಿ ಸವೆಯುತ್ತಾ ಬರುತ್ತಿದೆ. ನಾನು ಇನ್ನು ಹೆಚ್ಚು ಕಾಲ ಬದಕಲಾರೆನೆಂದು ನನ್ನ ಅಂತರವಾಣಿ ಹೇಳುತ್ತದೆ. ರಾಜ್ಯಸ್ಥಾಪಕರಾದ ಪೂಜ್ಯ ಚೌಡಪ್ಪ

ನಾಯಕರಿಂದ ಪರಂಪರಾಗತವಾಗಿ ಬಂದ ಸಿಂಹಾಸನವನ್ನು ಅಲಂಕರಿಸಿದ ನಾನು ಮನೆತನದ ಗೌರವವನ್ನೂ, ರಾಜಧರ್ಮವನ್ನೂ ಅನುಲಕ್ಷಿಸಿ ಇದುವರೆಗೆ ರಾಜ್ಯಭಾರವನ್ನು ಮಾಡುತ್ತಾ ಬಂದಿದ್ದೇನೆ. ಇನ್ನು ಅನತಿ ಕಾಲದಲ್ಲೇ ನೀನು ರಾಜ್ಯದ ಭಾರವನ್ನು ವಹಿಸಿಕೊಳ್ಳಬೇಕಾಗುತ್ತದೆ. ನಿನಗೆ ರಾಜೋಚಿರವಾದವಿದ್ಯೆಯನ್ನು ದೊಡ್ಡ ದೊಡ್ಡ ವಿದ್ವಾಂಸರಿಂದ ಹೇಳಿಸಿದ್ದೇನೆ. ಮತಾಚಾರದ ತತ್ವಗಳನ್ನು ನೀನು ಗುರುಗಳ ಮುಖದಿಂದ ಕೇಳಿ ತಿಳಿದಿರುವೆ. ರಾಜಪದವಿಯು ಬಹಳ ದೊಡ್ಡದು ಹಾಗೂ ಕಷ್ಟಕರವಾದುದು. ರಾಜನು ಒಮ್ಮೆ ಹೂವಿನ ಹಾಸಿಗೆಯಲ್ಲೂ, ಇನ್ನೊಮ್ಮೆ ಮುಳ್ಳಿನ ಹಾಸಿಗೆಯಲ್ಲೂ ಮಲಗಬೇಕಾಗುತ್ತದೆ. ಇಂದು ಇಂದ್ರಸುಖವನ್ನು ಅನುಭವಿಸುವವನು ನಾಳೆ ಅತಿಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಬೇವು ಬೆಲ್ಲಗಳಂತೆ ಸುಖದುಃಖಗಳನ್ನು ಸ್ವೀಕರಿಸುವ ಮನೋಭಾವವನ್ನು ನೀನು ಬಳಸಿಕೊಳ್ಳಬೇಕು. ರಾಜ್ಯದ ಎಲ್ಲ ಪ್ರಜೆಗಳನ್ನು ಸಮಾನವಾಗಿ ಕಾಣಬೇಕು. ಶತ್ರುಗಳನ್ನು ಸದೆಬಡಿಯುವ, ವಿದ್ವಾಂಸರನ್ನು ಪ್ರೋತ್ಸಾಹಿಸುವ, ಸಾಧುಸಂತರನ್ನು ಸಂರಕ್ಷಿಸುವ, ಸ್ತ್ರೀಯರನ್ನು ಗೌರವಿಸುವ, ದೀನಾನಾಥರನ್ನು ಕಾಪಾಡುವ, ಮಕ್ಕಳನ್ನು ಮಮತೆಯಿಂದ ಕಾಣುವ ಈ ರಾಜಧರ್ಮಗಳಲ್ಲಿ ನೀನು ಸದಾ ಜಾಗ್ರತನಾಗಿರಬೇಕು. ನಮ್ಮ ಹಿರಿಯರಾದ ಚೌಡಪ್ಪನಾಯಕರು, ಸದಾಶಿವನಾಯಕರು, ವೆಂಕಟಪ್ಪನಾಯಕರು ದೊಡ್ಡ ಸಂಕಣ್ಣನಾಯಕರು, ಶಿವಪ್ಪನಾಯಕರುಗಳ ಉದಾತ್ತ ಚರಿತ್ರೆಯನ್ನು ನೀನು ಚೆನ್ನಾಗಿ ಅರಿತಿರಬೇಕು. ಅವರ ಕೀರ್ತಿಗೌರವಗಳಿಗೆ ಕುಂದು ತರುವ ಕಾರ್ಯವನ್ನು ನೀನು ಮಾಡಬಾರದು. ನಿನ್ನ ತಂದೆ ಹಿರಿಯ ಸೋಮಶೇಖರ ನಾಯಕರು ಉದಾರ ಮನಸ್ಕರೂ ಸಚ್ಚರಿತರೂ ಆಗಿದ್ದರು. ಆದರೆ ಶತ್ರುಗಳ ಮೋಸಕ್ಕೆ ಸಿಕ್ಕಿ ಅವರು ಅಪಮೃತ್ಯುವಿನಿಂದ ಶಿವನ ಪಾದಾರವಿಂದವನ್ನು ಬೇಗ ಸೇರಿದರು. ಅದರ ಫಲವಾಗಿ ನಾನು ರಾಜಧರ್ಮವನ್ನು ನಡೆಸಿದ್ದೇನೆ. ಇನ್ನು ಮುಂದೆ ರಾಜ್ಯಭಾರವನ್ನು ನೀನು ವಹಿಸಿಕೊಳ್ಳಬೇಕಾಗಬಹುದು. ಅದಕ್ಕೆ ಸಿದ್ಧನಾಗಿರು. ವಿಪುಲ ಸದ್ಗುಣ ಸಂಪನ್ನನೂ ಸಕಲ ಶಾಸ್ತ್ರವಿಶಾರದನೂ, ಶಿವಭಕ್ತಿ ಪರಾಯಣನೂ ಆದ ನಿನಗೆ ಉಜ್ವಲ ಭವಿಷ್ಯವಿದೆ ಎಂದು ನಾವು ನಂಬಿದ್ದೇವೆ. ನಿನ್ನ ಶರೀರವು ಪಾಪಕಾರ್ಯಗಳನ್ನು

ಸೋಂಕದಿರಲಿ. ನಿನ್ನ ಮನಸ್ಸು ಪರ ಹಿಂಸೆಯಲ್ಲಿ ತೊಡಗದಿರಲಿ. ನಿನ್ನ ಆತ್ಮ ಸದಾ ಪರಮೇಶ್ವರನ ಚಿಂತನೆಯಲ್ಲಿ ನೆಲಸಲಿ. ಪ್ರಜೆಗಳ ಸುಖಗಳೇ ನಿನ್ನ ಸುಖದುಃಖಗಳೆಂದು ತಿಳಿದಿರು. ನಿನ್ನಿಂದ ಕೆಳದಿಯ ರಾಜ್ಯಗೌರವಗಳು ಶತಾಧಿಕ ವಾಗಿ ಬೆಳಗಲಿ. ಇಗೋ, ಇದು ನಿನ್ನ ಒಲುಮೆಯ ತಾಯಿಯಾದ ನನ್ನ ಆಶೀರ್ವಾದ. ನೀನು ಚಿರಂಜೀವಿಯಾಗಿ ಬಾಳು" ಎಂದು ಹೇಳಿ ಮಗನ ತಲೆಯ ಮೇಲೆ ತನ್ನ ವರದ ಹಸ್ತವನ್ನು ಇಟ್ಟು ಆಶೀರ್ವದಿಸುವಳು. ಆಕೆಯ ಕಣ್ಣು ಗಳಲ್ಲಿ ಆನಂದಬಾಷ್ಪ ಬರುತ್ತವೆ. ಯುವರಾಜ ಬಸವಪ್ಪನಾಯಕನು ತಾಯಿಯ ಉಪದೇಶಾಮೃತವನ್ನು ಲಾಲಿಸಿ ಅವಳ ಪವಿತ್ರವಾದ ಎರಡು ಪಾದಗಳನ್ನು ಹಿಡಿದು ನಮಸ್ಕರಿಸಿ "ಅಮ್ಮಾ, ನಿನ್ನ ಈ ಉಪದೇಶವನ್ನು ನಾನು ಸದಾ ಸ್ಮರಣೆಯಲ್ಲಿಟ್ಟು ನಡೆಯುವೆನು. ನನ್ನ ಮನೆತನದ ಕೀರ್ತಿ ಗೌರವಗಳಿಗೆ ತಪ್ಪದಂತೆ ನಡೆಯುವೆನು. ರಾಜಧರ್ಮಗಳನ್ನು ನಡೆಸುವೆನು. ನಿನ್ನ ಪಾದಗಳನ್ನು ಮುಟ್ಟಿ ಪ್ರಮಾಣಮಾಡಿ ಹೇಳುತ್ತೇನೆ. ಮಹಾ ರಾಣಿಯೂ, ಪತಿವ್ರತಾಶಿರೋಮಣಿಯೂ, ಶಿವಶರಣೆಯೂ ಆದ ನಿನ್ನ ಆಶೀರ್ವಾದ ನನ್ನ ಹೃದಯ ಮಂದಿರದಲ್ಲಿ ಪ್ರತಿಧ್ವನಿಸುತ್ತಿದೆ. ನನ್ನ ಉಜ್ವಲವಾದ ಭವಿಷ್ಯಕ್ಕೆ ನಿನ್ನ ಉಪದೇಶವು ತುಂಬಾ ಸಹಾಯಕವಾಗಿದೆ" ಎಂದು ಹೇಳಿ ತಾಯಿಯ ಪಾದಗಳಿಗೆ ನಮಸ್ಕರಿಸುವನು.

ಕಾಲಕ್ರಮದಲ್ಲಿ ಚೆನ್ನಮ್ಮಾಜಿಗೆ ಶಿವಭಕ್ತಿಯೂ ವೈರಾಗ್ಯವೂ ಅಧಿಕ ಗೊಳ್ಳುವುದು. ನಶ್ವರವಾದ ಈ ದೇಹವು ಇಂದಲ್ಲ ನಾಳೆ ಹೋಗತಕ್ಕದ್ದೆಂಬು ದನ್ನು ಅರಿತ ಆ ರಾಣಿಯು ಸದಾ ಶಿವಪೂಜೆ ಶಿವಧ್ಯಾನದಲ್ಲಿ ನಿರತಳಾಗುವಳು. ಕಡೆಗೆ ಮನಶ್ಯಾಂತಿಯನ್ನು ಬಯಸಿದ ಅವಳು ಬಿದನೂರನ್ನು ಬಿಟ್ಟು ರಾಜ್ಯದ ಹೊಣೆಗಾರಿಕೆಯನ್ನು ಯುವರಾಜನಿಗೂ, ಮಂತ್ರಿ ದಂಡನಾಯಕರಿಗೂ ವಹಿಸಿ ಪ್ರಶಾಂತವಾದ ಭುವನಗಿರಿ ದುರ್ಗದಲ್ಲಿ ಇರತೊಡಗಿದಳು. ಅವಳ ಮನಸ್ಸು ಕ್ರಮಕ್ರಮವಾಗಿ ಲೌಕಿಕದಿಂದ ದೂರವಾಗಿ ಪರಮಾರ್ಥದ ಕಡೆಗೆ ಹರಿಯಿತು. ಅವಳು ನಶ್ವರವಾದ ಈ ರಾಜ್ಯ ಭೋಗಗಳನ್ನು ಸ್ವಪ್ನವೆಂದು ತಿಳಿದಳು. ಶಾಶ್ವತವಾದ ಭಗವಂತನ ರಾಜ್ಯವನ್ನು ಬಯಸಿದಳು. ಅವಳ ಹಿರಿಯ ಬಯಕೆಗೆ ಅನುಗುಣವಾಗಿ ಕ್ರಿ. ಶ. ೧೬೯೬ರಲ್ಲಿ ಅವಳು ಶಿವನಪಾದವನ್ನು

ಸೇರಿದಳು. ಅವಳ ಭೌತಿಕ ದೇಹವು ಪಂಚಭೂತಗಳಲ್ಲಿ ಲೀನವಾಯಿತು. ಅವಳ ಪವಿತ್ರಾತ್ಮ ಭಗವಂತನಲ್ಲಿ ಐಕ್ಯವಾಯಿತು. ಅವಳ ಚರಿತ್ರೆಯು ಇತಿಹಾಸದಲ್ಲಿ ಶಾಶ್ವತವೆನಿಸಿತು. ಕೆಳದಿ ನೃಪವಿಜಯದಲ್ಲಿ ಕವಿ ಲಿಂಗಣ್ಣನು ಈ ಮಹಾತಾಯಿಯನ್ನು ಕುರಿತು ಹೀಗೆ ಹೇಳಿದ್ದಾನೆ:—

ಉನ್ನತ ಶುಭಗುಣಗಣಸಂ|
ಪನ್ನತೆಯಿಂ ಕ್ಷಾತ್ರದಾನ ಧರ್ಮಾದಿಗಳಿಂ||
ಚೆನ್ನಮ್ಮಾಜಿಗೆ ಸರಿಯುಹ|
ಮನ್ನೆಯರಿಲ್ಲೆನಿಸಿ ರಾಜ್ಯಮಂ ರಕ್ಷಿಸಿದಳ್||

ಸುಪ್ರಸಿದ್ಧ ಇತಿಹಾಸಕಾರರಾದ ಡಾ|| ಬಿ. ಎಸ್. ಸಾಲೆತೊರೆಯವರು ಚೆನ್ನಮ್ಮಾಜಿಯನ್ನು ಕುರಿತು ಹೀಗೆ ಹೇಳಿದ್ದಾರೆ: —

ಸೋಮಶೇಖರ ನಾಯಕರ ಪತ್ನಿ ಚೆನ್ನಮ್ಮಾಜಿಯು (೧೬೭೧–೧೬೯೭) ಶಿವಾಜಿಯ ಮಗ ರಾಜಾರಾಮನು ಮೊಗಲರಿಂದ ತಲೆತಪ್ಪಿಸಿಕೊಂಡಿದ್ದಾಗ ಅವನಿಗೆ ಆಶ್ರಯ ಕೊಟ್ಟು, ರಾಜಾರಾಮನು ತನ್ನ ದೇಶಕ್ಕೆ ತಪ್ಪಿಸಿಕೊಂಡು ಹೋಗಲು ಸಹಾಯಮಾಡಿದಳು. ಇದು ಇಂಡಿಯದ ಭವಿಷ್ಯದ ಮೇಲೆ ತುಂಬಾ ಪರಿಣಾಮಕಾರಿಯಾಗಿದ್ದಿತು. ಕೆಳದಿಯ ರಾಣಿ ಓಡಿ ಬಂದ ಮಹಾರಾಷ್ಟ್ರ ಕುಮಾರನಿಗೆ ಆಶ್ರಯಕೊಟ್ಟು ಉತ್ತರದಲ್ಲಿ ಮಹಾರಾಷ್ಟ್ರರ ಆಳಿಕೆ ಉಳಿಯುವಂತೆ ಮಾಡಿದಳು. ಹೀಗೆ ಮುಸ್ಲಿಮರು ಹಿಂದುಗಳನ್ನು ಜಯಿಸಿದಂತೆ ಅವರನ್ನು ಮತ್ತೊಮ್ಮೆ ಪಾರುಮಾಡಿದ್ದು ಕರ್ಣಾಟಕವೆ! (ಕನ್ನಡ ನಾಡಿನ ಚರಿತ್ರೆ ಪುಟ ೮೫–೮೬)

ಸುಪ್ರಸಿದ್ಧ ಕನ್ನಡ ಗ್ರಂಥಕಾರರಾದ ದಿವಂಗತ ಎಂ. ಎಸ್. ಪುಟ್ಟಣ್ಣನವರು ರಾಣಿ ಚೆನ್ನಮ್ಮಾಜಿಯನ್ನು ಕುರಿತು ಹೇಳಿರುವ ಮಾತುಗಳು ಇಲ್ಲಿ ಗಮನಾರ್ಹವಾಗಿವೆ. ಚೆನ್ನಮ್ಮಾಜ್ಜಿಯು ಬಹು ಸಮರ್ಥಳು. ಒಳ್ಳೆಯ ಗುಣಾಢ್ಯಳು. ಈಕೆ ರಾಜ್ಯಭಾರವನ್ನು ಸರಿಯಾಗಿ ನಡೆಸಿದಳು. ಪತಿಯ ಮರಣಾನಂತರ ರಾಜ್ಯಭಾರವನ್ನು ವಿವೇಕವಾಗಿ ಮಾಡಿದಳು. ಆಗ ದಳಪತಿಗಳೂ, ಮಂತ್ರಿಗಳೂ ಆಗಿದ್ದ ದುಷ್ಟರಲ್ಲಿ ಜಗಳ ಹುಟ್ಟಿತು. ಸಂಸ್ಥಾನದ ಶತ್ರುಗಳು ಬಿಜಾಪುರದವರನ್ನು ಎತ್ತಿ ಕಟ್ಟಿದರು. ಚೆನ್ನಮ್ಮಾಜಿಯು ಇವರನ್ನೆಲ್ಲಾ ದಾರಿಗೆ ತಂದು ಅವರುಗಳನ್ನು ಕ್ಷಮಿಸಿ ಬಿಗಿಯಾಗಿ ರಾಜ್ಯಭಾರ

ಮಾಡಲು ಆರಂಭಿಸಿದಳು. ಮರಾಠಿಯವರ ರಾಜಾರಾಮನು ಮೊಗಲರ ಕಾಟವನ್ನು ತಡೆಯಲಾರದೆ ಈ ಸಂಸ್ಥಾನಕ್ಕೆ ಬರಲು ಅವರನ್ನು ಬಿಟ್ಟುಕೊಡದೆ ರಾಜಧರ್ಮವನ್ನು ಅನುಸರಿಸಿ ಅವನನ್ನು ಕಾಪಾಡುವುದಕ್ಕೋಸ್ಕರ ಆಶ್ರಯ ಕೊಡಲು ಔರಂಗಜೇಬನ ಭಾರಿ ಸೈನ್ಯವು ಬಂದು ಇಕ್ಕೇರಿ ರಾಜ್ಯಕ್ಕೆ ಮುತ್ತಿಗೆ ಹಾಕಿತು. ಆಗ ಈ ರಾಣಿಯು ಸಂಸ್ಥಾನದ ಚಮೂಪತಿಗಳ ಮುಖಾಂತರ ವಾಗಿ ಎಲ್ಲಾ ಕಡೆಗಳಲ್ಲೂ ದಿಗ್ವಿಜಯ ಮಾಡಿಕೊಂಡು ಬಂದಿದ್ದ ಆ ತುರುಕ ರನ್ನು ಕಾಡಿನಲ್ಲಿ ಸೇರಿಸಿಕೊಂಡು ಅಲ್ಲಾಡಲು ಆಸ್ಪದವಿಲ್ಲದಂತೆ ನಿರ್ಮೂಲವಾಗಿ ಸೋಲಿಸಿದಳು. ಮೊಗಲಾಯರಿಗೆ ಇಲ್ಲಿ ಆದ ಅಪಜಯ, ಅಪಮಾನ ಎಲ್ಲಿಯೂ ಆಗಲಿಲ್ಲ. ಹೀಗೆ ಬಹುದೂರ ದೃಷ್ಟಿಯಿಂದ ಯೋಚನೆಮಾಡಿ ರಾಜವಂಶಕ್ಕೆ ಸಮೀಪ ಬಂಧುವಾದ ಒಬ್ಬ ಬಾಲಕನನ್ನು ಸರ್ವಸಮ್ಮತಿಯಿಂದ ದತ್ತುಮಾಡಿ ಕೊಂಡಳು. ಅನೇಕ ದೇವರ ಸೇವೆಗಳನ್ನು ಧರ್ಮಕಾರ್ಯಗಳನ್ನು ಈಕೆ ಮಾಡಿದಳು. ರಾಜಕಾರ್ಯೋದ್ಯೋಗ, ಯುದ್ಧಾಭಿನಿವೇಶನ, ದೂರದೃಷ್ಟಿ, ಧರ್ಮಾಚರಣೆ, ಸರ್ವತ್ರ ಸಮದೃಷ್ಟಿ, ಭೂತದಯೆ, ಔದಾರ್ಯ ಇವೇ ಮೊದ ಲಾದ ಸದ್ಗುಣಗಳು ಈ ಚೆನ್ನಮ್ಮಾಜಿಯಲ್ಲಿ ವಿಶೇಷವಾಗಿದ್ದುವು. ದೇಶದೇಶ ಗಳ ಚರಿತ್ರೆಗಳಲ್ಲಿ ಹೆಂಗಸರಿಗೆ ದೊರೆತನ ಬಂದುದು ಕಡಿಮೆ. ಆದರೆ ಎಲ್ಲೆಲ್ಲಿ ಹಾಗೆ ಸರ್ವಾಧಿಕಾರ ಪ್ರಾಪ್ತವಾಗಿದೆಯೋ ಅಲ್ಲಿನವರೆಲ್ಲರೂ ಸದ್ಗುಣಶೀಲೆಯ ರೆಂದು ಭಾವಿಸುವುದು ಸಂಭಾವಿತವಲ್ಲದಿದ್ದರೂ ಸಾಧಾರಣವಾಗಿ ಹೆಂಗಸರ ದವಲತ್ತು ಬಹಳ ಯೋಗ್ಯವಾಗಿಯೇ ನಡೆದಿದೆ. ವಿಕ್ಟೋರಿಯಾ ಮಹಾ ರಾಜ್ಞಿ, ಚಾಂದಬೀಬಿ, ಅಹಲ್ಯಾಬಾಯಿ ಮೊದಲಾದ ಹೆಂಗಸರಂತೂ ಲೋಕೋತ್ತರವಾಗಿ ಆಡಳಿತ ನಡೆಸಿರುವುದು ಸರ್ವರಿಗೂ ಗೊತ್ತು. ಒಟ್ಟಿ ನಲ್ಲಿ ಚೆನ್ನಮ್ಮಾಜಿಯೂ ಅತ್ಯಂತ ಸದ್ಗುಣಸಂಪನ್ನೆಯೆನಿಸಿದ ರಾಣಿಯೆನಿಸಿ ದಳು. ಇಕ್ಕೇರಿ ಸಂಸ್ಥಾನದ ಚರಿತ್ರೆ (ಪುಟ ೧೨೧) ಕಥಾನಾಯಕಿಯಾದ ರಾಣಿ ಚೆನ್ನಮ್ಮಾಜಿಯ ಹಿರಿಮೆಗೆ ಮೇಲ್ಕಂಡ ವಿದ್ವಾಂಸರ ಅಭಿಪ್ರಾಯಕ್ಕಿಂತ ಯೋಗ್ಯತಾ ಪತ್ರ ಇನ್ನು ಏನು ತಾನೇ ಬೇಕಾಗಿದೆ.

೧೧– ಹಿರಿಯ ಬಸವಪ್ಪನಾಯಕ

ಚೆನ್ನಮ್ಮಾಜಿಯ ಮರಣಾನಂತರ ಕ್ರಿ. ಶ. ೧೬೯೭ ರಲ್ಲಿ ಆಕೆಯ ದತ್ತು ಪುತ್ರನಾದ ಹಿರಿಯ ಬಸವಪ್ಪನಾಯಕನಿಗೆ ಬಿದನೂರಿನ ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಆಗಿನ ಕಾಲದಲ್ಲಿ ರಾಜ್ಯಕ್ಕೆ ತಾವು ಹಕ್ಕುದಾರರು, ನಾವು ಹಕ್ಕುದಾರರು ಎಂದು ರಾಜದ್ರೋಹಿಗಳನೇಕರು ಚಳುವಳಿಯನ್ನು ಆರಂಭಿಸಿದರು. ರಾಜನೀತಿಯನ್ನು ಬಲ್ಲ ಹಿರಿಯ ಬಸವಪ್ಪನಾಯಕನು ಶತ್ರು, ಸಾಲ, ಬೆಂಕಿ ಇವುಗಳ ಶೇಷವು ಸ್ವಲ್ಪವಾದರೂ ಪರಿಣಾಮದಲ್ಲಿ ಅಪಾಯಕಾರಿ ಎಂಬುದನ್ನು ಅರಿತು ಆ ಶತ್ರುಗಳನ್ನೆಲ್ಲಾ ಉಪಾಯಾಂತರದಿಂದ ಹಿಡಿತರಿಸಿ ಅವರನ್ನು ಉಗ್ರವಾಗಿ ಶಿಕ್ಷಿಸಿದನು. ರಾಜಸಿಂಹಾಸನವನ್ನು ಪಡೆಯುವಾಗ ಇಂತಹ ಸನ್ನಿವೇಶಗಳು ಚರಿತ್ರೆಯಲ್ಲಿ ಅನಿವಾರ್ಯವೆಂದು ತೋರುತ್ತದೆ. ಇವನ ಕಾಲದಲ್ಲಿ ರಾಜ್ಯವು ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಮತ್ತು ಕಾರವಾರ ಜಿಲ್ಲೆಗಳನ್ನು ವ್ಯಾಪಿಸಿತು. ಅಕ್ಕಪಕ್ಕದ ಪಾಳೆಯಗಾರರು ಕೆಳದಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಕರ್ನಾಟಕದ ಪಾಳೆಯಗಾರರ ಪಂಙ್ತಿಯಲ್ಲಿ ಕೆಳದಿಯವರೇ ಅತ್ಯಂತ ಶ್ರೇಷ್ಠರೆನಿಸಿಕೊಂಡು ಮೆರೆಯುತ್ತಿದ್ದರು. ಆದುದರಿಂದಲೇ ಇವರನ್ನು ರಾಜರೆಂದು ಭಾವಿಸುತ್ತಿದ್ದರು ಪಶ್ಚಿಮ ಸಮುದ್ರದತೀರ ಗೋವೆಯಿಂದ ಕಾಸರಗೋಡಿನವರೆಗೆ ಕೆಳದಿಯ ರಾಜರಿಗೆ ಸೇರಿದ್ದಿತು. ಇವರನ್ನು ಪಶ್ಚಿಮ ಸಮುದ್ರಾಧೀಶ್ವರರೆಂದು ಕವಿಗಳು ಕರೆದಿರುವರು.

ಹಿರಿಯ ಬಸಪ್ಪನಾಯಕನು ತನ್ನ ರಾಜ್ಯ ವ್ಯವಸ್ಥೆಯ ಕಡೆಗೆ ಜೆಚ್ಚಾಗಿ ಗಮನಿಸಿದನು. ಇವನು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ದೊಡ್ಡ ವಿದ್ವಾಂಸನೆನಿಸಿದ್ದನು. ಇವನು ಸಂಸ್ಕೃತ ಭಾಷೆಯಲ್ಲಿ ಶಿವತತ್ವ ರತ್ನಾಕರ, ಸುಭಾಷಿತ ಸುರದ್ರುಮ, ಸೂಕ್ತಿ ಸುಧಾಕರ ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ಶಿವತತ್ವರತ್ನಾಕರವು ಜಗತ್ತಿನ ಎಲ್ಲ ವಿಷಯಗಳನ್ನೂ ಒಳಗೊಂಡ ವಸ್ತುಕೋಶ (Encyclopaedia of Sanskrit) ಎನಿಸಿದೆ.

ವನಿಗೆ "ಸೂರಿಸಿಕರ ಕಲ್ಪದ್ರುಮ" ಕೋಟೆಕೋಲಾಹಲ, ರಾಜಾಧಿರಾಜ ಮೊದಲಾದ ಬಿರುದುಗಳಿವೆ. ಇವನು ರಾಜ್ಯದಲ್ಲಿ ಮಠಮಾನ್ಯಗಳನ್ನು ಕಟ್ಟಿಸುವುದು, ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸುವುದು, ಸಾಹಿತ್ಯ ಸಂಸ್ಕೃತಿ ಪ್ರಸಾರಮಾಡುವುದು ಮೊದಲಾದುದಕ್ಕೆ ಹೆಚ್ಚುಗಮನವಿತ್ತನು. ಈ ರಾಜನು ಸ್ವಯಂ ಪಂಡಿತನಾಗಿಯೂ, ವಿದ್ವಜ್ಜನರಿಗೆ ಆಶ್ರಯಭೂತನಾಗಿಯೂ ಇದ್ದನು. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ಬ್ರಾಹ್ಮಣರನ್ನೂ, ಜಂಗಮರನ್ನೂ ಕರೆದು ಅವರನ್ನು ಪೂಜಿಸಿ ಉದಾರವಾಗಿ ಧನಕನಕಗಳನ್ನು ನೀಡುತ್ತಿದ್ದನು. ಸಾದುಸಂತರೂ, ಸನ್ಯಾಸಿಗಳೂ, ಫಕೀರರು ಇವರ ವಿಷಯ ದಲ್ಲಿ ಈತನಿಗೆ ತುಂಬಾ ಅಭಿಮಾನವಿದ್ದಿತು. ಇವನು ರಾಜ್ಯದಲ್ಲೆಲ್ಲಾ ಧರ್ಮಛತ್ರಗಳನ್ನೂ ಏರ್ಪಡಿಸಿದನು. ಬೇಸಿಗೆ ಕಾಲದಲ್ಲಿ ಅರವಟ್ಟಿಗೆಗಳನ್ನು ಇಡಿಸಿ ನೀರನ್ನು, ಶಿವದಾನ (ಮಜ್ಜಿಗೆ)ಯನ್ನೂ ಕೊಡಿಸುತ್ತಿದ್ದನು. ಬಡ ವಿದ್ಯಾರ್ಥಿಗಳನ್ನು ಕರೆಸಿ ಅವರಿಗೆ ಉದಾರವಾಗಿ ಧನವನ್ನೂ, ವಸ್ತ್ರದಾನ ವನ್ನೂ ಮಾಡುತ್ತಿದ್ದನು. ಈತನು ವೇಣುಪುರಿಯ ನದಿಗೆ ಸೇತುವೆಯನ್ನು ಕಟ್ಟಿಸಿದನು. ಪಶ್ಚಿಮ ಸಮುದ್ರ ತೀರದಲ್ಲಿ ನವಲೇಗಡ ಎಂಬಲ್ಲಿ ಬಸವರಾಜ ದುರ್ಗವೆಂಬ ಕೋಟೆಯನ್ನು ತನ್ನ ಹೆಸರಿನಲ್ಲಿ ಕಟ್ಟಿಸಿದನು. ಅದನ್ನು ಈಗಲೂ ನಾವು ನೋಡಬಹುದು. ಮೈಸೂರಿನವರ ಮೇಲೆ ಯುದ್ಧಮಾಡಿ ಅರಕಲ ಗೂಡನ್ನು ವಶಪಡಿಸಿಕೊಂಡನು. ಗೋವೆಯಲ್ಲಿ ನೆಲಸಿ ಅಕ್ಕಪಕ್ಕದ ಊರುಗಳ ಮೇಲೆ ಅಭಿಯೋಗ ಮಾಡುತ್ತಿದ್ದ ಪೋರ್ಚುಗೀಸರನ್ನು ಸದೆ ಬಡಿದು ಅವರು ಕದ್ದು ಮಾರದಂತೆ ಶಾಸನವನ್ನು ಮಾಡಿದನು. ಕೆಳದಿಯಲ್ಲಿ ವೀರಭದ್ರ ದೇವಾಲಯಗಳನ್ನು ಪೂರ್ಣಗೊಳಿಸಿದನು. ಬ್ರಾಹ್ಮಣರಿಗೂ ವಿದ್ವಾಂಸರಿಗೂ ಹಲವಾರು ಅಗ್ರಹಾರಗಳನ್ನು ನಿರ್ಮಿಸಿಕೊಟ್ಟನು. ಒಟ್ಟಿನಲ್ಲಿ ಈತನ ಕಾಲವು ದಾನಧರ್ಮಪರೋಪಕಾರಗಳಲ್ಲಿ ನಡೆಯಿತು. ಅಗತ್ಯಬಿದ್ದಾಗ ಈತನು ಪರಾಕ್ರಮದಿಂದ ಯುದ್ಧಮಾಡಿ ರಾಜ್ಯದ ಭದ್ರತೆಯನ್ನೂ ಕೂಡ ಹೆಚ್ಚಿಸಿ ದ್ದಾನೆ. ಮುಖ್ಯವಾಗಿ ಈತನು ವೀರರಾಣಿ ಚೆನ್ನಮ್ಮಾಜಿಯ ಸುಪುತ್ರನೆನಿಸಿ ಆವಳ ಕೀರ್ತಿಗೌರವಗಳಿಗೆ ತಕ್ಕಂತೆ ನಡೆದುಕೊಂಡು ತನ್ನ ತಾಯಿಗೂ, ರಾಜ್ಯಕ್ಕೂ ಮಿಗಿಲಾದ ಕೀರ್ತಿಗೌರವಗಳನ್ನು ತಂದನು.

ಕೆಳದಿಯ ರಾಜರುಗಳಲ್ಲಿ ಇವನಿಗಿಂತ ಪರಾಕ್ರಮಶಾಲಿಗಳನ್ನು ಕಾಣ ಬಹುದಾದರೂ ಈತನಿಗಿಂತ ವಿದ್ವಾಂಸರನ್ನೂ ವೈರಾಗ್ಯಸಂಪನ್ನರನ್ನೂ ಕಾಣು ವುದು ಅಪರೂಪ. ಆದುದರಿಂದಲೇ ಇವನನ್ನು "ವಿದ್ವದ್ರಾಜ"ನೆಂದು ಕರೆಯುವುದು ಯಥಾಯೋಗ್ಯವಾಗಿದೆ. ಧರ್ಮಾತ್ಮನಾದ ಈ ಮಹಾರಾಜನು ಕ್ರಿ. ಶ. ೧೭೧೪ ರಲ್ಲಿ ಬಿದನೂರಿನಲ್ಲಿ ಶಿವೈಕ್ಯನಾದನು. ಈತನ ಸಮಾಧಿಯು ಅಲ್ಲಿನ ಕೊಪ್ಪಲು ಮಠದಲ್ಲಿ ಆಯಿತೆಂದು ತಿಳಿದು ಬಂದಿದೆ.

೧೨. ಮುಂದಿನ ಮೂರುಮಂದಿ ರಾಜರು

ಬಸವಪ್ಪ ನಾಯಕನ ಅನಂತರ ಅವನ ಹಿರಿಯ ಮಗನಾದ ಇಮ್ಮಡಿ ಸೋಮಶೇಖರ ನಾಯಕನಿಗೆ ವೇಣುಪುರದ (ಬಿದನೂರು) ಅರಮನೆಯಲ್ಲಿ ಪಟ್ಟವಾಯಿತು. ಈತನು ಕ್ರಿ. ಶ. ೧೭೧೪-೧೭೩೯ರ ವರೆಗೆ ರಾಜ್ಯಭಾರ ಮಾಡಿದನು. ಇವನು ಸವಣೂರು ನವಾಬನಿಗೆ ಆಶ್ರಯಕೊಟ್ಟು ಅವನನ್ನು ಶತ್ರುಗಳ ಕಾಟದಿಂದ ತಪ್ಪಿಸಿ ಅವನ ಕೃತಜ್ಞತೆಗೆ ಪಾತ್ರನಾದನು. ಸ್ವಾದಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಸದಾಶಿವನಾಯಕನು ಇವನ ಸ್ನೇಹವನ್ನು ಸಂಪಾದಿಸಿದನು. ಹರಪನಹಳ್ಳಿಯ ಭರಮಪ್ಪನಾಯಕನಿಗೆ ಆಶ್ರಯವಿತ್ತು ಅವನ ಕೃತಜ್ಞತೆಗೆ ಪಾತ್ರನಾದನು. ಚಿತ್ರದುರ್ಗದ ನಾಯಕರನ್ನು ಯುದ್ಧದಲ್ಲಿ ಸೋಲಿಸಿದನು. ತರೀಕೆರೆ ಪಾಳೆಯಗಾರ ಹನುಮಪ್ಪ ನಾಯಕನಿಗೂ, ರಾಯದುರ್ಗದ ಪಾಳೆಯಗಾರ ಸೋಮಶೇಖರ ನಾಯಕನಿಗೂ ಸಹಾಯಮಾಡಿದನು.

ಶೃಂಗೇರಿಯ ಜಗದ್ಗುರುಗಳಾದ ಸಚ್ಚಿದಾನಂದ ಭಾರತಿಸ್ವಾಮಿಗಳನ್ನು ಬಿದನೂರಿಗೆ ಆಹ್ವಾನಿಸಿ ಅವರನ್ನು ಸತ್ಕರಿಸಿ ಅವರ ಆಶೀರ್ವಾದಕ್ಕೆ ಪಾತ್ರನಾದನು. ಶ್ರೀ ಶೃಂಗೇರಿಯ ಮಠಕ್ಕೆ ಆಗಿದ್ದ ಸಾಲವನ್ನು ತಾನು ತೀರಿಸಿ ಮಠವನ್ನು ಋಣವಿಮುಕ್ತ ಮಾಡಿದನು. ಶಾಲಿವಾಹನ ಶಕ ೧೬೩೫ರಲ್ಲಿ ಇವನು ತೀರ್ಥಯಾತ್ರೆಗೆ ಹೊರಟು ಕೊಲ್ಲೂರು ಮೂಕಾಂಬಿಕಾ, ಕೆಳದಿ ರಾಮೇಶ್ವರ ಮತ್ತು ವೀರಭದ್ರಸ್ವಾಮಿ, ಶೃಂಗೇರಿಯ ಶಾರದಾಂಬೆ, ಕುಕ್ಕೆಸುಬ್ರಮಣ್ಯ ಸ್ವಾಮಿ, ಗೋಕರ್ಣದ ಮಹಾಬಲೇಶ್ವರ ಇತ್ಯಾದಿ ಕ್ಷೇತ್ರಗಳನ್ನು ಸಂದರ್ಶಿಸಿ ವಿಧ್ಯುಕ್ತವಾಗಿ ಪೂಜಾದಿಗಳನ್ನು ನಡೆಸಿದನು. ಮಂಗಳೂರು ಕಡೆಯಿಂದ ಬಂದ ಇಬ್ಬರು ವೈದಿಕರ ಹುಡುಗರನ್ನು ಮಮತೆಯಿಂದ ಕಾಪಾಡಿ ಅವರಿಗೆ ಲಿಂಗಾಧಾರಣವನ್ನು ಮಾಡಿಸಿ ಪಂಚಾಕ್ಷರಿ, ಷಡಕ್ಷರಿ ಎಂಬ ನಾಮಕರಣ ಮಾಡಿ ಅವರಿಗೆ ಸಕಲ ವಿದ್ಯೆಗಳನ್ನೂ ಪಂಡಿತರಿಂದ ಪಾಠ ಹೇಳಿಸಿ ದೊಡ್ಡ ವಿದ್ವಾಂಸರಾಗುವಂತೆ ಮಾಡಿದನು.

ತನ್ನ ರಾಜ್ಯದ ಮೇಲೆ ಬಿದ್ದ ಮರಾಠಿ ಸರದಾರ ರಾಣೋಜಿ ಘೋರ್ಪಡೆಯನ್ನೂ, ಮುಸಲ್ಮಾನ ಸರದಾರನಾದ ಫೈಜೆ ಅಲ್ಲಿಖಾನ್ ಇವರ ಕೂಡೆ ಸಮಯೋಚಿತವಾಗಿ ಸಂಧಿಮಾಡಿಕೊಂಡು ರಾಜ್ಯಕ್ಕೆ ಬರುತ್ತಿದ್ದ ಗಂಡಾಂತರವನ್ನು ತಪ್ಪಿಸಿದನು. ಇವನ ಕಾಲದಲ್ಲಿ ವೇದಪ್ಪ ಮತ್ತು ಲಕ್ಷ್ಮೀಪತಯ್ಯ-ಎಂಬ ಬ್ರಾಹ್ಮಣ ಸರದಾರರು ಕೆಳದಿಯ ರಾಜ್ಯದ ದಿಗ್ವಿಜಯಕ್ಕೆ ಬಹು ಮಟ್ಟಿಗೆ ಕಾರಣ ಕರ್ತರಾಗಿದ್ದರು. ಈ ನಾಯಕನು ಪುಂಗನೂರು ರಾಜನನ್ನು ವಿಪತ್ತಿನಿಂದ ಪಾರುಮಾಡಿದನು. ಅರಕಲಗೂಡು ರಾಜ್ಯದ ಅವ್ಯವಸ್ಥೆಯನ್ನು ಪರಿಹರಿಸಿ ಅಲ್ಲಿನ ಹಕ್ಕುದಾರನಿಗೆ ರಾಜ್ಯವನ್ನು ಕೊಡಿಸಿದನು. ಮುಖ್ಯವಾಗಿ ಇವನ ಕಾಲದಲ್ಲಿ ಎಲ್ಲೆಲ್ಲೂ ಯುದ್ಧಗಳು ಒದಗಿದವು. ಇವನ ಜೀವಮಾನದ ಬಹುಕಾಲವು ರಣಭೂಮಿಯಲ್ಲಿ ಕಳೆಯಿತು. ಇವನ ಸಹಾಯವನ್ನು ದಿಲ್ಲಿಯ ಸುಲ್ತಾನನು ಕೂಡ ಕೇಳಬೇಕಾಗಿ ಬಂದಿತು. ಸೀರ್‍ಯದ ನವಾಬನ ಅವ್ಯವಸ್ಥೆಯನ್ನು ಇವನು ಸರಿಪಡಿಸಿದನು. ಪಾದುಲ್ಲಾಖಾನನ ಸೈನ್ಯದೊಡನೆ ಮೈಸೂರಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವನ್ನು ಮುತ್ತಿದನು. ಆಗಿನ ಮೈಸೂರಿನ ಅರಸರು ಇವನ ಕೂಡೆ ಯುದ್ಧಮಾಡಲಾರದೆ ಇವನಿಗೆ ವಿಪುಲವಾದ ಸಂಭಾವನೆಯನ್ನು ಕೊಟ್ಟು ಹಿಂದಿರುಗಿಸಿದರು. ಮೊಗಲಾಯರ ಸಹಾಯದಿಂದ ತನ್ನ ಮೇಲೆ ಬಂದ ಮರಾಠಿ ವೀರ ಶ್ರೀಪತರಾಯನನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ವರ್ಷಕ್ಕೊಮ್ಮೆ ನವರಾತ್ರಿ ಉತ್ಸವವನ್ನು ವೈಭವದಿಂದ ಆಚರಿಸತೊಡಗಿದನು. ಹೈದರಾಬಾದಿನ ನಿಜಾಮನು ವಿಪುಲವಾದ ಸೈನ್ಯದೊಡನೆ ಇಕ್ಕೇರಿಯ ಮೇಲೆ ಯುದ್ಧಕ್ಕೆ ಬರಲು ಅವನನ್ನು ಉಪಾಯಾ ತರದಿಂದ ಹಿಂದಕ್ಕೆ ಹೋಗುವಂತೆ ಮಾಡಿದನು. ಬಿದನೂರು ಮತ್ತು ಭುವನಗಿರಿ ಅರಮನೆಗಳನ್ನು ಹೆಚ್ಚು ಅಲಂಕಾರದಿಂದ ಶೋಭಿಸುವಂತೆ ಮಾಡಿದನು. ಸುಬ್ರಮಣ್ಯ, ವಸುಪುರ, ಗೋಕರ್ಣ, ದೇವಪುರ, ಹೊನ್ನಾಳಿ, ಕೂಡಲಿ ಮೊದಲಾದ ತೀರ್ಥಕ್ಷೇತ್ರಗಳಲ್ಲಿ ಇರುವ ದೇವಾಲಯಗಳನ್ನೂ, ಪುಣ್ಯಸ್ಥಳಗಳನ್ನೂ ಉದ್ಧಾರಗೊಳಿಸಿ ಅವುಗಳಿಗೆ ಹೆಚ್ಚಿನ ದತ್ತಿಗಳನ್ನು ಕೊಟ್ಟನು.

ಇವನ ಕಾಲದಲ್ಲಿ ಮೈಸೂರಿನವರಿಗೂ, ಕೆಳದಿಯವರಿಗೂ ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದವು, ಆದರೆ ವಿಜಯವು ಕೆಳದಿಯ ಕಡೆಗೆ ಆಗುತ್ತಿದ್ದಿತು. ದಿಲ್ಲಿಯ ಮೊಗಲಾಯರ ಕೂಡ ಇವನ ಸಹಾಯವನ್ನು ಅಪೇಕ್ಷಿಸಿಸಿದುದು ಚರಿತ್ರೆಯಲ್ಲಿ ಗಮನಾರ್ಹವಾದ ಸಂಗತಿ. ಇವನು ಪರಾಕ್ರಮಶಾಲಿಯೂ, ಧರ್ಮಾಭಿಮಾನಿಯೂ ಎನಿಸಿದ್ದನು. ಇವನು ೧೭೪೦ ರಲ್ಲಿ ಪರಶಿವನ ಪಾದಾರವಿಂದವನ್ನು ಸೇರಿದನು.

ಅನಂತರ ಕೆಳದಿಯ ರಾಜ್ಯಕ್ಕೆ ಬೂದಿಬಸವಪ್ಪ ನಾಯಕ (ಕಿರಿಯ ಬಸವಪ್ಪ ನಾಯಕನು) ಅರಸನಾದನು. ಇವನು ಸೋಮಶೇಖರ ನಾಯಕನ ತಮ್ಮನಾದ ವೀರಭದ್ರನಾಯಕನ ಮಗನಾದುದರಿಂದ ರಾಜ್ಯಕ್ಕೆ ಸಮೀಪದ ವಾರಸುದಾರನಾಗಿದ್ದನು. ಇವನು ೧೭೪೦–೧೭೫೫ರ ವರೆಗೆ ರಾಜ್ಯಭಾರ ಮಾಡಿದನು.'' ಇವನ ಕಾಲವಲ್ಲಿ ಷಡಕ್ಷರ ಮಂತ್ರಿ, ನಿರ್ವಾಣ ಮಂತ್ರಿ ಎಂಬ ವೀರಶೈವ ಮಂತ್ರಿಗಳು ವಿಖ್ಯಾತರಾಗಿದ್ದರು. ಷಡಕ್ಷರ ಮಂತ್ರಿಯು ಸಂಸ್ಕೃತದಲ್ಲಿ ವೀರಶೈವ ಧರ್ಮಶಿರೋಮಣಿ ಎಂಬ ಗ್ರಂಥವನ್ನು ಬರೆದಿದ್ದಾನೆ. ನಿರ್ವಾಣ ಮಂತ್ರಿಯು ಕ್ರಿಯಾಸಾರವೆಂಬ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆಸಿದ್ದಾನೆ. ಇವನಿಗೆ ಚೆನ್ನಮ್ಮಾಜಿ, ಚೆನ್ನವೀರಮ್ಮಾಜಿ ಎಂಬ ಉಭಯ ಪತ್ನಿಯರಿದ್ದರು. ಚೆನ್ನಮ್ಮಾಜಿಯ ತಂದೆ ಶಿವಲಿಂಗಪ್ಪನು ಅರಮನೆಯ ಸರ್ವಾಧಿಕಾರಿಯಾಗಿದ್ದನು. ಇವನು ರಾಯದುರ್ಗದ ರಾಜ್ಯದ ಮೇಲೆ ಬಿದ್ದ ಮದಕರಿನಾಯಕನನ್ನು ಯುದ್ಧದಲ್ಲಿ ಸೋಲಿಸಿ ರಾಯದುರ್ಗದ ಪಾಳೆಯಗಾರನನ್ನು ಕಾಪಾಡಿದನು. ಇವನ ಕಾಲದಲ್ಲಿ ಕೆಳದಿಯ ರಾಜ್ಯವು ಎಲ್ಲೆಲ್ಲೂ ವಿಖ್ಯಾತವಾಯಿತು. ಗುರು ತೋಂಟದಾರ್ಯರೆಂಬ ಮಹಾತ್ಮರಿಗೆ ಭದ್ರರಾಜಪುರವೆಂಬ ಊರನ್ನು ಶಿವಾರ್ಪಣವಾಗಿ ಕೊಟ್ಟನು. ಇವನು ವೀರಶೈವ ಮತದಲ್ಲಿ ಹೆಚ್ಚಿನ ಅಭಿಮಾನಿಯಾಗಿದ್ದು ಗುರುಜಂಗಮರನ್ನು ಬಹಳವಾಗಿ ಪ್ರೋತ್ಸಾಹಿಸಿದನು. ದಾರಿ ತಪ್ಪಿದ ತರೀಕೆರೆ ಪಾಳೆಯಗಾರನನ್ನು ಸದೆಬಡಿದು ತನಗೆ ತಲೆಬಾಗುವಂತೆ ಮಾಡಿದನು. ಇವನು ಮೇಲಿಂದ ಮೇಲೆ ರಾಜ್ಯದ ಮೇಲೆ ಹಲ್ಲೆಮಾಡುತ್ತಿದ್ದ ಮರಾಠಿ ಸರದಾರರನ್ನು ಅತ್ಯಂತ ಪರಾಕ್ರಮದಿಂದ ಓಡಿಸಿದನು. ಇವನಿಗೆ ಔರಸಪುತ್ರರಿಲ್ಲದಿದ್ದುದರಿಂದ ತನ್ನ

ಬಂಧುಗಳಲ್ಲಿ ಒಬ್ಬನಾದ ಉತ್ತಮ ಲಕ್ಷಣ ಸಂಪನ್ನನಾದ ಚೆನ್ನಬಸವಪ್ಪನೆಂಬ ಬಾಲಕನನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದನು. ಮುಂದೆ ಈತನಿಗೆ ರಾಜೋಚಿತವಾದ ಎಲ್ಲ ವಿದ್ಯೆಗಳನ್ನೂ ಕಲಿಸಿದನು; ಈತನು ಚೆನ್ನಬಸವ ನಾಯಕನೆಂದು ಚರಿತ್ರೆಯಲ್ಲಿ ಪ್ರಸಿದ್ಧನಾದನು. ಇವನ ಆಸ್ಥಾನದಲ್ಲಿದ್ದ ಮರಿತೋಂಟದಾರ್ಯರೆಂಬ ವಿದ್ವಾಂಸರು, "ವೀರಶೈವಾನಂದ ಚಂದ್ರಿಕೆ" ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ಇನ್ನೊಬ್ಬ ಪ್ರಖ್ಯಾತ ಪಂಡಿತರಾದ ಮೌನಪ್ಪನು, " ವೀರಶೈವಾಚಾರ ಕೌಸ್ತುಭ " ಎಂಬ ಮತ್ತೊಂದು ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಮುಖ್ಯವಾಗಿ ಈತನು ವಿದ್ವಾಂಸರಿಗೆ ಉದಾರಾಶ್ರಯವಿತ್ತನು. ಕ್ರಿ.ಶ. ೧೭೫೭ ರಲ್ಲಿ ಇವನು ಶಿವಲೋಕವನ್ನು ಹೊಂದಿದನು. ಈತನು ಪರಾಕ್ರಮಶಾಲಿಯಾಗಿಯೂ, ವಿದ್ಯಾಭಿಮಾನಿಯಾಗಿಯೂ ಇದ್ದನೆಂದು ಚರಿತ್ರೆಕಾರರು ಹೊಗಳಿದ್ದಾರೆ.

ಮುಂದೆ ಈತನ ಅನಂತರ ಚೆನ್ನಬಸವಪ್ಪನಾಯಕನು ೧೭೫೭ ರಲ್ಲಿ ಪಟ್ಟಾಭಿಷಿಕ್ತನಾಗಿ ೧೭೫೮ರ ವರೆಗೆ ರಾಜ್ಯಭಾರವನ್ನುಮಾಡಿದನು. ಇವನ ಕಾಲದಲ್ಲಿ ಪುಣೆಯಿಂದ ಮಾದೋಜಿ ಪುರಂದರನೆಂಬ ಸರದಾರನು ವಿಪುಲವಾದ ಮರಾಠಿ ಸೈನ್ಯದೊಡನೆ ಬಂದು ಕೆಳದಿ ರಾಜ್ಯವನ್ನು ಮುತ್ತಿದನು. ಚೆನ್ನಬಸವನಾಯಕನು ಖಡಾಖಡಿ ಯುದ್ಧವನ್ನುಮಾಡಿ ಅವರ ಸೈನ್ಯವನ್ನು ಸೋಲಿಸಿ ಓಡಿಸಿದನು. ಇವನು ಮರೆಹೊಕ್ಕ ಬೇಲೂರಿನ ಪಾಳೆಯಗಾರ ಕೃಷ್ಣಪ್ಪನಾಯಕನನ್ನು ಕಾಪಾಡಿದನು. ಹಂಗರದ ಮಠಕ್ಕೆ ಚೆನ್ನವೀರದೇವರೆಂಬ ವಿದ್ವಾಂಸರನ್ನು ಸ್ವಾಮಿಗಳನ್ನಾಗಿ ಮಾಡಿಸಿದನು. ಪರಾಕ್ರಮಶಾಲಿಯಾಗಿಯೂ, ಧರ್ಮಾಭಿಮಾನಿಯಾಗಿಯೂ ಆಗಿದ್ದ ಈತನು ಕ್ರಿ.ಶ. ೧೭೫೮ ರಲ್ಲಿ ಶಿವೈಕ್ಯನಾದನು. ಈತನನ್ನು ಬಿದನೂರಿನ ಕೊಪ್ಪಲು ಮಠದಲ್ಲಿ ಸಮಾಧಿಮಾಡಿದರು.

೧೩. ರಾಣಿ ವೀರಮ್ಮಾಜಿ

ಚೆನ್ನಬಸವ ನಾಯಕನು ಕಣ್ಮರೆಯಾದ ಮೇಲೆ ಕೆಳದಿಯ ರಾಜ್ಯಸೂತ್ರವು ಕ್ರಿ. ಶ. ೧೭೫೭ ರಲ್ಲಿ ರಾಣಿ ವೀರಮ್ಮಾಜಿಯ ಕೈವಶವಾಯಿತು. ಇವಳು ೧೭೬೩ರ ವರೆಗೆ ರಾಜ್ಯಭಾರ ಮಾಡಿದಳು. ಇವಳು ಬಸವಪ್ಪನಾಯಕನ ಪತ್ನಿ. ಕೋಟಿಪುರದ ಶೆಟ್ಟರ ಶಿವಯ್ಯನವರ ಕುಮಾರಿಯೆಂದು ಕೆಳದಿನೃಪ ವಿಜಯದಲ್ಲಿ ಹೇಳಿದೆ. ಇವಳು ಅಧಿಕಾರವನ್ನು ವಹಿಸಿಕೊಂಡ ಕೂಡಲೇ ವಿಧಿವಿಲಾಸದಂತೆ ಪತನೋನ್ಮುಖವಾಗಿದ್ದ ಕೆಳದಿಯ ರಾಜ್ಯದಲ್ಲೂ, ಬಿದನೂರಿನ ಅರಮನೆಯಲ್ಲೂ ಅಂತಃಕಲಹಗಳು ಅಧಿಕವಾಗಿದ್ದವು. ಕೆಲವು ಅದೂರದರ್ಶಿಗಳಾದ ರಾಜಬಂಧುಗಳು ಚಿತ್ರದುರ್ಗದ ಮದಕರಿನಾಯಕ, ಮೈಸೂರಿನ ನವಾಬ ಹೈದರಲ್ಲೀಖಾನ್ ಇವರ ಆಶ್ರಯವನ್ನು ಕೋರಿ ಕೆಳದಿಯ ರಾಜ್ಯದ ಮೇಲೆ ಅಪಪ್ರಚಾರವನ್ನು ಮಾಡುತ್ತಿದ್ದರು. ಇಂತಹ ದುರದೃಷ್ಟದ ಸನ್ನಿವೇಶದಲ್ಲಿ ವೀರಮ್ಮಾಜಿಯು ರಾಜ್ಯಭಾರವನ್ನು ನಡೆಸುತ್ತಿದ್ದಳು. ಈಕೆಯ ಕಾಲದಲ್ಲಿ ಮುಮ್ಮಡಿ ಸೋಮಶೇಖರನಾಯಕನು ಹೆಸರಿಗೆ ಮಾತ್ರ ರಾಜನೆನಿಸಿಕೊಂಡಿದ್ದನು. ಗತಿಸಿದ ಚೆನ್ನಬಸವನಾಯಕನು ಅವಿವಾಹಿತನಾಗಿ ಸತ್ತುದರಿಂದಲೂ, ವೀರಮ್ಮಾಜಿ ಅಪುತ್ರವತಿಯಾದುದರಿಂದಲೂ ಈಕೆಯು ಮುಮ್ಮಡಿ ಸೋಮಶೇಖರರಾಯನನ್ನು ದತ್ತುವಾಗಿ ಸ್ವೀಕರಿಸಿದಂತೆ ತಿಳಿದುಬಂದಿದೆ. ಈತನು ಚಿಕ್ಕವಯಸ್ಸಿನವನಾದುದರಿಂದ ಈಕೆಯೇ ರಾಜ್ಯಭಾರ ಮಾಡುತ್ತಿದ್ದಳು. ಈಕೆಗೆ ರಾಜ್ಯಭಾರದಲ್ಲಿ ಸಹಾಯಕರಾಗಿ ಕಳಸಯ್ಯ, ಕೃಷ್ಣಪ್ಪಯ್ಯ, ಹಲಸಿಂಗಪ್ಪ, ಮರಿಯಪ್ಪಯ್ಯ ಮೊದಲಾದ ಬ್ರಾಹ್ಮಣರೂ, ವೆಂಕಟನಾರಣಪ್ಪ, ಗಂಗಾಧರಯ್ಯ, ವಿಶ್ವೇಶ್ವರಯ್ಯ, ಕೃಷ್ಣಪ್ಪಯ್ಯ ಮೊದಲಾದ ನಿಯೋಗಿಗಳೂ, ಸಿದ್ದಪ್ಪನಾಯಕ, ದಳವಾಯಿ ನಿಂಬಯ್ಯ, ದಳವಾಯಿ ವೀರಭದ್ರಯ್ಯ, ಕೊಂಡಪ್ಪ, ಮನೆ ವೀರಭದ್ರಯ್ಯ ಮೊದಲಾದ ಶಿವಭಕ್ತ ಗುರಿಕಾರರೂ, ಈಕೆಗೆ ರಾಜ್ಯಭಾರದಲ್ಲಿ ಸಹಾಯಕರಾಗಿದ್ದರೆಂದು ತಿಳಿದುಬಂದಿದೆ. ಇವರುಗಳಲ್ಲಿ ದಳವಾಯಿ ನಿಂಬಯ್ಯನು

ರಾಜ್ಯಭಾರದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದ್ದನೆಂದು ತಿಳಿದು ಬಂದಿದೆ. ಇದರಿಂದ ಇತರರಿಗೆ ಅಸೂಯೆ ಬಂತೆಂದು ತಿಳಿದುಬರುತ್ತದೆ.

ರಾಣಿ ವೀರಮ್ಮಾಜಿಯು ಅತ್ಯಂತ ದೈವಭಕ್ತಳೂ ಗುರುಭಕ್ತಿ ಪರಾಯಣಳೂ ಆಗಿದ್ದಳೆಂದು ಆಧಾರಗಳಿವೆ. ಶೃಂಗೇರಿಮಠದ ಜಗದ್ಗುರು ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ರಾಜಧಾನಿಯಾದ ಬಿದನೂರು ಅರಮನೆಗೆ ಆಹ್ವಾನಿಸಿ ಬಣ್ಣದ ಚಾವಡಿಯಲ್ಲಿ ಸಂದರ್ಶನಪಡೆದು ಅವರಿಗೆ ವಿಪುಲವಾದ ಕಾಣಿಕೆಯನ್ನು ಕೊಟ್ಟು ದಿವ್ಯವಾದ ಸ್ಫಟಿಕಲಿಂಗ, ರತ್ನಖಚಿತವಾದ ಗೋಪಾಲಕೃಷ್ಣಮೂರ್ತಿ, ಮುನ್ನೂರು ಇಪ್ಪತ್ತು ನಾಲ್ಕು ವರಹದ ಭೂಮಿ ಭಾರಿಯಾದ ಉಡುಗೊರೆ ಇತ್ಯಾದಿಗಳನ್ನು ಕೊಟ್ಟು ತಪಸ್ವಿಗಳಾದ ಅವರ ಆಶೀರ್ವಾದ ಪಡೆದಂತೆ ತಿಳಿದುಬಂದಿದೆ

ಕೆಳದಿಯ ರಾಜಮನೆತನಗಳಲ್ಲಿ ಪ್ರಖ್ಯಾತರಾದ ಹಿರಿಯ ವೆಂಕಟಪ್ಪನಾಯಕ, ಶಿವಪ್ಪನಾಯಕ, ರಾಣಿ ಚೆನ್ನಮ್ಮಾಜಿ, ರಾಣಿ ವೀರಮ್ಮಾಜಿ ಮೊದಲಾದವರೆಲ್ಲರೂ ಶ್ರೀ ಶೃಂಗೇರಿಯ ಜಗದ್ಗುರು ಶಂಕರಾಚಾರ್ಯರ ಪೀಠಕ್ಕೆ ಅಪಾರವಾದ ಮನ್ನಣೆಯನ್ನು ಕೊಟ್ಟಿರುವರೆಂಬ ವಿಷಯವನ್ನು ಕೆಳದಿ ನೃಪವಿಜಯದಲ್ಲಿ ನಾವು ಮೇಲಿಂದ ಮೇಲೆ ಓದುತ್ತೇವೆ. ಶಿವಭಕ್ತರಾದ ಕೆಳದಿಯ ನಾಯಕರು ತಮ್ಮ ರಾಜ್ಯದಲ್ಲಿ ತಮ್ಮ ಕುಲ ಗುರುಗಳಾದ ಶ್ರೀ ರಂಭಾಪುರಿ ಜಗದ್ಗುರು ಪೀಠಗಳೇ ಮೊದಲಾಗಿ ಅನೇಕ ವೀರಶೈವ ಮಠಮಾನ್ಯಗಳಿದ್ದರೂ ಅವೆಲ್ಲಕ್ಕಿಂತಲೂ ಹೆಚ್ಚಾಗಿ ಈ ಶೃಂಗೇರಿ ಶಾರದಾ ಪೀಠಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಟ್ಟುದಕ್ಕೆ ಕಾರಣವೇನೆಂಬುದನ್ನು ತಿಳಿಯುವುದು ಈ ಗ್ರಂಥಾವಲೋಕನ ಮಾಡುವವರಿಗೆ ಅಗತ್ಯವಾಗಿದೆ. ಇದಕ್ಕೆ ಮುಖ್ಯವಾಗಿ ಕೆಲವು ಕಾರಣಗಳಿವೆ:—

೧. ಕೆಳದಿಯ ರಾಜ್ಯವು ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ಬಳೆದುದು. ವಿಜಯನಗರ ಸಾಮ್ರಾಜ್ಯದ ಅಭ್ಯುದಯಕ್ಕೆ ಶೃಂಗೇರಿಯ ಜಗದ್ಗುರುಗಳಾದ ಮತ್ತು ಸಕಲಶಾಸ್ತ್ರ ವಿಶಾರದರಾದ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಬಹುಮಟ್ಟಿಗೆ ಕಾರಣರೆಂಬುದು ಗಮನಾರ್ಹವಾಗಿದೆ. ತಮ್ಮ

ಚಕ್ರವರ್ತಿಗಳಿಗೆ ಗುರುವಾಗಿದ್ದವರೆಂಬ ಭಾವನೆ ಕೆಳದಿಯ ನಾಯಕರಿಗಿರಬಹುದು. ಆದುದರಿಂದಲೇ ವಿಜಯನಗರ ಸಾಮ್ರಾಜ್ಯದ ಅನಂತರ ವಿಜಯನಗರದ ಚಕ್ರವರ್ತಿಗಳಿಗೆ ಗುರುವಾಗಿದ್ದ ಶೃಂಗೇರಿಯ ಪೀಠಾಧೀಶ್ವರರನ್ನು ಗೌರವಿಸುವ ಹೊಣೆಗಾರಿಕೆ ತಮ್ಮದೆಂದು ಭಾವಿಸಿರಬೇಕು.

೨. ಶ್ರೀ ಶೃಂಗೇರಿಯ ಪೀಠವು ಕೆಳದಿಯ ರಾಜ್ಯದ ಪ್ರದೇಶದಲ್ಲಿದ್ದು ಆ ಪೀಠವು ಸಮಗ್ರ ಭಾರತದ ವೈದಿಕ ಮತಾನುಯಾಯಿಗಳ ಗುರುಸ್ಥಾನವೆನಿಸಿದ್ದುದರಿಂದ ಹಿಂದೂಧರ್ಮದ ಉಜ್ವಲಾಭಿಮಾನಿಗಳಾದ ಕೆಳದಿಯ ನಾಯಕರು ಈ ಪೀಠಕ್ಕೆ ಪ್ರೋತ್ಸಾಹ ಕೊಡುವುದರಿಂದ ಸಮಗ್ರ ಹಿಂದೂ ಧರ್ಮ ಸಂಸ್ಕೃತಿಗೆ ಪ್ರೋತ್ಸಾಹವಿತ್ತಂತೆ ಆಗುತ್ತದೆಂದು ಭಾವಿಸಿರಬೇಕು. ಹೀಗೆ ಶಾರದಾಪೀಠಕ್ಕೆ ಮನ್ನಣೆಕೊಡುವುದರಿಂದ ಸಮಗ್ರ ಭಾರತೀಯರ ಪ್ರೀತಿಗೌರವಗಳಿಗೂ ತಾವು ಪಾತ್ರರಾಗುತ್ತೇವೆಂಬ ನಂಬಿಕೆಯಿದ್ದಿರಬೇಕು. ಈ ಮಠದ ಸಂಸ್ಥಾಪಕರಾದ ಶ್ರೀ ಜಗದ್ಗುರು ಶಂಕರಾಚಾರರ್ಯರು ಅವರ ಶಿಷ್ಯಪರಂಪರೆಗೆ ಸೇರಿದ ಸುರೇಶ್ವರಾಚಾರ್ಯರು, ವಿದ್ಯಾಶಂಕರರು, ಭಾರತೀಕೃಷ್ಣತೀರ್ಥರು, ಸ್ವಾಮಿ ವಿದ್ಯಾರಣ್ಯರು ಮೊದಲಾದ ಮಹಾತ್ಮರ ಬಗ್ಗೆ ಈ ರಾಜರಿಗೆ ಹೆಚ್ಚಿನ ಗೌರವಾದರಗಳಿದ್ದಿರಬೇಕು. ಕೆಳದಿ ನೃಪ ವಿಜಯದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೂ ಶ್ರೀ ವಿದ್ಯಾರಣ್ಯರಿಗೂ, ವೀರಶೈವ ಆಚಾರ್ಯರಾದ ಶ್ರೀ ರೇವಣ ಸಿದ್ಧೇಶ್ವರರಿಗೂ ಒಂದು ಸಂಬಂಧವನ್ನು ಕಲ್ಪಿಸಿರುವ ಪ್ರಸ್ತಾಪವಿದೆ:—“ಮತ್ತಮಾವಿದ್ಯಾರಣ್ಯರೆಂಬವರ್ ಪಂಪಾಕ್ಷೇತ್ರದೊಳಿದ್ದುರ್ ಶ್ರೀ ಚಕ್ರೋಪಾಸನೆಯಿಂ ದೇವಿಯಂ ಮೆಚ್ಚಿಸಿ ಒಳಕ್ಕೆ ಶೃಂಗೇರಿಯ ಮಠದೊಳ್ ವರ್ತಿಸುತ್ತಿದ್ದ ವಿದ್ಯಾಶಂಕರರಿಂದ ಮಾಶ್ರಯಮಂ ಕೈಗೊಂಡು ....ರೇವಣಸಿದ್ಧೇಶ್ವರನೆಂಬ ಗಣಾಧೀಶ್ವರನಿಂ ಚಂದ್ರಮೌಳೀಶ್ವರನೆಂಬ ಲಿಂಗಮಂ ಪಡೆದು ಶೃಂಗಪುರವರ ಕೈ ತಂದು ಆ ಮಠದೊಳ್ ನಿಂದು ಕೆಲಕಾಲಂ ವರ್ತಿಸುತ್ತುಂ ಇರ್ದು ಮುಕ್ತರಾದರ್.” (ಕೆಳದಿ ನೃಪ ವಿಜಯಂ, ಪುಟ ೩೩೦-೩೧)

ಮೇಲೆಕಂಡ ಕೆಳದಿ ನೃಪವಿಜಯದ ಒಕ್ಕಣೆಯಿಂದ ವಿಜಯನಗರ, ವಿದ್ಯಾರಣ್ಯರು, ರೇವಣಸಿದ್ಧರು ಇವರ ಶಿಷ್ಯರಾದ ಕೆಳದಿಯ ರಾಜರು

ಇವರುಗಳಿರುವ ನಿಕಟವಾದ ಸಂಬಂಧವನ್ನು ಸುಲಭವಾಗಿ ಅರಿಯಬಹುದು. ಈ ವಿಧವಾದ ಸಂಬಂಧವೇ ಕೆಳದಿಯ ರಾಜರು ಶೃಂಗೇರಿಯ ಜಗದ್ಗುರು ಪೀಠಕ್ಕೆ ಹೆಚ್ಚು ಹೆಚ್ಚಿನ ಮನ್ನಣೆಯನ್ನು ಕೊಟ್ಟರೆಂಬುದಕ್ಕೆ ಕಾರಣವಾಗಿರ ಬಹುದೆಂಬುದನ್ನು ಅರಿಯಬಹುದು ಹಾಗೆಯೇ ಕುಲಗುರುಗಳಾದ ಬಿದ ನೂರಿನ ಹಿರಿಯಮಠದ ಜಂಗಮಸ್ವಾಮಿಗಳೂ, ಕೆಳದಿಯ ಹಿರಿಯ ಮಠದ ಜಂಗಮ ಸ್ವಾಮಿಗಳು, ಕೆಳದಿಯ ಹಿರಿಯ ಮಠದ ಪಟ್ಟಾಧಿಕಾರಿಗಳು, ಕ್ಯಾಸನೂರು, ತೊಗರಿಸಿ, ಗೌರೀಕೆರೆ, ಗುರುಪುರ, ಗುರುವಯ್ಯನ ಕೆರೆ ಮೊದಲಾದ ಕಡೆಗಳ ವೀರಶೈವ ಮಠಾಧಿಪತಿಗಳು ಇವರನ್ನೆಲ್ಲಾ ಬಿದ ನೂರಿಗೆ ಕರೆಸಿ ಪಾದಪೂಜೆಮಾಡಿ ಅವರಿಗೆ ವಿಪುಲವಾದ ಗುರುದಕ್ಷಿಣೆಯನ್ನು ಕೊಟ್ಟು ಅವರ ಅನುಗ್ರಹವನ್ನು ಪಡೆದಳೆಂದು ತಿಳಿದು ಬಂದಿದೆ." ರಾಜಮನೆ ತನದ ದೇವತೆಗಳೆನಿಸಿದ ಕೆಳದಿಯ ವಿರಭದ್ರ, ಇಕ್ಕೇರಿಯ ಅಘೋರೇಶ್ವರ, ಬಿದನೂರು ನೀಲಕಠೇಶ್ವರ, ಕೊಲ್ಲೂರು ಮೂಕಾಂಬಿಕೆ ಮೊದಲಾದ ಕ್ಷೇತ್ರ ಗಳಲ್ಲೆಲ್ಲಾ ಹೆಚ್ಚಿನ ದಾನಧರ್ಮಗಳನ್ನು ಮಾಡಿ ದೇವಾಲಯಗಳಲ್ಲೆಲ್ಲಾ ಹೆಚ್ಚಿನ ಪೂಜೆ ಪುರಸ್ಕಾರಗಳು ನಡೆಯುವಂತೆ ಮಾಡಿದಳು. ಇದರಿಂದ ಈಕೆ ಯನ್ನು ಅತ್ಯಂತ ಧಾರ್ಮಿಕ ಸ್ವಭಾವದವಳೆಂದು ನಾವು ಹೇಳಬಹುದಾಗಿದೆ.

ಇಷ್ಟೆಲ್ಲಾ ಸದ್ಗುಣಗಳಿದ್ದರೂ ವೀರಮ್ಮಾಜಿಯು ಚರಿತ್ರೆಯಲ್ಲಿ ಅತ್ಯಂತ ದುರದೃಷ್ಟವಂತಳು. ರಾಜ್ಯದ ಹಕ್ಕುದಾರಿಕೆ ವಿಷಯದಲ್ಲಿ ಅವಳ ಮತ್ತೊಬ್ಬ ವಾರಸುದಾರ ಚೆನ್ನಬಸಪ್ಪ ನಾಯಕನಿಗೂ, ಇವಳಿಗೂ ತೀವ್ರವಾದ ಭಿನ್ನಾಭಿಪ್ರಾಯ ಬಂದಿತು. ಈ ಗಡಿಬಿಡಿಯಲ್ಲಿ ಚೆನ್ನಬಸಪ್ಪ ನಾಯಕನು ದೈವಾಧೀನನಾದನು. ಅದರ ಅಪಖ್ಯಾತಿ ವೀರಮ್ಮಾಜಿಯ ಮೇಲೆ ಬಂದಿತು. ಜನತೆಯಲ್ಲಿ ಅದರ ಅಪಖ್ಯಾತಿಯು ಹೆಚ್ಚಿನ ಕ್ಷೋಭೆಯನ್ನುಂಟುಮಾಡಿತು.

ಈ ಅಶಾಂತಿಯು ಆಗ ಕೆಳದಿಯ ಅಜನ್ಮ ಶತ್ರುಗಳಾದ ಚಿತ್ರದುರ್ಗದ ನಾಯಕರಿಗೂ ಶ್ರೀರಂಗಪಟ್ಟಣದ ನವಾಬ ಹೈದರಲ್ಲೀ ಖಾನನಿಗೂ ಕೆಳದಿ ಯನ್ನು ಮುತ್ತಲು ಹೆಚ್ಚು ಅವಕಾಶವನ್ನು ಕೊಟ್ಟಂತಾಯಿತು. ಈ ಕಾಲದಲ್ಲಿ ಮೈಸೂರಿನ ನಿಜವಾದ ಹಕ್ಕುದಾರರಾದ ಮಹಾರಾಜರನ್ನು ಮೂಲೆಗೆ ಕೂಡಿಸಿ ರಾಜ್ಯದ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ನವಾಬ

ಅಲ್ಲಿದ್ದ ಸುಮಾರು ಎರಡು ಕೋಟಿ ಇಕ್ಕೇರಿಯ ವರಹಗಳನ್ನು ವಶಪಡಿಸಿ ಕೊಂಡನು. ಅಮೂಲ್ಯವಾದ ನವರತ್ನಾಭರಣಗಳನ್ನು ಸಂಗ್ರಹಿಸಿದನು. ಹೈದರನ ಸೈನಿಕರು ಬಿದನೂರನ್ನು ಕೊಳ್ಳೆ ಹೊಡೆದರು. ನಾಗರಿಕರನ್ನು ನಿರ್ದಯೆಯಿಂದ ಕೊಂದರು. ಸುಂದರ ಸ್ತ್ರೀಯರನ್ನು ಅಪಹರಿಸಿದರು. ನಂದನವನದಂತಿದ್ದ ಬಿದನೂರು ರುದ್ರಭೂಮಿ ಆಯಿತು. ವಿಶಾಲವಾದ ಕೆಳದಿಯ ರಾಜ್ಯವು ಹಸ್ತಗತವಾದುದರಿಂದಲೂ, ಅಪಾರವಾದ ಐಶ್ವರ್ಯವು ಬಂದುದರಿಂದಲೂ ಹೈದರನು ಹರ್ಷಿಸಿದನು ಈ ವಿಜಯದ ಸವಿ ನೆನಪಿಗಾಗಿ ಬಿದನೂರಿಗೆ "ಹೈದರ್ ನಗರ" ಎಂದು ಹೆಸರಿಟ್ಟನು. ಕಾಲಕ್ರಮದಲ್ಲಿ ಹೈದರ್ ಎಂಬ ಶಬ್ದ ಮಾಯವಾಗಿ ನಗರ ಎಂಬ ಶಬ್ದ ನಿಂತಿದೆ. ಬಿದನೂರಿ ನಲ್ಲಿ ಕೆಲವು ಕಾಲ ಸಂಗೀತ ನರ್ತನಾದಿಗಳನ್ನು ನಡೆಸಿಕೊಂಡು ಹೈದರನು ಉಲ್ಲಾಸದಿಂದ ಕಾಲಕಳೆದನು. ಹಾಗೂ ವಿಜಯೋನ್ಮತ್ತನಾದನು.

ಹೈದರನ ಸೈನಿಕರು ಬಲ್ಲಾಳ ರಾಯನದುರ್ಗಕ್ಕೆ ತಲೆತಪ್ಪಿಸಿಕೊಂಡು ಹೋಗಿದ್ದ ವೀರಮ್ಮಾಜಿಯನ್ನು, ಅವಳ ದತ್ತು ಮಗ ಸೋಮಶೇಖರರಾ ಯನನ್ನೂ ಹಿಡಿದು ತಂದು ಹೈದರನಿಗೆ ಒಪ್ಪಿಸಿದರು. ಅದೇ ಸಮಯದಲ್ಲಿ ರಾಜ್ಯದಲ್ಲಿ ಗಲಭೆಮಾಡುತ್ತಿದ್ದ ಕೃತಕ ಬಸವಪ್ಪನಾಯಕನನ್ನು ಹೈದರನಿಗೆ ಒಪ್ಪಿಸಿದರು. ಹೈದರನು ಈ ಮೂವರನ್ನೂ ತುಮಕೂರು ಜಿಲ್ಲೆಯ ಮಧು ಗಿರಿ ಕೋಟೆಯಲ್ಲಿ ಸೆರೆಯಲ್ಲಿಡಿಸಿದನು. ಅನಂತರ ಪುಣೆಯ ಮರಾಠಿಯ ಪೇಶ್ವೆಗಳು ಚೆನ್ನಮ್ಮಾಜಿಯ ಕಾಲದಲ್ಲಿ ಈ ರಾಜ್ಯದಿಂದ ತಮಗಾಗಿದ್ದ ಉಪ ಕಾರಕ್ಕೆ ಪ್ರತಿಫಲವಾಗಿ ವೀರಮ್ಮಾಜಿಯನ್ನೂ, ಸೋಮಶೇಖರ ನಾಯಕ ನನ್ನೂ ಸೆರೆಯಿಂದ ಬಿಡಿಸಿ ಪುಣೆಗೆ ಕೊಂಡೊಯ್ಯಲು ವ್ಯವಸ್ಥೆ ಮಾಡಿದರು. ವೀರಮ್ಮಾಜಿಯು ದಾರಿಯಲ್ಲಿ ಹೊಟ್ಟೆಶೂಲೆಯಿಂದ ಮೃತ ಳಾದಳು. ಸೋಮಶೇಖರ ನಾಯಕನು ಪೇಶ್ವೆಗಳ ಆಶ್ರಯದಲ್ಲಿ ಕೆಲಕಾಲ ಜೀವಿಸಿದನು. ಅನಂತರ ಅವನ ವಂಶೀಯರು ಧಾರವಾಡ ಜಿಲ್ಲಾ ನರ ಗುಂದದಲ್ಲಿ ಕೆಲವು ಕಾಲ ರಾಜ್ಯಭಾರ ಮಾಡಿದರು. ಈಗಲೂ ಕೆಳದಿಯ ವಂಶೀಯರು ನರಗುಂದದಲ್ಲಿ ಇರುವರೆಂದು ಹೇಳಲಾಗಿದೆ.

ಹೈದರನು ಬಿದನೂರನ್ನು ವಶಪಡಿಸಿಕೊಂಡಿದ್ದು ಕ್ರಿ.ಶ. ೧೭೬೩ ರಲ್ಲಿ ಎಂಬುದು ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ.

★

೧೪. ವಿಧಿವಿಲಾಸ

ಪರಮೇಶ್ವರನ ಕೃಪೆಯಿಂದ ಕ್ರಿ. ಶ. ೧೪೯೯—೧೫೦೦ ರಲ್ಲಿ ಕೆಳದಿಯಲ್ಲಿ ಸ್ಥಾಪಿತವಾದ ಈ ರಾಜ್ಯವು ೧೭೬೩ ರಲ್ಲಿ ಬಿದನೂರಿನಲ್ಲಿ ವಿನಾಶಗೊಂಡಿತು. ಪ್ರಾಯೇಣ ಇದೇ ಕಾಲದಲ್ಲಿ ಮಲೆನಾಡಿನಲ್ಲಿ ತಲೆಯೆತ್ತಿದ್ದ ಸ್ವಾದಿ, ಬಿಳಗಿ, ಕೊಡಗು ಮೊದಲಾದ ಪಾಳೆಯಪಟ್ಟುಗಳೆಲ್ಲವೂ ಲಿಂಗವಂತ ಅರಸರಿಂದಲೇ ಪರಿಪಾಲಿಸಲ್ಪಡುತ್ತಿದ್ದವು. ಈ ಎಲ್ಲ ರಾಜ್ಯಗಳನ್ನೂ ನವಾಬ ಹೈದರ್ ಮತ್ತು ಅವನ ಮಗ ಟಿಪ್ಪೂಸುಲ್ತಾನರು ನಾಶಮಾಡಿದರೆಂಬು ಇತಿಹಾಸದಿಂದ ತಿಳಿದುಬಂದಿರುವ ಸಂಗತಿ.

ಕೆಳದಿಯ ರಾಜರಲ್ಲಿ ಭದ್ರಪ್ಪನಾಯಕ, ಸದಾಶಿವನಾಯಕ, ವೆಂಕಟಪ್ಪನಾಯಕ, ದೊಡ್ಡಸಂಕಣ್ಣನಾಯಕ, ಶಿವಪ್ಪನಾಯಕ, ರಾಣಿಚೆನ್ನಮ್ಮಾಜಿ ಮೊದಲಾದವರು ಅತ್ಯಂತ ಗಣ್ಯರು. ಈ ರಾಜರು ತಮ್ಮ ಪ್ರಜೆಗಳನ್ನೆಲ್ಲಾ ಸರ್ವಸಮತಾಭಾವದಿಂದ ಕಾಣುತ್ತಿದ್ದರು. ಇವರು ಉಜ್ವಲ ದೇಶಾಭಿಮಾನಿಗಳಾಗಿಯೂ, ವಿದ್ಯಾಭಿಮಾನಿಗಳಾಗಿಯೂ ಕಂಗೊಳಿಸಿದರು. ಕೆಳದಿಯ ರಾಜರು ವಿಜಯನಗರ ಸಾಮ್ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿದುದೂ, ಚೆನ್ನಮ್ಮಾಜಿಯು ರಾಜಾರಾಮನನ್ನು ಕಾಪಾಡಿದುದೂ, ಇಮ್ಮಡಿ ಸೋಮಶೇಖರನಾಯಕನ ಕಾಲದಲ್ಲಿ ಮೊಗಲಾಯರು ಕೆಳದಿಯ ರಾಜರ ಸಹಾಯ ಬೇಡಿದುದೂ, ರಾಜ್ಯದಲ್ಲಿ ಕಂದಾಯ ಕಾಣಿಕೆ ವ್ಯವಸ್ಥೆಗೊಳಿಸಿದುದೂ, ವಿದ್ವಾಂಸರಿಗೆ ಪ್ರೋತ್ಸಾಹವಿತ್ತುದೂ, ಗುಡಿಗೋಪುರಗಳನ್ನು ಕಟ್ಟಿಸಿದುದೂ, ಗೋಬ್ರಾಹ್ಮಣರನ್ನು ರಕ್ಷಿಸಿದುದೂ ಇವೆಲ್ಲವೂ ಶ್ಲಾಘ್ಯವಾದಸಂಗತಿಗಳಾಗಿವೆ.

ಕ್ರಿ.ಶ. ೧೫೦೦ ರಲ್ಲಿ ಸ್ಥಾಪಿತವಾದ ಕೆಳದಿಯ ರಾಜ್ಯವು ಕ್ರಿ.ಶ. ೧೭೬೩ ರಲ್ಲಿ ಕೊನೆಗೊಂಡಿತೆಂದು ಈ ಹಿಂದೆಯೇ ಹೇಳಿದೆ. ಈ ರಾಜ್ಯವು ಬದುಕಿದ ಕಾಲ ೨೬೩ ವರ್ಷಗಳೆಂದಾಯಿತು. ಈ ಅವಧಿಯಲ್ಲಿ ಕೆಳದಿಯ ರಾಜರು ಕರ್ಣಾಟಕದ ಹಾಗೂ ಭಾರತದ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಸ್ಥಿರಪಡಿಸುವ ಮಹತ್ಕಾರ್ಯಗಳನ್ನು ಮಾಡಿದ್ದಾರೆ. ದುರದೃಷ್ಟದಿಂದ

ಹೈದರಲ್ಲೀ ಖಾನನು ಈ ಹಿಂದೆ ಕೆಳದಿಯಲ್ಲಿ ಮಂತ್ರಿಯಾಗಿದ್ದ ಲಿಂಗಣ್ಣನೆಂಬ ದೇಶದ್ರೋಹಿಯ ನೆರವನ್ನು ಪಡೆದು ಬಿದನೂರು ರಾಜ್ಯದ ರಹಸ್ಯಗಳನ್ನೆಲ್ಲಾ ಅವನಿಂದ ತಿಳಿದು ಕೆಳದಿಯ ಮೇಲೆ ಬಲವಾದ ಮುತ್ತಿಗೆಯನ್ನು ಹಾಕಿದನು. ಪ್ರಬಲನಾದ ಶತ್ರುವು ಸನ್ನಿಹಿತನಾದಾಗ ಕೆಳದಿಯ ಮಿತ್ರನಾದ ಸವಣೂರು ನವಾಬನ ಸಹಾಯವನ್ನು ಪಡೆದು ರಾಣಿ ವೀರಮ್ಮಾಜಿಯು ಹೈದರನ ಕೂಡೆ ಯುದ್ಧಮಾಡಲು ಸಂಕಲ್ಪಿಸಿದಳು. ಆದರೆ ಹೇಡಿಗಳೂ ಅವಿವೇಕಿಗಳೂ ಆದ ಮಂತ್ರಿಗಳ ಸಲಹೆಯಂತೆ ಬಿದನೂರಿನ ಹತ್ತಿರ ಬಂದು ಬೀಡುಬಿಟ್ಟಿದ್ದ ಹೈದರನಿಗೆ ಭಾರಿ ನಜರನ್ನೂ, ಬಿನ್ನಹ ಪತ್ರವನ್ನೂ ಬರೆದು ಕಳುಹಿಸಿದಳು. ಧೂರ್ತನಾದ ಹೈದರನು ಪ್ರತಿಪಕ್ಷವು ದುರ್ಬಲವಾಗಿರುವುದನ್ನು ಅರಿತು, ರಾಜಿಗೆ ಒಪ್ಪದೆ ರಾಣಿಯು ತನಗೆ ಸೆರೆಯಾಗಬೇಕೆಂದೂ, ಅವಳು ಶ್ರೀರಂಗ ಪಟ್ಟಣದಲ್ಲಿ ಬಂದಿಯಾಗಿ ಸುಖವಾಗಿರಬಹುದೆಂದೂ, ಇಲ್ಲದಿದ್ದರೆ ಕೆಳದಿಯ ರಾಜ್ಯವನ್ನು ಕೈವಶಮಾಡಿಕೊಳ್ಳುವುದಾಗಿಯೂ ಹೇಳಿ ಕಳುಹಿಸಿದನು. ಹೈದರನ ಈ ಅಹಂಕಾರದ ಮಾತುಗಳಿಗೆ ಖತಿಗೊಂಡ ಸ್ವಾಭಿಮಾನಿ ರಾಣಿ ವೀರಮ್ಮಾಜಿಯು ಅವನ ಕೂಡೆ ಯುದ್ಧಮಾಡುವುದನ್ನು ನಿಶ್ಚಯಿಸಿದಳು. ಸುಮಾರು ಒಂದು ತಿಂಗಳಕಾಲ ಹೈದರನು ತನ್ನ ಪ್ರಬಲವಾದ ಸೈನ್ಯದೊಡನೆ ಬಿದನೂರು ಕೋಟೆಯ ಮೇಲೆ ಲಗ್ಗೆಯನ್ನು ನಡೆಸಿದನು. ಹೈದರನ ಸೈನ್ಯದಲ್ಲಿ ಆಧುನಿಕ ಯುದ್ಧ ಸಾಮುಗ್ರಿಗಳಾದ ಬಂದೂಕು, ಫಿರಂಗಿಗಳು ಅಧಿಕವಾಗಿದ್ದವು. ಕೆಳದಿಯ ಸೈನಿಕರು ಪರಾಕ್ರಮದಿಂದ ಯುದ್ಧಮಾಡಿದರು. ಕೇವಲ ಅವರ ಬಿಲ್ಲು, ಬಾಣಗಳು, ಕತ್ತಿ ಕಠಾರಿಗಳು, ಶತ್ರುಪಕ್ಷದ ಫಿರಂಗಿ ಬಂದೂಕಗಳ ಮುಂದೆ ನಿಲ್ಲಲಾರದೆ ಕೆಳದಿ ಸೈನಿಕರು ಸೋತುಹೋದರು. ಹೈದರನ ಸೈನ್ಯವು ಕೋಟೆಯೊಳಗೆ ನುಗ್ಗಿತು. ರಾಣಿ ವೀರಮ್ಮಾಜಿ ಹತಾಶಳಾಗಿ ಅರಮನೆಗೆ ಬೆಂಕಿಹಚ್ಚಿ ಕಣ್ಣೀರು ಸುರಿಸುತ್ತಾ ನವರತ್ನಾಭರಣಗಳನ್ನು ಪುಡಿ ಪುಡಿಮಾಡಿ ಬಿಸಾಡಿ ಅರಮನೆಯ ಹಿಂಭಾಗದ ಗುಡ್ಡದಮರೆಯಲ್ಲಿ ಯಾರಿಗೂ ತಿಳಿಯದಂತೆ ತನ್ನ ದತ್ತುಮಗ ಸೋಮಶೇಖರ ನಾಯಕನ ಸಹಿತ ಮಲೆನಾಡಿನ ದುರ್ಗಮವಾದ ಬಲ್ಲಾಳರಾಯನ ದುರ್ಗಕ್ಕೆ ತಲೆತಪ್ಪಿಸಿ ಕೊಂಡು ಹೋದಳು. ಹೈದರನು ಅರಮನೆಯ ಬೆಂಕಿಯನ್ನು ಆರಿಸಿ

ಬಿದನೂರು ಅರಮನೆಯನ್ನು ವಶಪಡಿಸಿಕೊಂಡನು. ವಿಪುಲವಾದ ಐಶ್ವರ್ಯವನ್ನೆಲ್ಲಾ ಅಪಹರಿಸಿದನು. ವೀರಮ್ಮಾಜಿಯು ಚರಿತ್ರಕಾರರ ಆಕ್ಷೇಪಣೆಗೆ ಸಿಕ್ಕಿಹೋಗಿದ್ದಾಳೆ. ನಮಗೆ ತಿಳಿದಂತೆ ಕೆಳದಿ ರಾಜ್ಯಕ್ಕೆ ಸಂಬಂಧಿಸಿದ ಯಾವ ಪ್ರಾಚೀನ ಗ್ರಂಥಗಳಲ್ಲೂ ವೀರಮ್ಮಾಜಿಯ ಮೇಲಿನ ನಿಂದೆಗಳು ಗೋಚರವಾಗಿಲ್ಲ. ಇದೆಲ್ಲವೂ ರಾಜ್ಯಾಪಹಾರಕ್ಕಾಗಿ ಹೈದರನು ಮಾಡಿಸಿದ ಅಪಪ್ರಚಾರವೆಂದು ತೋರುತ್ತದೆ. ಇಂತಹ ಪ್ರಸಂಗಗಳನ್ನು ಇತಿಹಾಸಕಾರರೂ, ಆಧುನಿಕ ಗ್ರಂಥಕಾರರೂ ಅತ್ಯಂತ ಸತ್ಯನಿಷ್ಠ ದೃಷ್ಟಿಯಿಂದ ನೋಡುವುದು ಅಗತ್ಯವೆಂದು ಕಾಣುತ್ತದೆ. ಒಬ್ಬ ರಾಣಿಯು ಹಾಗೂ ಸ್ತ್ರೀ ಸಮಾಜದ ಗೌರವದ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇಕು. ಕನ್ನಡ ಜನತೆ ಕೆಳದಿಯ ರಾಜರ ಅದರಲ್ಲೂ ವೀರರಾಣಿ ಚೆನ್ನಮ್ಮಾಜಿಯ ಚರಿತ್ರಾವ ಲೋಕನದಿಂದ ಹೆಚ್ಚಿನ ಸ್ಫೂರ್ತಿಯನ್ನೂ, ದೇಶಾಭಿಮಾನವನ್ನೂ ಹೊಂದುವರೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು.

ಈ ರಾಜ್ಯವು ಮೊದಲು ಕೆಳದಿಯಲ್ಲಿ ಸ್ಥಾಪನೆಯಾಯಿತು. ಅನಂತರ ಸದಾಶಿವನಾಯಕನ ಕಾಲದಲ್ಲಿ ಇಕ್ಕೇರಿಯಲ್ಲಿ ರಾಜ್ಯಾಡಳಿತ ನಡಯಿತು. ಅನಂತರ ವೀರಭದ್ರ ನಾಯಕನ ಕಾಲದಿಂದ ಇಕ್ಕೇರಿಯಿಂದ ಬಿದನೂರಿಗೆ ರಾಜಧಾನಿ ಬದಲಾಯಿತು. ಚರಿತ್ರೆಯಲ್ಲಿ ಕೆಳದಿ ರಾಜ್ಯ, ಇಕ್ಕೇರಿ ಅರಸುಮನೆತನ, ಬಿದನೂರು ರಾಜ್ಯ ಇವೆಲ್ಲವೂ ಒಂದೇ ರಾಜ್ಯದ ಬೇರೆ ಬೇರೆ ಹೆಸರುಗಳೆಂಬುದು ಗಮನಾರ್ಹವಾದುದು.

೧೫. ಸಿಂಹಾವಲೋಕನ

ರಾಣಿ ಚೆನ್ನಮ್ಮಾಜಿಯ ಚರಿತ್ರೆ ಹಾಗೂ ಕೆಳದಿಯ ರಾಜಮನೆತನದ ಇತಿಹಾಸದಿಂದ ನಾವು ಅನೇಕ ಮಹತ್ವದ ಪಾಠಗಳನ್ನು ಕಲಿತುಕೊಳ್ಳಬಹುದಾಗಿದೆ. ರಾಜ್ಯಭಾರವನ್ನು ಮಾಡತಕ್ಕವರು ತಾವು ವೈಯಕ್ತಿಕವಾಗಿ ಯಾವ ಧರ್ಮಕ್ಕೆ ಸೇರಿದವರಾಗಿದ್ದರೂ ರಾಜಕೀಯವಾಗಿ ಸಕಲ ಧರ್ಮದವರನ್ನು ಸಮಾನವಾಗಿ ಕಾಣಬೇಕು. ಸು. ೨೦೦೦ ವರ್ಷಗಳ ಸುದೀರ್ಘವಾದ ಕರ್ಣಾಟಕದ ಚರಿತ್ರೆಯಲ್ಲಿ ನಮ್ಮ ಕನ್ನಡ ರಾಜರು ಈ ಉದಾತ್ತವಾದ ಧರ್ಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಸುಪ್ರಸಿದ್ಧರಾದ ಹೊಯ್ಸಳ ರಾಜರು ಬೇಲೂರಿನಲ್ಲಿ ವಿಷ್ಣು ದೇವಾಲಯವನ್ನು, ಹಳೇಬೀಡಿನಲ್ಲಿ ಶಿವ ದೇವಾಲಯವನ್ನೂ, ಜೈನರ ಬಸದಿಗಳನ್ನೂ ಕಟ್ಟಿಸಿರುವುದನ್ನು ನಾವು ಇಲ್ಲಿ ನೆನಸಿಕೊಳ್ಳಬಹುದು. ಅಂತೆಯೇ ಚರಿತ್ರೆಯಲ್ಲಿ ವಿಖ್ಯಾತರಾಗಿರುವ ಬಾದಾಮಿಯ ಚಾಲುಕ್ಯರು ತಮ್ಮ ರಾಜಧಾನಿಯಾದ ವಾತಾಪಿಯಲ್ಲಿ ನಿರ್ಮಿಸಿರುವ ಗುಹಾಂತರ್ಗತ ದೇವಾಲಯಗಳಲ್ಲಿ (ಮೇಣದ ಬಸದಿಗಳು) ಶೈವ, ವೈಷ್ಣವ, ಜೈನ ಮೊದಲಾದ ಎಲ್ಲ ಮತದವರ ಕವಿಗಳನ್ನು ಕೊರೆಸಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು. ಅಂತೆಯೇ ನಮ್ಮ ರಾಷ್ಟ್ರದ ಚರಿತ್ರೆಯಲ್ಲಿ ಪ್ರಖ್ಯಾತಿಯನ್ನು ಪಡೆದಿರುವ ಮಾನ್ಯಖೇಟದ ರಾಷ್ಟ್ರಕೂಟರು ಎಲ್ಲೋರದ ಬೆಟ್ಟದಲ್ಲಿ (ಔರಂಗಾಬಾದದ ಸಮೀಪ) ಲೋಕೋತ್ತರವಾದ ಶಿಲ್ಪಕಲಾ ವೈಭವದಿಂದ ಶೋಭಿಸುವ ಶೈವ, ವೈಷ್ಣವ, ಜೈನ, ಬೌದ್ಧ ಗವಿಗಳನ್ನು ಕೊರೆಸಿರುವುದನ್ನು ಸ್ಮರಿಸಿಕೊಳ್ಳಬಹುದು. ಅಂತೆಯೇ ಎಂದೂ ಮರೆಯದ ಸಾಮ್ರಾಜ್ಯವೆನಿಸಿದ ವಿಜಯನಗರದಲ್ಲಿ ಆದರ್ಶ ಪ್ರಭುವಾದ ಬುಕ್ಕರಾಯನು ವೈಷ್ಣವರು ಮತ್ತು ಜೈನರ ಮನಸ್ತಾಪವನ್ನು ಚಕ್ರವರ್ತಿಯಾದ ತಾನೇ ಬಂದು ಆ ಉಭಯರೂ ಒಂದೇ ಸನಾತನ ಧರ್ಮದ ಮಕ್ಕಳೆಂಬುದನ್ನು ಮನವರಿಕೆ ಮಾಡಿಕೊಟ್ಟು, ಉಭಯರಿಗೂ ಸ್ನೇಹ ಉಂಟಾಗುವಂತೆ ಮಾಡಿದ ಕಥೆ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ

ವಿಜಯನಗರದ ರಾಜಧಾನಿಯಲ್ಲಿ ಮಹಮ್ಮದೀಯರ ಪ್ರಾರ್ಥನಾ ಮಂದಿರವಾದ ಮಸೀದಿಯನ್ನು ಚಕ್ರವರ್ತಿಗಳೇ ಕಟ್ಟಿಸಿಕೊಟ್ಟಿರುವರೆಂಬುದಕ್ಕೆ ಇಂದು ಅಲ್ಲಿ ಸಾಕ್ಷಿಯಿದೆ. ಈ ಉದಾತ್ತವಾದ ಪರಂಪರೆಯನ್ನೇ ವಿಜಯನಗರದ ಅಧೀನ ರಾಜ್ಯಗಳೆನಿಸಿದ ಮೈಸೂರಿನ ಒಡೆಯರು ಮತ್ತು ಕೆಳದಿಯ ನಾಯಕರು ನಡೆಸಿಕೊಂಡು ಬಂದಿರುವರೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ.

ಪ್ರಕೃತ, ಕೆಳದಿಯ ರಾಜರು ಇಕ್ಕೇರಿಯ ಅರಸರು ಅಥವಾ, ಬಿದನೂರಿನ ದೊರೆಗಳು ಮುಸಲ್ಮಾನರಿಗೆ ಅವರ ಧರ್ಮ ಸ್ವಾತಂತ್ರವನ್ನು ಕಲ್ಪಿಸಿಕೊಟ್ಟು ಅವರಿಗೆ ಶಾಸನಗಳನ್ನು ಹಾಕಿಕೊಟ್ಟಿರುವ ವಿಷಯ ಗಮನಾರ್ಹವಾಗಿದೆ.

ಬಿದನೂರಿನ ರಾಜರ ಈ ಉದಾತ್ತ ಗುಣವನ್ನು ಪ್ರಕಾಶಪಡಿಸುವ ಈ ವಿಷಯವನ್ನು ಕುರಿತು ಸುಪ್ರಸಿದ್ಧ ಕರ್ಣಾಟಕ ಗ್ರಂಥಕಾರರೂ, ಕೀರ್ತಿಶೇಷರೂ ಆದ ಶ್ರೀ ಎಂ. ಎಸ್. ಪುಟ್ಟಣ್ಣನವರು "ಇಕ್ಕೇರಿ ಸಂಸ್ಥಾನದ ಚರಿತ್ರೆ" ಎಂಬ ಗ್ರಂಥದಲ್ಲಿ ಈ ಮುಂದೆ ಹೇಳುವಂತೆ ಬರೆದಿದ್ದಾರೆ: "ಮುಸಲ್ಮಾನರಿಗೆ ಕೊಟ್ಟ ಇನಾಮತಿಗೆ ತಾಮ್ರಶಾಸನ........ಕವಲೇದುರ್ಗದಲ್ಲಿ ಸೈಯದ್ ಹಸನ್ ಸಾಹೇಬರು ದೊರೆತದ್ದು,

॥ ಶ್ರೀ ಸದಾಶಿವ ॥

ನಮಸ್ತುಂಗ ಶಿರಶ್ಚುಂ ಬಿಚಂದ್ರ ಚಾಮರ ಚಾರವೆ।
ತ್ರೈಲೋಕ್ಯ ನಗರಾರಭಿ ಮೂಲಸ್ತಂ ಭಾಯಶಂಭವೆ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕವರುಷ 1550ನೆಯ ಪ್ರಭವ ಸಂವತ್ಸರದ ವೈಶಾಖ ಶುದ್ಧ 15 ಯಲ್ಲೂ ಕೆಳದಿ ವೆಂಕಟಪ್ಪ ನಾಯಕರು ಭುವನಗಿರಿ ದುರ್ಗದಲ್ಲಿ ಕಟ್ಟಿಸಿದ ಮಸೀದಿಗೆ ಕೊಟ್ಟ ಧರ್ಮ ಶಾಸನದ ಕ್ರಮವೆಂತೆಂದರೆ:—ಪ್ರಾಕು ದುರ್ಮತಿ ಸಂವತ್ಸರ ಫಾಲ್ಗುಣ ಬಹುಳ 14 ಯಲ್ಲೂ ಬಿಟ್ಟ ಸ್ವಾಸ್ತಿ ಮಡುವಂಕನಾಡ ಸೀಮೆಯೊಳಗಣ ಹಲಸಿನ ಹಳ್ಳಿ ಗ್ರಾಮದಲ್ಲೂ, ಗದ್ದೆ ಬೀಜವರಿ ಕ॥ 47 ಸಿಸ್ತು ಹ॥ 23 ಸೊಟ್ಟೆಯನ್ನು ಇನಾಮು ಬಟ್ಟೆವಾಗಿ ಆ ಗಡೆ ಸಲುವ ಸ್ವಾಮ್ಯವನ್ನು

ಪ್ರಾಕಾ ಮರ್ಯಾದೆಯಲ್ಲಿ ಆಗುಮಾಡಿಕೊಂಡು ಮಸೀದಿ ಧರ್ಮಕ್ಕೆ ಮೂಲಾ ಹಾಬ್...... ಮುಖಾಂತರ ಕಾಲಂಪ್ರತಿಯಲ್ಲೂ ನಡೆಸಿಬಹದಕ್ಕೆ ಕೊಟ್ಟ ವರ ಶಾಸನ.

ಶ್ರೀ ವೆಂಕಟಾದ್ರಿ,

ಇದು ಹಿರಿಯ ವೆಂಕಟಪ್ಪನಾಯಕನ ದಿವಸದಲ್ಲಿ ಕೊಡಲ್ಪಟ್ಟದ್ದು. (ಪುಟ ಪೀಠಿಕೆ 20–21)

ಕೆಳದಿಯ ರಾಜರಲ್ಲಿ ವೆಂಕಟಪ್ಪನಾಯಕನು ಅತ್ಯಂತ ಪ್ರಮುಖ ನಾದವನು. ಇವನು ಪರಾಕ್ರಮಿಯೂ ರಾಜನೀತಿಜ್ಞನೂ ಆಗಿದ್ದನು. ಇವನಂತೆಯೇ ವೀರ ಶಿವಪ್ಪನಾಯಕನೂ ಕೂಡ ಮಹಮ್ಮದೀಯ ಫಕೀರರಿಗೆ ಉದಾರವಾಗಿ ಸಹಾಯಮಾಡಿದ ವಿಷಯ ಕೆಳದಿ ನೃಪ ವಿಜಯ ದಲ್ಲಿ ಬಣಿಸಲ್ಪಟ್ಟಿದೆ. ಇದೇ ಅರಸನ ಇನ್ನೊಂದು ಉದಾರ ಧರ್ಮದ ಧೋರಣವನ್ನು ನಾವು ಚರಿತ್ರೆಯಲ್ಲಿ ಓದಬಹುದು. ದೊರೆಯಾದ ಹಿರಿಯ ವೆಂಕಟಪ್ಪನಾಯಕನಿಗೆ ನಾಯಕನ ಮಗ ಭದ್ರಪ್ಪವಿಜಯನಗರ ರಾಯರ ಸಂಬಂಧಿಯಾದಬೇಲೂರುವೆಂಕಟಾದ್ರಿನಾಯಕನಮಗಳನ್ನುಕೊಟ್ಟುಮದುವೆ ಯಾದ ವಿಷಯ ಕೆಳದಿ ನೃಪ ವಿಜಯದಲ್ಲಿ ನಿರೂಪಿತವಾಗಿದೆ. ಇದರಿಂದ ಈ ಶೈವ, ವೈಷ್ಣವ ಭೇದವಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ ವಿಜಯನಗರ ರಾಜ ರಲ್ಲಿ ಸಾಮ್ರಾಜ್ಯದ ವಿನಾಶಕ್ಕೆ ಆ ರಾಜ್ಯದ ಕಡೆಗಾಲದಲ್ಲಿ ಅಲ್ಲಿ ಶೈವ, ವೈಷ್ಣವ ಭೇದ ಭಾವನೆ ಉಂಟಾದುದೇ ಮುಖ್ಯ ಕಾರಣ. ಇದಕ್ಕೆ ನಿದರ್ಶನವಾಗಿ ತಾಳೀ ಕೋಟೆಯ ಹತ್ತಿರದ ರಾಕ್ಷಸ ತಂಗಡಿಗಿಯ ಯುದ್ಧ 1565 ರಲ್ಲಿ ನಡೆದ ಮೇಲೆ ಬಹಮನೀ ರಾಜ್ಯದ ಪಂಚ ಬಾದಷಹರ ಸೈನ್ಯ ವಿಜಯ ನಗರವನ್ನು ಕೊಳ್ಳೆ ಹೊಡೆಯಿತೆಂಬುದು ಪ್ರಸಿದ್ಧವಾದ ವಿಷಯವಷ್ಟೆ. ತುರುಕರ ಸೈನ್ಯವು ವಿಜಯ ನಗರದಲ್ಲಿ ಸುಮಾರು ಮೂರು ತಿಂಗಳ ಕಾಲ ವಿದ್ದಿತೆಂದು ಚರಿತ್ರಕಾರರು ಹೇಳಿದ್ದಾರೆ. ಆದರೆ ವಿಜಯ ನಗರದಲ್ಲಿ ಶತ್ರು ಪಕ್ಷದವರು ಕೇವಲ ವೈಷ್ಣವ ದೇವಾಲಯಗಳನ್ನು ಮಾತ್ರ ನಾಶಮಾಡಿ ಶಿವ ದೇವಾಲಯಗಳನ್ನು ಮಾತ್ರ ಉಳಿಸಿದುದರ ತಾತ್ಪರ್ಯವೇನೆಂಬುದನ್ನು ನಾವು ಇಲ್ಲಿ ತಿಳಿಯಬೇಕು. ಕೆಳದಿಯ ರಾಜರು ಆ ತಾಳೀ ಕೋಟೆಯ

ಯುದ್ಧದಲ್ಲಿ ವಿಜಯ ನಗರದ ಪರವಾಗಿ ಭಾಗವಹಿಸಿದ್ದರೆಂಬ ವಿಷಯವನ್ನು ಈ ಹಿಂದೆಯೇ ಹೇಳಿದೆ. ಅವರು ತಮ್ಮ ಸಾಮ್ರಾಜ್ಯವು ನಾಶವಾದುದಕ್ಕೆ ಕಾರಣವಾದ ವಿಷಯವನ್ನು ತಮ್ಮ ರಾಜ್ಯದಲ್ಲಿ ತಂದುಕೊಳ್ಳಬಾರದೆಂದು ಶೈವ, ವೈಷ್ಣವ ಭೇದಕ್ಕೆ ಅವಕಾಶವಿಲ್ಲದಂತೆ ಉದಾರ ನೀತಿಯಿಂದ ರಾಜ್ಯ ಭಾರ ಮಾಡಿದರೆಂದು ನಾವು ತರ್ಕಿಸಬಹುದು. ಈ ವಿಚಾರದಲ್ಲಿಯೂ ಹಿರಿಯ ವೆಂಕಟಪ್ಪ ನಾಯಕನು ಮಾರ್ಗದರ್ಶಕನಾಗಿರುವುದು ಶ್ಲಾಘ್ಯ ವಾದ ಸಂಗತಿಯಾಗಿದೆ.

ಯಾವುದೇ ಒಂದು ರಾಜ್ಯದಲ್ಲಿ ಅಥವಾ, ಮನೆತನದಲ್ಲಿ ಅದರ ಕೀರ್ತಿ ಗೌರವಗಳು ಬಹುಮಟ್ಟಿಗೂ ಅಲ್ಲಿನ ಸ್ತ್ರೀಯರನ್ನು ಅವಲಂಬಿಸಿರುತ್ತದೆ. ಇಂಗ್ಲೆಂಡಿನ ರಾಣಿ ಎಲಿಜಬೆತ್ ತನ್ನ ರಾಜ್ಯ ರಕ್ಷಣೆಗಾಗಿ ತಾನು ವಿವಾಹ ವನ್ನೇ ಮಾಡಿಕೊಳ್ಳದೆ ಆಗ ಆ ರಾಜ್ಯದಲ್ಲಿ ಹಬ್ಬಿದ್ದ ಪ್ರಾಟೆಸ್ಟೆಂಟ್ ಮತ್ತು ರೋಮನ್ ಕ್ಯಾಥಲಿಕ್ ಎಂಬ ಯಾವ ಪಂಗಡಕ್ಕೂ ಸೇರದೆ ಆದರ್ಶ ಪ್ರಾಯವಾಗಿ ರಾಜ್ಯಭಾರ ಮಾಡಿದ ಸಂಗತಿಯನ್ನು ನಾವು ಇಂಗ್ಲೆಂಡಿನ ಚರಿತ್ರೆಯಲ್ಲಿ ಓದಿದ್ದೇವೆ. ಆ ರಾಜ್ಯದಲ್ಲಿ ಮುಂದೆ ವಿಖ್ಯಾತಳಾದ ವಿಕ್ಟೋರಿಯಾ ಮಹಾರಾಣಿಯೂ ಕೂಡ ಇಂತಹ ಉಜ್ವಲವಾದ ಚರಿತ್ರೆ ಯಿಂದಲೇ ಪರಿಶೋಭಿಸಿಲ್ಪಟ್ಟದ್ದಾಳೆಂಬುದು ಸರ್ವ ಶ್ರುತವಾಗಿದೆ.

ಮೈಸೂರಿನ ರಾಜ್ಯ ಚರಿತ್ರೆಯಲ್ಲಿ ಕೂಡ ಮಹಾರಾಣಿ ದೇವಾಜಮ್ಮಣ್ಣಿ ಯವರೂ, ಮಹಾರಾಣಿ ಲಕ್ಷಮ್ಮಣ್ಣಿಯವರೂ ಅನಂತರ ರಾಣೀ ವಿಲಾಸ ಸನ್ನಿಧಾನದವರೂ ರಾಜ್ಯಕ್ಕೆ ವಿಪತ್ತು ಬಂದಾಗ ತಮ್ಮ ಸದಾಚರಣೆ ಮತ್ತು ಬುದ್ಧಿ ವಿವೇಕಗಳ ಫಲವಾಗಿ ರಾಜ್ಯವನ್ನು ಅಪಾಯದಿಂದ ಉಳಿಸಿದ ವಿಷಯವನ್ನು ಮೈಸೂರು ಚರಿತ್ರೆಯಲ್ಲಿ ಓದಿದ್ದೇವೆ. ಅಂತೆಯೇ ಕೆಳದಿ ರಾಜರ ಚರಿತ್ರೆಯಲ್ಲಿ ಕೂಡ ಆ ರಾಣೀ ವಾಸದ ಸ್ತ್ರೀಯರು ಅತ್ಯಂತ ಸಾಧ್ವಿಯರೂ, ಧೈರ್ಯ ಸ್ಥೈರ್ಯಾದಿ ಸದ್ಗುಣ ವುಳ್ಳವರೂ, ತ್ಯಾಗಶೀಲರೂ ಆಗಿದ್ದಾರೆಂಬುದನ್ನು ನಾವು ಕೆಳದಿ ನೃಪ ವಿಜಯದಲ್ಲಿ ಮೇಲಿಂದ ಮೇಲೆ ಓದುತ್ತೇವೆ, ವೀರ ವೆಂಕಟಪ್ಪನಾಯಕನ ಪತ್ನಿಯರೇ ಮೊದಲಾಗಿ ಹಲವಾರು ಮಂದಿ ಮಹಾರಾಣಿಯರು ಅಂದರೆ

ಭದ್ರಪ್ಪನಾಯಕನ ಉಭಯ ಪತ್ನಿಯರು, ವೀರಭದ್ರ ನಾಯಕರ ಪತ್ನಿ ಕೊಲ್ಲೂರು ಅಮ್ಮಾಜಿ ಶಿವಪ್ಪನಾಯಕರ ಉಭಯ ಪತ್ನಿಯರು ಲಿಂಗಮ್ಮಾಜಿ ಮತ್ತು ನಾಗಮ್ಮಾಜಿ, ಮೊದಲನೆಯ ವೆಂಕಟಪ್ಪನಾಯಕನ ಪತ್ನಿ ಭದ್ರಮ್ಮಾಜಿ ಮೊದಲಾದವರು ತಮ್ಮ ಪತಿಯ ಮರಣಾನಂತರ ಅವರ ಸಮಾಧಿಯ ಜತೆಯಲ್ಲೇ ಮರಣಹೊಂದಿದ ವಿಚಾರ ಕೆಳದಿ ನೃಪ ವಿಜಯದಲ್ಲಿ ಮೇಲಿಂದ ಮೇಲೆ ಬಂದಿದೆ.

ಇವೆಲ್ಲಕ್ಕೂ ಮಿಗಿಲಾಗಿ ನಮ್ಮ ಕಥಾ ನಾಯಿಕೆ ರಾಣಿ ಚೆನ್ನಮ್ಮಾಜಿ ಕೆಳದಿಯ ರಾಣಿಯು ರತ್ನಪ್ರಾಯಳಾಗಿದ್ದಾಳೆ. ಇವಳ ಪತಿ ಹಿರಿಯರ ಸೋಮಶೇಖರ ನಾಯಕನು ಚಿಕ್ಕ ವಯಸ್ಸಿನಲ್ಲಿಯೇ ಕಾಲವಾದ ಸಂಗತಿ ಈ ಗ್ರಂಥದ ಮೊದಲಲ್ಲೇ ನಿರೂಪಿತವಾಗಿದೆ, ಪರಿಶುದ್ಧ ಚರಿತ್ರೆಯು ಈ ಮಹಾರಾಣಿ ತನ್ನ ದೇಹಾಬಿಮಾನವನ್ನು ಮರೆತು, ಸನ್ಯಾಸಿಯಂತೆ ಕಾಮ ಕ್ರೋಧಗಳನ್ನೂ ಗೆದ್ದು ಅಸಾಧಾರಣವಾದ ಕಾರ್ಯಗಳನ್ನು ಸಾಧಿಸಿ ತನ್ನ ಗೌರವವನ್ನೂ, ರಾಜ್ಯದ ಗೌರವವನ್ನೂ ಉಳಿಸಿ ಹೋಗಿರುವ ವಿಷಯವನ್ನು ಎಷ್ಟು ಕೊಂಡಾಡಿದರೂ ಸಾಲದು ಹಾಗೆಯೇ ಇಂದು ಚರಿತ್ರೆಯಲ್ಲಿ ದುರದೃಷ್ಟಶಾಲಿನಿಯೆನಿಸಿಕೊಂಡಿರುವ ರಾಣಿ ವೀರಮ್ಮಾಜಿಯು ಪ್ರಚಂಡವಾದ ಹೈದರನ ಸೈನ್ಯ ಬಿದನೂರಿನ ಮುಂದೆ ಬಂದು ನಿಂತಾಗ ರಾಜದ್ರೋಹಿಗಳು ರಾಜ್ಯದ ತುಂಬ ಪಿತೂರಿಯನ್ನು ನಡೆಸುತ್ತಿದ್ದಾಗ ತಾನು ತನ್ನ ಪ್ರಾಣದ ಹಂಗನ್ನು ತೊರೆದು ಸಮಯೋಚಿತವಾಗಿ ಸವಣೂರು ನವಾಬನ ಸಹಾಯವನ್ನು ಪಡೆದು ಶತ್ರುಗಳನ್ನು ಕಡೆಯತನಕ ಅಂದರೆ ಸುಮಾರು ಒಂದು ತಿಂಗಳ ಕಾಲ ಪರ್ಯಂತವಾಗಿ ಎದುರಿಸಿದ ವಿಷಯ ಸಾಮಾನ್ಯವಾದುದಲ್ಲ. ಅನೇಕ ಗ್ರಂಥಕಾರರು ವೀರಮ್ಮಾಜಿಯ ಮೇಲೆ ಮಾಡುವ ದೋಷಾರೋಪಣೆಗಳು ಪ್ರಾಚೀನ ಗ್ರಂಥದಲ್ಲಿ ನಿರೂಪಿತವಾಗಿಲ್ಲವೆಂಬ ವಿಷಯವನ್ನು ನಾನು ಈ ಮೊದಲೇ ನಿರೂಪಿಸಿದ್ದೇನೆ. ವೀರಮ್ಮಾಜಿಯು ಅತ್ಯಂತ ಧಾರ್ಮಿಕಳೂ ಉದಾರಳೂ ಎಂಬುದಕ್ಕೆ ಚರಿತ್ರೆಯಲ್ಲಿ ನಿದರ್ಶನಗಳಿವೆ. ಈ ಮೇಲ್ಕಂಡ ಎಲ್ಲ ನಿದರ್ಶನಗಳಿಂದ ಕೆಳದಿಯ ರಾಜ್ಯದ ರಾಣಿಯರು

ಅತ್ಯಂತ ಶ್ರೇಷ್ಠವಾದ ಹಾಗೂ ಉದಾತ್ತವಾದ ಜೀವನವನ್ನು ನಡೆಸಿದರೆಂಬ ವಿಷಯವನ್ನು ನಾವು ತಿಳಿಯಬಹುದಾಗಿದೆ.

ನಾನು ಇದುವರೆಗೆ ನಿರೂಪಿಸಿದ ನಿದರ್ಶನಗಳಿಂದ ಕೆಳದಿಯ ರಾಜರು ಮೂಲಭೂತವಾದ ಧರ್ಮಗಳನ್ನು ಹಿಡಿದು ನಡೆದುದರಿಂದಲೇ ಪ್ರಬಲ ಶತ್ರುಗಳ ಹೊಡೆತದಿಂದ ಪಾರಾಗಿ ಸುಮಾರು ೨೬೩ ವರ್ಷಗಳ ಕಾಲ ಕರ್ಣಾಟಕದ ಪಶ್ಚಿಮ ಭಾಗದಲ್ಲಿ ರಾಜ್ಯಭಾರ ಮಾಡಿದರೆಂದು ನಾವು ಊಹಿಸಬಹುದು. ಈ ರಾಜ್ಯದ ಕೀರ್ತಿಗೂ ಭದ್ರತೆಗೂ ಕಥಾ ನಾಯಕಿಯಾದ ಚನ್ನಾಮ್ಮಾಜಿಯ ಉದಾತ್ತ ಗುಣಗಳು ಬಹುಮಟ್ಟಿಗೆ ಕಾರಣವಾಗಿವೆಯೆಂಬುದನ್ನು ಈ ಗ್ರಂಥಾವಲೋಕನದಿಂದ ನಾವು ಅರಿಯಬಹುದಾಗಿದೆ.

ಅನುಬಂಧ–೧

ಕೆಳದಿಯ ರಾಜ್ಯದ ಅರಸರು

ಇಕ್ಕೇರಿಯ ನಾಯಕರಲ್ಲಿ ಯಾರು ಯಾರು ಸುಮಾರು ಎಷ್ಟು ಕಾಲ ರಾಜ್ಯವಾಳಿದರು ಎಂಬುದನ್ನು ಈ ಪಟ್ಟಿಯಲ್ಲಿ ಕಾಣಬಹುದು :

	ಆಳಿದವರು	ಕಾಲ-(ಸುಮಾರು)		ವರ್ಷ.(ಸುಮಾರು.)
೧.	ಚೌಡಪ್ಪನಾಯಕ	(೧೪೯೯–೧೫೪೦)	....	೪೦
೨.	ಸದಾಶಿವನಾಯಕ	(೧೫೪೦–೧೫೬೫)	....	೨೫
೩.	ದೊಡ್ಡ ಸಂಕಣ್ಣನಾಯಕ .	(೧೫೬೬–೧೫೭೧)	....	೫
೪.	ಚಿಕ್ಕಸಂಕಣ್ಣನಾಯಕ	(೧೫೭೧–೧೫೮೬)	....	೧೫
೫.	ರಾಮರಾಜನಾಯಕ			
೬.	ಹಿರಿಯ ವೆಂಕಟಪ್ಪನಾಯಕ	(೧೫೮೬–೧೬೨೯)	....	೪೧
೭.	ವೀರಭದ್ರನಾಯಕ	(೧೬೨೯–೧೬೪೫)	....	೧೬
೮.	ವೀರ ಶಿವಪ್ಪನಾಯಕ	(೧೬೪೫–೧೬೬೦)	....	೧೫
೯.	ಇಮ್ಮಡಿ ವೆಂಕಟಪ್ಪನಾಯಕ	(೧೬೬೦–೧೬೬೧)	....	೧
೧೦.	ಭದ್ರಪ್ಪನಾಯಕ	(೧೬೬೨–೧೬೬೪)	....	೨
೧೧.	೧ನೇ ಸೋಮಶೇಖರನಾಯಕ	(೧೬೬೪–೧೬೭೧)	....	೭
೧೨.	ರಾಣಿ ಚೆನ್ನಮ್ಮಾಜಿ	(೧೬೭೧–೧೬೯೬)	....	೨೫
೧೩.	೧ನೇ ಬಸವಪ್ಪನಾಯಕ	(೧೬೯೬–೧೭೧೪)	....	೨೮
೧೪.	ಇಮ್ಮಡಿ ಸೋಮಶೇಖರನಾಯಕ	(೧೭೧೪–೧೭೩೯)	....	೨೫
೧೫.	ಬೂದಿ ಬಸವಪ್ಪನಾಯಕ	(೧೭೩೯–೧೭೫೫)	....	೧೬
೧೬.	ಚೆನ್ನಬಸವನಾಯಕ	(೧೭೫೫–೧೭೫೭)	....	೨
೧೭.	ರಾಣಿ ವೀರಮ್ಮಾಜಿ	(೧೭೫೭–೧೭೬೩)	....	೬
೧೮.	ಮುಮ್ಮಡಿ ಸೋಮಶೇಖರನಾಯಕ		....	—

ಮೊದಲು ಕೆಳದಿ, ಆ ಮೇಲೆ ಇಕ್ಕೇರಿ, ಅನಂತರ ಬಿದನೂರು ಈ ಅರಸರ ರಾಜಧಾನಿ ಎನಿಸಿದ್ದಿತು. ಇವರ ಲಾಂಛನ 'ಗಂಡಭೇರುಂಡ' ಕೆಳದಿ ವೀರಭದ್ರ ದೇವಾಲಯದಲ್ಲಿ ಇದನ್ನು ಕೆತ್ತಲಾಗಿದೆ.

ಅನುಬಂಧ-೨.

ಭೂದುರ್ಗ:—ಭೂಮಿಯ ಮೇಲೆ ಶತ್ರುಗಳಿಗೆ ಪ್ರವೇಶಕ್ಕೆ ಅವಕಾಶವಾಗದಂತೆ ಕಟ್ಟಿರುವ ಕೋಟೆ. ಉದಾ: ಶ್ರೀರಂಗಪಟ್ಟಣದ ಕೋಟೆ. ಬೆಂಗಳೂರು ಕೋಟೆ ಇತ್ಯಾದಿ.

ಪ್ರಸ್ತಾವನೆ ಪುಟ ೫.

ದತ್ತಿ :—ರಾಜ ಮಹಾರಾಜರು, ಪಾಳೆಯಗಾರರು, ಶ್ರೀಮಂತರು ಮೊದಲಾದವರು ದೇವಾಲಯ ಮಠಮಾನ್ಯಗಳಿಗೆ ಕೊಡುವ ಧರ್ಮ,ಭೂಮಿ ಕಾಣಿ ಇತ್ಯಾದಿ.

ಅಧ್ಯಾಯ ೨, ಪುಟ ೯.

ಗೃಹಸ್ಥಾಶ್ರಮ:—ಹಿಂದೂ ಸಮಾಜದಲ್ಲಿ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ ಎಂದು ನಾಲ್ಕು ವಿಧವಾದ ಆಶ್ರಮಗಳಿರುವುವು--

೧). ಬ್ರಹ್ಮಚರ್ಯ—ವಿದ್ಯಾಭ್ಯಾಸದ ಕಾಲ. ೨). ಗೃಹಸ್ಥ—ಸಂಸಾರ ಮಾಡುವ ಕಾಲ. ೩). ವಾನಪ್ರಸ್ಥ:—ತೀರ್ಥ ಕ್ಷೇತ್ರಗಳನ್ನು ಸಂಚರಿಸಿ ಧರ್ಮ ಸಂಗ್ರಹ ಮಾಡುವ ಕಾಲ. ೪). ಸಂನ್ಯಾಸ:—ವೈರಾಗ್ಯಭಾವದಿಂದ ಜೀವನು ಬ್ರಹ್ಮನನ್ನು ಸೇರಲು ಅನುಸಂಧಾನ ಮಾಡುವ ಕಾಲ.

ಪುಟ ೧೨.

ಚತುರಂಗಬಲ:—ಆನೆ, ಕುದುರೆ, ರಥ, ಪದಾತಿ (ಕಾಲಾಳು).

ಪುಟ ೧೬.

ಸ್ವಪ್ನ:—ಸ್ವಪ್ನ ಅಂದರೆ ಕನಸು ಎಂದರ್ಥ. ಮನುಷ್ಯನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿವೆ. ಆತ್ಮನು ಸ್ಥೂಲ ದೇಹದಲ್ಲಿ ವ್ಯವಹರಿಸುವುದಕ್ಕೆ "ಜಾಗ್ರತ್" ಅಥವಾ ಎಚ್ಚರ ಎಂದರ್ಥ.

ಸೂಕ್ಷ್ಮದೇಹದಲ್ಲಿ ವ್ಯವಹರಿಸುವುದಕ್ಕೆ "ಸ್ವಪ್ನ" ಅಥವಾ ಕನಸು ಎಂದು ಅರ್ಥ.

ಆತ್ಮನು ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳನ್ನು ಮರೆತು ನಿಶ್ಚಿಂತನಾಗಿ ನಿದ್ರಾಕಾಲದಲ್ಲಿ ಪ್ರಶಾಂತನಾಗಿರುವುದಕ್ಕೆ "ಸುಷುಪ್ತಿ" ಎಂದು ಹೆಸರು. ಇದನ್ನೇ ವೇದಾಂತ ಶಾಸ್ತ್ರಜ್ಞರು "ಅವಸ್ಥಾತ್ರಯ" ಎಂದು ಕರೆಯುತ್ತಾರೆ.

ಪುಟ ೨೦.

ನಿಕ್ಷೇಪ:—ಭೂಮಿಯಲ್ಲಿ ಹೂತಿಟ್ಟಿರುವ ಹಣ. ನಾಡಿನ ಹಾಗೂ ಮನೆಯ ಹಿರಿಯರು ಮುಂದಿನವರಿಗಾಗಿ ಭೂಮಿಯಲ್ಲಿ ಹೂತಿಟ್ಟಿರುವ ಹಣಕ್ಕೆ ನಿಧಿ ಅಥವಾ ನಿಕ್ಷೇಪ ಎಂದು ಹೆಸರು.

ಪುಟ ೨೧.

ಪಾಳೆಯಗಾರ:—ನೆರೆಹೊರೆಯ ಜನಗಳ ಮೇಲೆ ಪ್ರಭಾವವನ್ನು ಬೀರತಕ್ಕ ಬಲಶಾಲಿ ಹಾಗೂ ಹಲವಾರು ಗ್ರಾಮಗಳ ಮೇಲೆ ಯಜಮಾನಿಕೆ ನಡೆಸತಕ್ಕ ಪರಾಕ್ರಮಶಾಲಿಗೆ 'ಪಾಳೆಯಗಾರ' ಎಂದು ಹೆಸರು.

ಪುಟ ೨೩.

ಭುವನೇಶ್ವರಿ :—ಕರ್ಣಾಟಕದ ಅಭಿಮಾನ ದೇವತೆ. ಶ್ರೀ ವಿದ್ಯಾರಣ್ಯಸ್ವಾಮಿಗಳು ಪಂಪಾವಿರೂಪಾಕ್ಷನಗುಡಿಯಲ್ಲಿ ಶ್ರೀ ಭುವನೇಶ್ವರಿಯನ್ನು ಸ್ಥಾಪಿಸಿದ್ದಾರೆ. 'ಭುವನ' ಎಂಬ ಶಬ್ದಕ್ಕೆ ಪ್ರಪಂಚ ಎಂದೂ, 'ಈಶ್ವರಿ' ಅಂದರೆ ಲೋಕಮಾತೆ ಎಂದೂ ಅರ್ಥ. 'ಭುವನೇಶ್ವರಿ' ಎಂಬುದು ಜಗನ್ಮಾತೆಯಾದ ಪಾರ್ವತಿಗೆ ಪರ್ಯಾಯವಾದ ಹೆಸರು.

ಪುಟ ೨೯.

ಶಿವಸಾಯುಜ್ಯ:—ಮನುಷ್ಯನು ಸತ್ತ ಮೇಲೆ ಅವನ ಆತ್ಮವು ಪರಮೇಶ್ವರನ ಪಾದವನ್ನು ಸೇರುವುದು ಅಥವಾ ಶಿವನ ರೂಪವನ್ನೇ ಹೊಂದುವುದು. ಇದನ್ನು ಶಿವಭಕ್ತರು ಶಿವಸಾಯುಜ್ಯವೆಂದು ಕರೆಯುತ್ತಾರೆ. ಶಿವೈಕ್ಯವೆಂದೂ ಇದನ್ನೇ ಹೇಳುವರು. ಜೀವನು ದೇವರಲ್ಲಿ ಸೇರುವುದು ಎಂದು ಇದರ ಅರ್ಥ.

ಪುಟ ೩೩.

ತರಿಭೂಮಿ:—ನೀರಾವರಿಯ ಭೂಮಿ, ಭತ್ತ, ಕಬ್ಬು ಮೊದಲಾದವುಗಳನ್ನು ಬೆಳೆಯುವ ಭೂಮಿಗೆ ತರಿ ಎಂದು ಹೆಸರು. ಇದಕ್ಕೆ ಕೆರೆ, ಕಾಲುವೆಗಳ ಆಶ್ರಯವಿರುತ್ತದೆ.

ಖುಷ್ಕಿಭೂಮಿ:—ಇದು ಕೇವಲ ಮಳೆಯ ಆಶ್ರಯದಲ್ಲಿ ಬೆಳೆಯುವ ಭೂಮಿ. ಇಲ್ಲಿ, ರಾಗಿ, ಜೋಳ ಮೊದಲಾದವುಗಳನ್ನು ಬೆಳೆಯುತ್ತಾರೆ.

ಬಾಗಾಯಿತು:—ಅಡಿಕೆ, ಬಾಳೆ, ಫಲಪುಷ್ಪಗಳನ್ನು ಬೆಳೆಯುವ ಭೂಮಿಗೆ ಬಾಗಾಯಿತು ಅಥವಾ ತೋಟ ಎಂದರ್ಥ.

ಪುಟ ೩೫

ಮದೋದಕ: ಆನೆಯ ತಲೆಯಲ್ಲಿ ಸೋರುವ ಮದದ ನೀರು. ಇದನ್ನು ಮನುಷ್ಯರು ಕುಡಿದರೆ ಹುಚ್ಚು ಹಿಡಿಯುತ್ತದೆ.

ಪುಟ ೫೧.

ದಾಸೋಹ:—ಇದು "ದಾಸೋಹಂ" ಎಂಬ ಸಂಸ್ಕೃತ ಶಬ್ದದಿಂದ ಹುಟ್ಟಿದೆ. 'ನಾನು ನಿನ್ನ ಸೇವಕ' ಎಂಬುದು ಇದರ ಅರ್ಥ. ಆದರೆ ಅನುಷ್ಠಾನದಲ್ಲಿ ಬಂದ ಅತಿಥಿಗಳನ್ನು ಊಟೋಪಚಾರಗಳಿಂದ ತೃಪ್ತಿಪಡಿಸುವುದು.

ಪುಟ ೫೭.

ಪಿತೃಋಣ:—ತಂದೆ ತಾಯಿಗಳ ಸಾಲ ಎಂದರ್ಥ. ಅಂದರೆ ತಂದೆ ತಾಯಿಗಳು ಮಕ್ಕಳನ್ನು ಹೆತ್ತು ಹೊತ್ತು ಸಾಕುತ್ತಾರೆ, ವಿದ್ಯೆ ಬುದ್ಧಿಗಳನ್ನು ಕಲಿಸುತ್ತಾರೆ, ಮದುವೆ ಮುಂಜಿಗಳನ್ನು ಮಾಡುತ್ತಾರೆ, ಆಸ್ತಿಪಾಸ್ತಿಗಳನ್ನು ಕೊಡುತ್ತಾರೆ. ಅದರಿಂದ ಮಕ್ಕಳು ತಾಯಿತಂದೆಗಳಿಗೆ ಸಾಲಗಾರರಾಗುತ್ತಾರೆ. ಪಿತೃಗಳ ಆ ಸಾಲವನ್ನು, ಮಕ್ಕಳು, ತಂದೆ ತಾಯಿಗಳ ಸೇವೆಯನ್ನು ಮಾಡುವುದರಿಂದ, ವಂಶದ ಗೌರವವನ್ನು ಕಾಪಾಡುವುದರಿಂದ, ಪಿತ್ರಾರ್ಜಿತವಾದ ಆಸ್ತಿಪಾಸ್ತಿಗಳನ್ನು ರಕ್ಷಿಸಿ ತಮ್ಮ ಮಕ್ಕಳಿಗೆ ಕೊಡುವುದರಿಂದ ಆ ಪಿತೃಋಣವನ್ನು ತೀರಿಸಬಹುದೆಂದು ಶಾಸ್ತ್ರಜ್ಞರು ಹೇಳಿದ್ದಾರೆ.

ಪುಟ ೫೮.

ಇಹಪರ:-ಅಂದರೆ ಈ ಲೋಕ ಮತ್ತು ಪರಲೋಕ. ಒಬ್ಬ ಮನುಷ್ಯನಿಗೆ ಜೀವನವು ಅಥವಾ ಬಾಳು 'ಈ ಲೋಕದ ಜೀವನ, ಪರಲೋಕದ ಜೀವನ–' ಎಂದು ಎರಡು ಬಗೆಯಾಗಿದೆ ಎಂದು ಹಿಂದೂ ಧರ್ಮದಲ್ಲಿ ಹೇಳಿದೆ. ವಿವೇಕಿಗಳಾದ ಸ್ತ್ರೀಪುರುಷರು ಜತೆ ಜತೆಯಲ್ಲಿಯೇ ಇಹಪರ ಲೋಕಗಳ ಸುಖ ಶಾಂತಿಗಳಿಗಾಗಿ ಪ್ರಯತ್ನಿಸುವುದು ಅಗತ್ಯವೆನಿಸಿದೆ.

ಪುಟ ೭೩.

ದಕ್ಷಾಧ್ವರ:—ಅಂದರೆ ದಕ್ಷಬ್ರಹ್ಮನು ಮಾಡಿದ ಯಾಗ ಎಂದರ್ಥ. ಶಿವನ ಮಾವನಾದ ದಕ್ಷನು ನವಬ್ರಹ್ಮರಲ್ಲಿ ಒಬ್ಬನು. ಇವನು ಒಮ್ಮೆ ಕೈಲಾಸಕ್ಕೆ ಹೋಗಿ ಅಲ್ಲಿ ಅಳಿಯನಾದ ಪರಮೇಶ್ವರನಿಂದ ತನಗೆ ಮನ್ನಣೆ ಸಿಕ್ಕಲಿಲ್ಲವೆಂದು ಭಾವಿಸಿ ಕುಪಿತನಾಗಿ ಹಿಂದಿರುಗಿ ಅಗ್ರಪೂಜೆಗೆ ಅರ್ಹನಾದ ಶಿವನನ್ನು ಬಿಟ್ಟು ಕಾಶೀ ಕ್ಷೇತ್ರಕ್ಕೆ ಸಮೀಪದಲ್ಲಿರುವ ಕನಖನಪುರದಲ್ಲಿ-ಶಿವ ವಿರಹಿತವಾದ ಯಾಗವನ್ನು ಪ್ರಾರಂಭಿಸಿದನು. ಈ ವಾರ್ತೆಯನ್ನು ದಧೀಚಿ ಮುನಿಯ ಮುಖದಿಂದ ಶಿವನು ಕೇಳಿ ಕುಪಿತನಾಗಿ ತನ್ನ ಹಣೆಗಣ್ಣಿನಲ್ಲಿ ಹುಟ್ಟಿದ ವೀರಭದ್ರನನ್ನು ಕಳುಹಿಸಿ ಆ ಯಾಗವನ್ನು ನಾಶಮಾಡಿಸಿದನು. ಈ ಪ್ರಸಂಗದಲ್ಲಿ ದಕ್ಷನಿಗೆ ಬುದ್ಧಿಯನ್ನು ಹೇಳಲು ಹೋದ ಸತೀದೇವಿಯು (ದಕ್ಷನ ಮಗಳು) ತಂದೆಯ ಮುಖದಿಂದ ಹೊರಟ ಪತಿನಿಂದೆಯನ್ನು ಕೇಳ ಲಾರದೆ ಅಗ್ನಿಕುಂಡದಲ್ಲಿ ಬಿದ್ದು ಸುಟ್ಟುಹೋದಳು. ಇದು ಪುರಾಣದ ಕಥೆ.

ಪುಟ ೮೦.

ಪಂಚಭೂತಗಳು:—೧) ಪೃಥ್ವಿ (ನೆಲ). ೨) ಅಪ್ಪು (ನೀರು). ೩) ತೇಜ (ಬೆಂಕಿ). ೪) ವಾಯು (ಗಾಳಿ). ೫) ಆಕಾಶ (ಬಯಲು). ಇವಕ್ಕೆ ಪಂಚಭೂತಗಳೆಂದು ಹೆಸರು ವಿಶ್ವದ ಮುಖ್ಯ ವಸ್ತುಗಳಿವು..

ಪುಟ ೮೧.

ರಾಜಧರ್ಮಗಳು :— (೧) ಶತ್ರುಗಳನ್ನು ಸದೆ ಬಡಿಯುವುದು. (೨) ವಿದ್ವಾಂಸರನ್ನು ಪ್ರೋತ್ಸಾಹಿಸುವುದು. (೩) ಸಾಧುಸಂತರನ್ನು ಸಂರಕ್ಷಿಸುವುದು. (೪) ಸ್ತ್ರೀಯರನ್ನು ಗೌರವಿಸುವುದು. (೫) ಮರೆಹೊಕ್ಕ ವರನ್ನು ಕಾಪಾಡುವುದು. (೬) ಮಕ್ಕಳನ್ನು ಮಮತೆಯಿಂದ ಕಾಣುವುದು.

ಪುಟ ೧೫.

ಕೆಳದಿ :—ಇದು ಶಿವಮೊಗ್ಗಾ ಜಿಲ್ಲಾ ಸಾಗರಕ್ಕೆ ಆರು ಮೈಲಿ ದೂರ ದಲ್ಲಿದೆ. ಇಲ್ಲಿ ರಾಮೇಶ್ವರ, ವೀರಭದ್ರ ಮತ್ತು ಪಾರ್ವತೀದೇವಿ ದೇವಾಲಯ ಗಳು ಶಿಲ್ಪಕಲಾ ಪೂರ್ಣವಾಗಿವೆ. ವೀರಭದ್ರದೇವಾಲಯದ ಅಂಗಣದಲ್ಲಿ ಕೆಳದಿ ಅರಸರ ಲಾಂಛನವಾದ ಗಂಡಭೇರುಂಡವು ಕೆತ್ತಲ್ಪಟ್ಟಿದೆ. ಇದು

ಈ ಅರಸರ ಮೊದಲನೆಯ ರಾಜಧಾನಿ, ಇಲ್ಲಿ ಒಂದು ಪುರಾತನವಾದ ಜಂಗಮರ ಮಠವಿದೆ.

ಪುಟ ೨೩.

ಇಕ್ಕೇರಿ:—ಇದು ಸಾಗರಕ್ಕೆ ಮೂರು ಮೈಲಿ ದೂರದಲ್ಲಿದೆ. ಇಲ್ಲಿ ಅಘೋರೇಶ್ವರ ದೇವಾಲಯವಿದೆ. ಇಲ್ಲಿ ರಾಜರ ಅರಮನೆಯ ನೆಲಗಟ್ಟನ್ನು ನೋಡಬಹುದು. ಇಕ್ಕೇರಿ ಅಘೋರೇಶ್ವರ ದೇವಾಲಯ ಸ್ಥಳ ವಿನ್ಯಾಸವೂ, ಕಟ್ಟಡದ ಭವ್ಯತೆಯೂ ಶಿಲ್ಪಕಲಾ ದೃಷ್ಟಿಯಿಂದ ಅಮೋಘವಾಗಿದೆ. ಅಘೋರೇಶ್ವರ ದೇವಾಲಯದ ಮುಂದಿನ ವೃಷಭ ದೇವಾಲಯವು ಅತ್ಯಂತ ಶಿಲ್ಪಕಲಾ ಪೂರ್ಣವಾಗಿದೆ. ಇದು ಈ ರಾಜರ ಎರಡನೇ ರಾಜಧಾನಿ.

ಪುಟ ೨೯.

ಬಿದನೂರು:—ಇದು ಶಿವಮೊಗ್ಗಾ ಜಿಲ್ಲೆಯಲ್ಲಿದೆ. ಇದನ್ನು ಈಗ 'ನಗರ' ಎಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ಇದನ್ನು 'ವೇಣುಪುರ' ಎಂದು ಕವಿಗಳು ಕರೆದಿದ್ದಾರೆ. ಇಲ್ಲಿ ಹಿಂದಿನ ರಾಜರ ಅರಮನೆ ನಿವೇಶನವನ್ನು ನೋಡಬಹುದು. ಶ್ರೀ ನೀಲಕಂಠೇಶ್ವರ ದೇವಾಲಯ ಇಂದಿಗೂ ಕಂಗೊಳಿಸುತ್ತಿದೆ. ಇದರ ಗೋಪುರಕ್ಕೆ ಚಿನ್ನದ ಮುಲಾಮನ್ನು ಹಚ್ಚಿದ್ದಾರೆ. ಇಲ್ಲಿ 'ದೇವಗಂಗಾ' ಎಂಬ ಸರೋವರವಿದೆ. ಕೃಷ್ಣರಾಜಸಾಗರದ ಬೃಂದಾವನವು ಇದರ ಮಾದರಿಯಲ್ಲಿ ನಿರ್ಮಾಣವಾಗಿದೆ. ಕೆಳದಿ ರಾಜರ ಸೌಂದರ್ಯಾಭಿರುಚಿಯನ್ನು ಈ ದೇವಗಂಗಾ ನಿರ್ಮಾಣದಲ್ಲಿ ಕಾಣಬಹುದು. ಇದು ಕೆಳದಿಯ ರಾಣಿಯರು ಜಲಕ್ರೀಡೆ ಮಾಡುತ್ತಿದ್ದ ಸ್ಥಳವೆಂದು ಹೇಳುತ್ತಾರೆ. ಈ ಊರಿನಲ್ಲಿ ಒಂದು ದೊಡ್ಡ ಬಸವೇಶ್ವರ ದೇವಾಲಯವಿದೆ. ಬಿದನೂರು ಅಭ್ಯುದಯದ ಕಾಲದಲ್ಲಿ ಮಲೆನಾಡಿನ ಒಂದು ಮುಖ್ಯ ಪಟ್ಟಣವೆನಿಸಿತ್ತು. ಇಲ್ಲಿಗೆ ಪಾಶ್ಚಾತ್ಯರಾದ ಪೋರ್ಚುಗೀಸರೂ, ಇಂಗ್ಲೀಷರೂ, ಡಚ್ಚರೂ ಬಂದು ಹೋಗಿದ್ದಾರೆ. ಇದು ಮೆಣಸು ಮತ್ತು ಏಲಕ್ಕಿ ವ್ಯಾಪಾರಕ್ಕೆ ಕೇಂದ್ರ ಸ್ಥಾನವಾಗಿದ್ದಿತು. ಇಲ್ಲಿ ಭೂಮಿಯನ್ನು ಅಗೆದರೆ ನಾಯಕರ ಕಾಲದ 'ಇಕ್ಕೇರಿ ವರಹಗಳು' ಈಗಲೂ ಅಲ್ಲಲ್ಲಿ ಸಿಕ್ಕುತ್ತವೆ. ಅಭ್ಯುದಯದ ಕಾಲದಲ್ಲಿ ಈ ರಾಜಧಾನಿಯ ಸುತ್ತಲೂ ಒಂದು ಬಲವಾದ ಕೋಟೆಯಿತ್ತೆಂಬುದನ್ನು ನಾವು ಈಗಲೂ ಕಾಣಬಹುದು.

—ಪ್ರಕಾಶಕ.

ತಪ್ಪು—ಒಪ್ಪು

ಪುಟ–ಪಂಕ್ತಿ		ಅಶುದ್ಧ	ಶುದ್ಧ
೨೭	೧೮	ಕ್ರಿ. ಶ. ೧೫೬೬	ಕ್ರಿ. ಶ. ೧೫೪೬
೬೧	೭	ದ್ವಿತೀಯ ಪುತ್ರ	ಆ ದ್ವಿತೀಯ ಪುತ್ರ
೬೧	೧೩	ರಾಜಾರಾಪನು	ರಾಜಾರಾಮನು
೬೨	೭	ಧಾಳಿ	ದಾಳಿ
೬೧	೨೦	ಈಸದ್ದಿ	ಈ ಸುದ್ದಿ
೬೩	೪	ಧರ್ಮಾಧನೂ	ಧರ್ಮಾಂಧನೂ
೬೩	೮	ಪ್ರಭಲವಾದ	ಪ್ರಬಲವಾದ
೬೩	೧೫	ಬೀಜಾಪುರ	ಬಿಜಾಪುರ
೬೩	೧೬	ನಗರ	ರಾಜ್ಯ
೬೩	೨೬	ದ್ವೇಶಿಸುತ್ತಿದ್ದಾನೆ	ದ್ವೇಷಿಸುತ್ತಿದ್ದಾನೆ.
೬೪	೧೦	ತೋರುತ್ತೇವೆ	ಕೋರುತ್ತೇನೆ
೬೪	೧೯	ಸಾಮಧಾನಗಳಿಂದ	ಸಾಮದಾನಗಳಿಂದ
೬೮	೧೫	ಕೆಂಪಿಳಿದಿರುವ್ರುದು	ಕೆಂಪಿಡಿದಿರುವುದು
೬೮	೧೬	ಮಿಾಶೆಗಳನ್ನು	ಮಿಾಸೆಗಳನ್ನು
೬೦	೧೮	ಅನಂತಾರ	ಅಸಂತಾರ
೭೩	೧೬	ಮರ್ಧನಕ್ಕಾಗಿ	ಮರ್ದನಕ್ಕಾಗಿ
೭೪	೫	ಸಂತಾನದಪರನ್ನ	ಸಂತಾನದವರನ್ನು
೭೪	೧೬	ನನ್ಮಪ್ರಜೆ	ನಮ್ಮ ಪ್ರಜೆ
೭೪	೧೭	ಬುದ್ಥಿಯುನ್ನ	ಬುದ್ಧಿಯುನ್ನು
೭೪	೨೨	ಭಕ್ತಪರಾದೀನ	ಭಕ್ತಪರಾಧೀನ
೭೪	೨೩	ಸಚ್ಚಿದಾನಂದ	ಸಚ್ಚಿದಾನಂದ
೭೫	೩	ಅಶ್ಚರ್ಯ	ಆಶ್ಚರ್ಯ
೭೫	೧೨	ಸೋಮುಂಹ್ಕಯುನ	ಸೋಮಾಹ್ವಯುನ
೭೫	೧೩	ಶರಣ ಒನ	ಶರಣ ಜನ
೭೫	೧೬	ದಷ್ಟ	ದುಷ್ಟ
೭೫	೨೧	ಕೀರಕಲ	ಕೀರಕುಲ
೭೫	೨೩	ಚಿನ್ನಮ್ಮಾಜಿಯೆ	ಚೆನ್ನಮ್ಮಾಜಿಯೆ
೭೬	೧	ಜನಾರ್ಥನ	ಜನಾರ್ದನ

೭೬	೧೦	ಮಿಂಚನಂತೆ	ಮಿಂಚಿನಂತೆ
೭೬	೧೨	ಸೋರಿಸುತಿದೆ	ತೋರಿಸುತ್ತಿದೆ
೧೬	೧೭	ಬಸಪ್ಪ	ಬಸವಪ್ಪ
೭೬	೨೦	ಸ್ಫೂರ್ತಿ	ಸ್ಫೂರ್ತಿ
೭೬	೨೦	ಸೆರಿಸಿಕ್ಕಿದ	ಸೆರೆಸಿಕ್ಕಿದ
೭೬	೨೪	ಶತ್ರುಗಳತಿಂದ್ದ	ಶತ್ರುಗಳಂತಿದ್ದ
೭೬	೨೫	ಉಂಟಮಾಡುತ್ತದೆ	ಉಂಟು ಮಾಡುತ್ತದೆ
೭೭	೨	ಬಂದೆ	ಬಾಧೆ
೭೭	೭	ಹೊಣೆಗಾರಿಕೆ	ಹೊಣೆಗಾರಿಕೆ
೭೭	೧೪	ಧರ್ಮೊ॥ದ್ದಾರ	ಧರ್ಮೋದ್ಧಾರ
೭೭	೧೭	ವಿದ್ಯುಕ್ತವಾಗಿ	ವಿಧ್ಯುಕ್ತವಾಗಿ
೭೭	೨೫	ಬದಕಲಾರೆ	ಬದುಕಲಾರೆ
೭೮	೫	ರಾಜೋಚಿರ	ರಾಜೋಚಿತ
೭೦	೧೨	ಪ್ರಜೆಗಳನ್ನು	ಪ್ರಜೆಗಳನ್ನೂ
೭೮	೨೦	ಸಚ್ಚರಿತರೂ	ಸಚ್ಚರಿತ್ರರೂ
೭೮	೨೬	ನಾವು ನಂಬಿದ್ದೇವೆ	ನಾನು ನಂಬಿದ್ದೇನೆ
೭೯	೨	ಸುಖಗಳೇ	ಸುಖದುಃಖಗರಳೇ
೮೦	೧೭	ಬಯಿಸಿದಂತೆ	ಜಯಿಸದಂತೆ
೮೧	೧೧	ಸೇವೆಗಳನ್ನುಧರ್ಮಕಾರ್ಯಗಳನ್ನು	ಸೇವೆಗಳನ್ನೂ, ಧರ್ಮಕಾರ್ಯಗಳನ್ನೂ
೮೧	೧	ತೀರ್ಥಯಾರ್ತೆ	ತೀರ್ಥಯಾತ್ರೆ
೮೧	೧೨	ಕಾರ್ಯೋದ್ಯೋಗ	ಕಾರ್ಯೋದ್ಯೋಗ
೮॥	೧೫	ಹೆಂಗಸರಿಗೆ	ಹೆಂಗುಸರಿಗೆ
೮೧	೨೬	ಮೇಲ್ಕಂಡ	ಮೇಲೆ ಕಂಡ
೮೫	೧೫	ಕಕ್ಕೆ ಸುಬ್ರಮಣ್ಯ	ಕುಕ್ಕೆಸುಬ್ರಹ್ಮಣ್ಯ
೮೫	೧೬	ಮುಡಲಾರಿದೆ	ಮಾಡಲಾರದೆ
೮೭	೪	ಮೊಗಲಾಯುರಕೂಡ	ಮೊಗಲಾಯುರು ಕೂಡ
೯೧	೨೦	ಆಶ್ರಯುಮಂ	ಆಶ್ರಮುಮಂ
೯೨	೫	ಜಂಗಮಸ್ವಾಮಿಗಳೂ	ಜಂಗಮಸ್ವಾಮಿಗಳು
೯೨	೬	ಷೋಭೆಯುನ್ನುಂಟುಮಾಡಿ	ಕ್ಷೋಭೆಯುನ್ನುಂಟುಮಾಡಿ
೯೪	೬	ಅಪರವಾದ	ಅಪಾರವಾದ
೯೪	೧೪	ವೀರಮ್ಮಾಜಿಯುನ್ನು	ವೀರಮ್ಮಾಜಿಯುನ್ನೂ

೯೬	೧೪	ನಡಯಿತು	ನಡೆಯಿತು.
೯೭	೧೩	ಕವಿಗಳನ್ನು	ಗವಿಗಳನ್ನು
೯೭	೨೩	ಕಥೆ ಇತಿಹಾಸದಲ್ಲಿ	ಕಥೆ ಶ್ರವಣಬೆಳಗೊಳದ ಇತಿಹಾಸದಲ್ಲಿ
೯೮	೧೫	ಸಾಹೇಬರು	ಸಾಹೇಬರಲ್ಲಿ
೯೮	೧೭	ನಗರಾರಬಿ	ನಗರಾರಂಭ
೯೮	೨೪	ಬಟ್ಟಿವಾಗಿ	ಬಿಟ್ಟಿವಾಗಿ
೯೯	೧೪	ಇದರಿಂದ ಈ	ಇದರಿಂದ ಅಲ್ಲಿ
೯೯	೧೮	ಕಾಳೀಕೋಟೆ	ತಾಳೀಕೋಟೆ
೧೦೦	೧೮	ರಾಣೀವಿಲಾಸ	ವಾಣೀವಿಲಾಸ
೧೦೦	೨೦	ಸದಾಚರಣೆ	ಸದಾಚರಣೆ
೧೦೦	೨೪	ಆಗಿದ್ದಾರೆಂಬುದನ್ನು	ಆಗಿದ್ದರೆಂಬುದನ್ನು
೧೦೧	೮	ರಾಣಿಯುು	ರಾಣಿಯಲ್ಲಿ
೧೦೧	೮	ಹಿಯುರ	ಹಿರಿಯುರ
೧೦೧	೧೦	ಚರಿತ್ರೆಯುು	ಚರಿತ್ರೆಯು
೧೦೧	೧೧	ದೇಹಾಬಿಮಾನ	ದೇಹಾಭಿಮಾನ
೧೦೧	೧೧	ಸನ್ಯಾಸಿಯುಂತೆ	ಸಂನ್ಯಾಸಿಯುಂತೆ
೧೦೧	೧೨	ಕಾಮುಕ್ರೋದಗಳನ್ನು	ಕಾಮುಕ್ರೋಧಗಳನ್ನು
೧೦೧	೨೫	ಮೇಲ್ಕಂಡ	ಮೇಲೆಕಂಡ
೧೬೨	೩	ರಾಜಠು	ರಾಜರು

ಪ್ರಕಾಶಕರ ಮಾತುಗಳಲ್ಲಿ

೧	೫	ಪ್ರಕಟಸಿದ್ಥೇವೆ	ಪ್ರಕಟಸಿದ್ದೇವೆ

ಬಿನ್ನಹದಲ್ಲಿ

೨	೫	ವ್ಯವಸ್ಥಾಪಕಗೆ	ವ್ಯವಸ್ಥಾಪಕರಿಗೆ
೩	೧೪	ಕುಂತುದಿಂದ	ಕುರಿತುದಿಂದ
೪	೮	ಸಾಮಾಜ್ಯದ	ಸಾಮ್ರಾಜ್ಯದ
೪	೧೯	ಶಿವತತ್ವ, ರತ್ನಾಕರ	ಶಿವತತ್ವ ರತ್ನಾಕರ
೮	೫	ಕಡೆಯುವರಿಗೆ	ಕಡೆಯುವರೆಗೆ

ಈ ಗ್ರಂಥವು ಅವಸರದಲ್ಲಿ ಅಚ್ಚಾದ ನಿಮಿತ್ತವಾಗಿ ಮೇಲೆ ಕಂಡಂತೆ ಕೆಲವು ಅಶುದ್ಧಗಳು ಮುದ್ರಣವಾಗಲು ಕಾರಣವಾಗಿದೆ. ವಾಚಕರು ದಯಮಾಡಿ ಇದನ್ನು ತಿದ್ದಿಕೊಂಡು ಓದಬೇಕಾಗಿ ಬಿನ್ನಹ ಮುಂದಿನ ಮುದ್ರಣದಲ್ಲಿ ಈ ಬಗ್ಗೆ ಜಾಗ್ರತಿ ವಹಿಸಲಾಗುವುದು. —ಪ್ರಕಾಶಕ